1948-2022
ಅಮೃತ ಮಹೋತ್ಸವ ವರ್ಷ

# ದೆಹಲಿ ಕರ್ನಾಟಕ ಸಂಘದ ಅಭಿಮತ




ಹಿರಿಯ ರಂಗ ಕಲಾವಿದ, ಜನಪ್ರಿಯ ಕನ್ನಡ ಚಲನಚಿತ್ರ ನಟರಾದ ಶ್ರೀ ದೊಡ್ಡಣ್ಣನವರು ದೆಹಲಿ ಕರ್ನಾಟಕ ಸಂಘದಲ್ಲಿ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂದರ್ಭ ಅವರನ್ನು ಅಭಿನಂದಿಸಿದ ಕ್ಷಣ



**76ನೇ ಭಾರತದ ಸ್ವಾತಂತ್ರ್ಯ ವರ್ಷಾಚರಣೆಯ ಹಾರ್ದಿಕ ಶುಭಾಶಯಗಳು**
ದೆಹಲಿ ಕರ್ನಾಟಕ ಸಂಘದ ಅಮೃತ ಕಾಲದಲ್ಲಿ ಭಾರತದ ಸ್ವಾತಂತ್ರ್ಯೋತ್ಸವವನ್ನು ಸಂಘದ ಆವರಣದಲ್ಲಿ ಧ್ವಜಾರೋಹಣ ಮಾಡಿ ರಾಷ್ಟ್ರಗೀತೆ ಹಾಡುವುದರೊಂದಿಗೆ ಆಚರಣೆ ಮಾಡಿ ಸಂಭ್ರಮಿಸಿದ ದೃಶ್ಯ



ಸಂಘದ ಸಭಾಂಗಣದಲ್ಲಿ ಹನುಮಗಿರಿ ಶ್ರೀಕೋದಂಡರಾಮ ಕೃಪಾ ಪೋಷಿತ, ಯಕ್ಷಗಾನ ಮಂಡಳಿ ಕಲಾವಿದರಿಂದ ಪ್ರಸ್ತುತಿಗೊಂಡ 'ಶುಕ್ರನಂದನೆ' ಯಕ್ಷಗಾನ ಪ್ರಸಂಗ

# ರಾಷ್ಟ್ರ ರಾಜಧಾನಿಯಲ್ಲಿ ಕನ್ನಡ ಸೇವೆಗೆ ಶ್ರೀ ಸಂತೋಷ ಜೆ ಅವರಿಗೆ ಮಾತೃಭೂಮಿ ಯುವಕರ ಸಂಘ ಬೆಳ್ಳಿಹಬ್ಬ ಸಮಿತಿಯಿಂದ ರಾಷ್ಟ್ರಪ್ರಶಸ್ತಿ ಪುರಸ್ಕಾರ

ಮೂಲತಃ ಕೃಷಿ ಕುಟುಂಬದ ಹಾಸನ ಜಿಲ್ಲೆಯವರಾದ ಶ್ರೀ ಸಂತೋಷ ಜೆ ಅವರು 2005ರಿಂದ ದೆಹಲಿಯಲ್ಲಿ ನೆಲಸಿದ್ದಾರೆ. ಗುರುಗ್ರಾಮದ ಪ್ರಸಿದ್ಧ ಹೋಂಡಾ ದ್ವಿಚಕ್ರ ತಯಾರಿ ಮಾಡುವ ಕಂಪನಿಯಲ್ಲಿ ಸೇವೆ ಸಲ್ಲಿಸುತ್ತಿರುವ ಇವರಿಗೆ ಕನ್ನಡ ನಾಡು, ನುಡಿ ಹಾಗೂ ಸಂಸ್ಕೃತಿ ಬಗ್ಗೆ ಅಪಾರ ಕಾಳಜಿ. 2005ರ ಸಮಯದಲ್ಲಿ ಗುರುಗಾಂವ್‌ನಲ್ಲಿ ವಾಸವಾಗಿದ್ದ ಯುವಕರನ್ನು ಗುರುಗಾಂವ್ ಕನ್ನಡ ಸಂಘಕ್ಕೆ ಕರೆತಂದು ಸಂಘಟಿಸುವ ಮೂಲಕ ಸಂಘದ ಏಳಿಗೆಯಲ್ಲಿ ಶ್ರಮಿಸಿದ್ದಾರೆ. ಗುರುಗಾಂವ್ ಕನ್ನಡ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ನಾಡಿನ ಕಲಾವಿದರು ಮತ್ತು ಸ್ಥಳೀಯ ಕಲಾವಿದರಿಂದ ವಿವಿಧ ಬಗೆಯ ನಾಡಿನ ಕಲೆಗಳನ್ನು ಸಂಘದ ವೇದಿಕೆಯಲ್ಲಿ ಪ್ರದರ್ಶಿಸುವ ಮೂಲಕ ಕನ್ನಡ ಸೇವೆಯನ್ನು ಮಾಡಿದ್ದಾರೆ. ಗುರುಗಾಂವ್ ಕನ್ನಡ ಸಂಘಕ್ಕೆ ಸೇವೆ ಸಲ್ಲಿಸಿದ ಹಿರಿಯ ಕನ್ನಡಿಗರಿಗೆ 'ಗುರುಗಾಂವ್ ಕನ್ನಡ ಸೇವಾ' ಪ್ರಶಸ್ತಿಯನ್ನು ಕನ್ನಡ ರಾಜ್ಯೋತ್ಸವಂದು ನೀಡುವ ಪ್ರಕ್ರಿಯೆಯನ್ನು ಇವರು ಪ್ರಧಾನ ಕಾರ್ಯದರ್ಶಿಯಾಗಿದ್ದ ಕಾರ್ಯಕಾಲದಲ್ಲಿ ಆರಂಭಿಸಿದರು. 2017 ರಿಂದ ಇಲ್ಲಿಯವರೆಗೆ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯನಾಗಿ ಸಕ್ರಿಯವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ದೆಹಲಿಯಲ್ಲಿರುವ ಹಿರಿಯರ ಮಾರ್ಗದರ್ಶನದಲ್ಲಿ ಯುವ ಪೀಳಿಗೆಯ ಕಣ್ಮಣಿಯಾಗಿ ಸೇವೆ ಸಲ್ಲಿಸುತ್ತಿರುವ ಇವರು ದೆಹಲಿ ಕರ್ನಾಟಕ ಸಂಘದ ಕ್ರೀಡಾ ಸಮಿತಿ, ಪಿಕ್‌ನಿಕ್ ಸಮಿತಿ, ಸಂಚಾಲಕರಾಗಿ ಮತ್ತು ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ವರ್ಷದ ಐತಿಹಾಸಿಕ ಸ್ಮರಣ ಸಂಚಿಕೆ ಸಮಿತಿಯ ಸಂಚಾಲಕರಾಗಿ ಕಾರ್ಯನಿರ್ವಹಿಸಿದ್ದಾರೆ. ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಮಾರೋಪ ಸಮಾರಂಭದ ಕಾರ್ಯಕ್ರಮಕ್ಕೆ ಸುಮಾರು 1000ಕ್ಕೂ ಹೆಚ್ಚು ಕರ್ನಾಟಕದ ಎಲ್ಲಾ ಜಿಲ್ಲೆಯ ಕಲಾವಿದರ ಕಲೆಯನ್ನು ಮಾನ್ಯ ಪ್ರಧಾನ ಮಂತ್ರಿಗಳ ಸಮ್ಮುಖದಲ್ಲಿ ನಾಡಿನ ಸಂಸ್ಕೃತಿ ಬಿಂಬಿಸುವ ಉಸ್ತುವಾರಿಯನ್ನು ವಹಿಸಿಕೊಂಡು ಕಲೆಯನ್ನು ಪ್ರದರ್ಶಿಸುವ ಮೂಲಕ ನಾಡಿನ ಕಲಾವಿದರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. 2019ರ ಸಮಯದಲ್ಲಿ ದೆಹಲಿ ಕರ್ನಾಟಕ ಸಂಘದ ಕ್ರೀಡಾ ಸಮಿತಿಯ ಸಂಚಾಲಕರಾಗಿದ್ದ ಸಮಯದಲ್ಲಿ ದೆಹಲಿ ಕರ್ನಾಟಕ ಸಂಘದ ಕ್ರಿಕೆಟ್ ಪಂದ್ಯಾವಳಿಯಲ್ಲಿ 15 ತಂಡಗಳು ಹಾಗೂ ಅಮೃತ ಮಹೋತ್ಸವ ವರ್ಷದ 2022ರ ಕ್ರಿಕೆಟ್ ಪಂದ್ಯಾವಳಿಯಲ್ಲಿ 21 ತಂಡಗಳು ಭಾಗವಹಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಇವರ ಕಲಾ ಸೇವೆಯನ್ನು ಗುರುತಿಸಿ ರಂಗವಿಜಯ ಕಲಾ ಸಂಸ್ಥೆ 2021 ರ ವರ್ಷದ ಅಮೃತ ಕನ್ನಡಿಗ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಹೊರನಾಡಿನ ದೆಹಲಿ ಘಟಕದ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವ ಇವರಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕರ್ನಾಟಕ ಸರ್ಕಾರ ಇವರ ಆಶ್ರಯದಲ್ಲಿ ಮಾತೃಭೂಮಿ ಯುವಕರ ಸಂಘ ಹೊರನಾಡಿನಲ್ಲಿ ಮಾಡುತ್ತಿರುವ ಕನ್ನಡ ಸೇವೆಯನ್ನು ಗುರುತಿಸಿ, ಮಾತೃಭೂಮಿ ಯುವಕರ ಸಂಘ ಬೆಳ್ಳಿಹಬ್ಬ ಸಮಿತಿ ರಾಷ್ಟ್ರ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇದು ದೆಹಲಿ ಕನ್ನಡಿಗರಿಗೆಲ್ಲ ಸಿಕ್ಕ ಗೌರವ ಎಂದು ಭಾವಿಸುತ್ತಾ ಇವರು ದೆಹಲಿ ಹಿರಿಯ ಕನ್ನಡಿಗರ ಮಾರ್ಗದರ್ಶನ ಹಾಗೂ ಯುವ ಪೀಳಿಗೆ ಕಣ್ಮಣಿಯಾಗಿ ಕನ್ನಡ ಸೇವೆಯನ್ನು ಮಾಡುತ್ತಿರುವುದು ನಮ್ಮಂತ ಯುವಕರಿಗೆಲ್ಲ ಸ್ಫೂರ್ತಿ. ಶ್ರೀ ಸಂತೋಷ ಜೆ. ಅವರಿಗೆ ಹಾರ್ದಿಕ ಅಭಿನಂದನೆಗಳು.■


**ಶ್ರೀ ಅರುಣ್ ರಾಜ್,** ನಿರ್ದೇಶಕರು
ಕ.ರಾ.ಮ.ಸಾ.ಪ. ಕೇಂದ್ರ ಘಟಕ



ಶ್ರೀ ಸಂತೋಷ ಜೆ ಅವರ ಅನುಪಸ್ಥಿತಿಯಲ್ಲಿ ಅವರ ತೀರ್ಥರೂಪರಾದ ಶ್ರೀ ಜವರೇಗೌಡ ಅವರು ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವ ಕ್ಷಣ








ದೆಹಲಿ ಕನ್ನಡಿಗ ಶ್ರೀ ನವಯುಗ್ ಶ್ರೀರಾಮ್ ತನ್ನ ಇಂಜಿನಿಯರಿಂಗ್ ಪದವಿಯ ಎಂಟನೇ ಸೆಮಿಸ್ಟರ್‌ನಲ್ಲಿ ತಮ್ಮ ಪ್ರಾಜೆಕ್ಟ್ ಸಲುವಾಗಿ ಪ್ರಾಧ್ಯಾಪಕರ ಮಾರ್ಗದರ್ಶನದಲ್ಲಿ ತನ್ನ ಸಹಪಾಠಿಯ ಜೊತೆಗೂಡಿ ತಯಾರಿಸಿದ ಪ್ರಬಂಧ ಲೇಖನ ಗರ್ಭಿಣಿಯರಲ್ಲಿ ಪೌಷ್ಠಿಕಾಂಶದ ದತ್ತಾಂಶವನ್ನು ಕೃತಕ ಬುದ್ಧಿಮತ್ತೆಯಾದ ಸ್ವಯಂಚಾಲಿತ ಯಂತ್ರಗಳ ಅಲ್ಗಾರಿದಮ್‌ಗಳ ಮೂಲಕ ಕಂಡು ಹಿಡಿಯುವಿಕೆ (Nutrition Detection During Gestation Period using ML Algorithms) ಅಂತರರಾಷ್ಟ್ರೀಯ ಸೆಮಿನಾರ್‌ನಲ್ಲಿ ಮಂಡನೆಯಾಗಲು ಆಯ್ಕೆಯಾಗಿ ಈ ಜೂನ್ ತಿಂಗಳಲ್ಲಿ ಅಂತರ್ಜಾಲದ ಈ ವಿಳಾಸದಲ್ಲಿ https://thegrenze.com/index.php?display=page&view=journaldetails&id=8 (Select year 2023 volume 9 issue 2) ಪ್ರಕಟನೆಗೊಂಡಿದೆ.

ಇವರಿಗೆ ದೆಹಲಿ ಕರ್ನಾಟಕ ಸಂಘದ ಸದಸ್ಯರ ಪರವಾಗಿ ಅಭಿಮತ ಅಭಿನಂದನೆ ತಿಳಿಸುತ್ತಿದೆ.

ಅಭಿಮತ
ದೆಹಲಿ ಕರ್ನಾಟಕ ಸಂಘದ
ಸಂಪುಟ 33 । ಸಂಚಿಕೆ 12
ಸೆಪ್ಟೆಂಬರ್ 2023

**ಅಭಿಮತ ಸಂಪಾದಕ ಮಂಡಳಿ**

ಪ್ರಧಾನ ಸಂಪಾದಕ
ಕೆ.ಎಸ್. ಮೂರ್ತಿ
ಸದಸ್ಯರು
ಎಸ್. ಕೃಷ್ಣ ಭಟ್
ಯಲ್ಲಾಲಿಂಗ ಕೊಪ್ಪದ
ತಿಮ್ಮಪ್ಪ ಜಿ.ಆರ್.
ಎಸ್. ರಮೇಶ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷರು
ಸಿ.ಎಂ. ನಾಗರಾಜ
ಉಪಾಧ್ಯಕ್ಷರು
ಡಾ. ಎಂ.ಎಸ್. ಶಶಿ ಕುಮಾರ್
ಪೂಜಾ ಪಿ. ರಾವ್
ಪ್ರಧಾನ ಕಾರ್ಯದರ್ಶಿ
ಆರ್. ರೇಣುಕುಮಾರ್
ಕೋಶಾಧಿಕಾರಿ
ರಾಧಾಕೃಷ್ಣ
ಜಂಟಿ ಕಾರ್ಯದರ್ಶಿಗಳು
ಬಿ. ನಾರಾಯಣ
ಸುಮಿತಾ ಮುರಗೋಡ
ಸಮಿತಿ ಸದಸ್ಯರು
ಪ್ರಭಾಕರ ಮಡ್ಡಿತೋಟ್
ಶಿವಪ್ಪ ಎಂ
ಮಾಲಿನಿ ಪ್ರಹ್ಲಾದ್
ಕೆ.ಎಸ್. ಮೂರ್ತಿ
ನವೀನ್ ಕುಮಾರ್ ವಿ.
ಸವಿತಾ ನೆಲ್ಲಿ
ಅಶ್ವಿನಿ ಬಿ.ಎಸ್.
ಸಂತೋಷ ಜೆ
ಎಸ್. ಕೃಷ್ಣ ಭಟ್
ವಸಂತ ಕುಮಾರ್ ಎಂ.ಬಿ.

**ಕಾವಲು ಸಮಿತಿ**

ಅನಂತರಾಮ ಅರಳಿ
ಸಂಜೀವ ದೇಶಪಾಂಡೆ
ಐ. ಶಂಭುಲಿಂಗಪ್ಪ

## ಸಂಪಾದಕೀಯ ಮನದಾಳದಿಂದ...

### ಅಮೃತ ಕಾಲದಲ್ಲಿ ಸಂಭ್ರಮಿಸಿದ 76ನೇ ಸ್ವಾತಂತ್ರ್ಯ ವರ್ಷಾಚರಣೆ, ಸಾಕಾರಗೊಳ್ಳಲಿ ಜಿ-20 ಶೃಂಗಸಭೆಯ ವಿಜೃಂಭಣೆ

### ಚಂದಿರನ ಅಂಗಳದಲ್ಲಿ ಚಂದ್ರಯಾನ-3ರ ವಿಕ್ರಮ್-ಪ್ರಾಗ್ಯಾನ್ ಜೋಡಿಯ ನಡೆ, ಹೊರಟಿದೆ ಆದಿತ್ಯ ಎಲ್1 ಸೂರ್ಯನ ಕಡೆ

ಆತ್ಮೀಯ ಬಂಧುಗಳೇ,

ದೇಶದ ಆಜಾದಿಕಾ ಅಮೃತ್ ಮಹೋತ್ಸವ್ ಮತ್ತು ನಮ್ಮ ಸಂಘದ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ಕಳೆದ ಆಗಸ್ಟ್ 15 ರಂದು ದೇಶಭಕ್ತಿಯೊಂದಿಗೆ ಸಂಭ್ರಮದಿಂದ ಆಚರಿಸಿದ 77ನೇ ಸ್ವಾತಂತ್ರ್ಯ ದಿನಾಚರಣೆಯ ಹಾರ್ದಿಕ ಶುಭಾಶಯಗಳನ್ನು ನಿಮಗೆಲ್ಲಾ ತಿಳಿಸಲು ನನಗೆ ಬಹಳ ಸಂತೋಷವಾಗುತ್ತಿದೆ.

ಹಾಗೇನೇ, ಈ ಅಮೃತ ಕಾರ್ಯಕಾಲದಲ್ಲಿ ಚಂದ್ರಯಾನ–3ರ ಪರಿಶೋಧನ ಅಭಿಯಾನ ಸಾಕಾರಗೊಂಡು ವಿಕ್ರಮ್ ಲ್ಯಾಂಡರ್‌ನ ಚಂದ್ರನ ದಕ್ಷಿಣ ಧ್ರುವದ ಮೇಲೆ ವಿಶ್ವದಲ್ಲೇ ಪ್ರಪ್ರಥಮ ಬಾರಿ ಅಭೂತಪೂರ್ವವಾಗಿ ಯಶಸ್ವಿ ಇಳಿಯುವಿಕೆ ಮತ್ತು ಪ್ರಗ್ಯಾನ್ ರೋವರ್‌ನ ಚಂದ್ರನ ನೆಲದ ಮೇಲೆ ಲವಲವಿಕೆಯ ಓಡಾಡುವಿಕೆಯಲ್ಲಿ ಪ್ರಮುಖ ಭೂಮಿಕೆ ನಿರ್ವಹಿಸಿದ ಇಸ್ರೋ ಸಂಸ್ಥೆಯ ಅಧ್ಯಕ್ಷ ಡಾ. ಎಸ್. ಸೋಮನಾಥ್ ಮತ್ತು ಇದಕ್ಕೆ ಕಾರಣೀಭೂತರಾದ ಸಮಸ್ತ ವಿಜ್ಞಾನಿಗಳಿಗೆ, ಶ್ರಮಿಸಿದ ಎಲ್ಲರಿಗೂ, ರಾಜ್ಯದ, ದೇಶದ 140 ಕೋಟಿ ಜನತೆಗೆ ಹೃದಯಪೂರ್ವಕ ಅಭಿನಂದನೆಗಳು. ಮುಂದುವರಿದು ಸೂರ್ಯನ ಕುರಿತು ಅಧ್ಯಯನ ಮಾಡಲು ಬಾಹ್ಯಾಕಾಶಕ್ಕೆ ಹೊರಟಿರುವ 'ಆದಿತ್ಯ L1' ಉಪಗ್ರಹವನ್ನು ಹೊತ್ತ ಪಿ.ಎಸ್.ಎಲ್.ವಿ.–ಸಿ57 ರಾಕೇಟ್ ಇತ್ತೀಚೆಗೆ ಶ್ರೀಹರಿಕೋಟಾದಿಂದ ಯಶಸ್ವಿ ಉಡಾವಣೆಯಾಗಿರುವುದು ದೇಶದ ವಿಜ್ಞಾನಿಗಳ ಮತ್ತೊಂದು ಹೆಗ್ಗಳಿಕೆಯ ಸಾಧನೆ. ಮುಂದಿನ ಇಸ್ರೋನ ಮಂಗಳಯಾನ–2, ಶುಕ್ರಯಾನ ಮತ್ತು ಮಾನವ ಸಹಿತ ಗಗನಯಾನ ಅಭಿಯಾನಗಳು ಯೋಜಿತ ಉದ್ದೇಶಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಲೆಂದು ಶುಭ ಕೋರುತ್ತೇನೆ.

ದೇಶಕ್ಕೆ ಸ್ವಾತಂತ್ರ್ಯ ಬಂದು 76 ವರ್ಷಗಳು ತುಂಬಿದ್ದು, ಭವ್ಯ ಭಾರತದ ಪ್ರಜೆಗಳಾಗಿ ನಾವಿಂದು ನಿರ್ಭೀತರಾಗಿ ಸುಖಮಯ ಜೀವನ ನಡೆಸುತ್ತಿರುವ ಹಿಂದೆ, ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರೊಂದಿಗೆ ಹೋರಾಡಿ, ತಮ್ಮ ಪ್ರಾಣವನ್ನು ಬಲಿದಾನ ಮಾಡಿದ ಎಲ್ಲಾ ಹೋರಾಟಗಾರರನ್ನು, ವೀರ ವನಿತೆಯರನ್ನು ಸ್ಮರಿಸುವುದು ಮತ್ತು ಅವರುಗಳಿಗೆ ಕೃತಜ್ಞತೆಗಳನ್ನು ಅರ್ಪಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಭಾರತದ ಸ್ವಾತಂತ್ರ ಸಂಗ್ರಾಮದ ಮೊದಲ ಕಹಳೆ ಊದಿದ ಶ್ರೇಯ ನಮ್ಮ ಕನ್ನಡನಾಡಿನ ವೀರ ನಾರಿ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಅವರ ಸೇನಾಧಿಪತಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರಿಗೆ ಸಲ್ಲಲೇಬೇಕು. ಇವರಲ್ಲದೇ ಕರ್ನಾಟಕದ ಎಸ್. ಎಸ್. ಹರ್ಡೀಕರ್, ಟಿ. ಸುಬ್ರಹ್ಮಣ್ಯಂ, ಕಮಲಾದೇವಿ ಚಟ್ಟೋಪಾಧ್ಯಾಯ, ನಿಟ್ಟೂರು ಶ್ರೀನಿವಾಸರಾವ್, ಕೆ.ಜಿ. ಗೋಖಲೆ, ಕಾರ್ನಾಡ್ ಸದಾಶಿವರಾವ್, ಶ್ರೀನಿವಾಸರಾವ್ ಕೌಜಲಗಿ ಮೊದಲಾದ ಸ್ವಾತಂತ್ರ ಹೋರಾಟಗಾರರ ಕೊಡುಗೆ ಸ್ಮರಣಾರ್ಹ. ರಾಷ್ಟ್ರಪಿತ ಮಹಾತ್ಮಗಾಂಧಿ ನೇತೃತ್ವದಲ್ಲಿ ಜವಾಹರಲಾಲ್ ನೆಹರು, ಸರ್ದಾರ್ ಪಟೇಲ್, ಸುಭಾಷ್‌ಚಂದ್ರ ಬೋಸ್, ಬಾಲಗಂಗಾಧರತಿಲಕ್, ಭಗತ್‌ಸಿಂಗ್, ಮಂಗಲ್ ಪಾಂಡೆ, ಸುಖದೇವ್, ಚಂದ್ರಶೇಖರ್ ಆಜಾದ್, ವೀರ ಸಾವರ್ಕರ್, ದಾದಾಬಾಯಿ ನವರೋಜಿ, ತಾತ್ಯಾ ಟೋಪೆ, ಲಾಲಾಲಜಪತರಾಯ್, ಬಿಪಿನ್ ಚಂದ್ರಪಾಲ್, ಚಿತ್ತರಂಜನ್ ದಾಸ್, ಲಾಲ್ ಬಹದ್ದೂರ್ ಶಾಸ್ತ್ರಿ, ಸಿ. ರಾಜಗೋಪಾಲಾಚಾರಿ ಮುಂತಾದ ಮಹನೀಯರ ಹಾಗು ಝಾನ್ಸಿರಾಣಿ ಲಕ್ಷ್ಮೀಬಾಯಿ, ಅನಿಬೆಸೆಂಟ್, ಕಸ್ತೂರಬಾ ಗಾಂಧಿ, ಸರೋಜಿನಿ ನಾಯ್ಡುರಂತಹ ವೀರವನಿತೆಯ ಹೋರಾಟ ಬಲಿದಾನದ ಫಲಶೃತಿಯಾಗಿ ಭಾರತವು ಬ್ರಿಟಿಷ್ ಪ್ರಾಬಲ್ಯದಿಂದ 1947ರ ಆ. 15ರಂದು ಮುಕ್ತವಾಯಿತು. ಇದು 1857ರ ಭಾರತದ ಪ್ರಥಮ ಸ್ವಾತಂತ್ರ್ಯ ಸಮರದ ಐತಿಹಾಸಿಕ ದಂಗೆ ಸೇರಿದಂತೆ ಬ್ರಿಟಿಷರ ಆಳ್ವಿಕೆಯ ಸಮಯದಲ್ಲಿ ತುಂಬಿದ್ದ ಹಲವಾರು ಚಳುವಳಿಗಳು ಮತ್ತು ಹೋರಾಟಗಳ ಪರಾಕಾಷ್ಠೆಯಾಗಿದೆ. ಈ ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸುತ್ತಾ, ಅವರ ತ್ಯಾಗ, ಬಲಿದಾನದಿಂದ ನಮಗೆ ದೊರಕಿರುವ ಈ ಅತ್ಯಮೂಲ್ಯ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ರಾಜ್ಯದ, ದೇಶದ ಪ್ರಗತಿಯಲ್ಲಿ ಕೈಜೋಡಿಸುವುದು ಈಗಿನ ಪೀಳಿಗೆಯ ನಮ್ಮೆಲ್ಲರ ಗುರುತರ ಜವಾಬ್ದಾರಿ, ಕರ್ತವ್ಯ ಮತ್ತು ಹೊಣೆಗಾರಿಕೆಯಾಗಿದೆ.

ಇನ್ನು, ಈ ಅಮೃತ ಕಾರ್ಯಕಾಲದಲ್ಲಿಯೇ, ದೇಶದ ಯಶಸ್ವಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಘನ ನೇತೃತ್ವದಲ್ಲಿ ನಮ್ಮ ಭಾರತ ದೇಶಕ್ಕೆ 2022ರಲ್ಲಿ ಜಿ–20 ರಾಷ್ಟ್ರ ಸಮೂಹದ ಅಧ್ಯಕ್ಷತೆ ಸಿಕ್ಕಿರುವುದು ನಮ್ಮೆಲ್ಲರಿಗೆ ಹೆಮ್ಮೆ ಮತ್ತು ಗರ್ವದ ವಿಷಯ. ಕಳೆದ ಒಂದು ವರ್ಷದಲ್ಲಿ ದೇಶದ ನಾನಾ ನಗರಗಳಲ್ಲಿ ಜಿ–20 ರಾಷ್ಟ್ರಗಳ ಪ್ರತಿನಿಧಿಗಳು ವಿವಿಧ ವಿಷಯಗಳ ಕುರಿತು ನಡೆದ ಸಭೆಗಳಲ್ಲಿ ಭಾಗವಹಿಸಿದ್ದು ವಿಶೇಷತೆಯಾಗಿದೆ. ಭಾರತದ ಜಿ–20ಯ ಅಧ್ಯಕ್ಷತೆಯಲ್ಲಿ **'ವಸುದೈವ ಕುಟುಂಬಕಂ'** 'One Earth, One Family, One Future' ಥೀಮ್‌ನೊಂದಿಗೆ ಇದೇ ಸೆ. 9 ಮತ್ತು 10 ರಂದು ನವದೆಹಲಿಯಲ್ಲಿ ನಡೆಯುವ ಜಿ–20 ಶೃಂಗಸಭೆಗೆ ಆಗಮಿಸುತ್ತಿರುವ ಜಿ–20 ದೇಶಗಳ ನಾಯಕರ ಭಾಗವಹಿಸುವಿಕೆಯೊಂದಿಗೆ ಶೃಂಗ ಸಭೆಯು ಅತ್ಯಂತ ವಿಜೃಂಭಣೆಯಿಂದ ಸಂಪನ್ನವಾಗಲಿದೆ, ನಮ್ಮ ದೇಶದ ಹಿರಿಮೆಯನ್ನು ಇನ್ನಷ್ಟು ಹೆಚ್ಚಿಸಲಿದೆ. ಈ ಐತಿಹಾಸಿಕ ಕಾರ್ಯಕ್ರಮಕ್ಕೆ ನವದೆಹಲಿ ಮಹಾನಗರ ಸಂಪೂರ್ಣವಾಗಿ ಸಜ್ಜಾಗಿದ್ದು, ಶೃಂಗಸಭೆ ಅಭೂತಪೂರ್ವ ಯಶಸ್ಸು ಕಾಣಲೆಂದು ಶುಭ ಹಾರೈಸುತ್ತೇನೆ.

ಕಳೆದ ಸಂಚಿಕೆಯಲ್ಲಿ ನಾವು ಆಹ್ವಾನಿಸಿದಂತೆ, ಸ್ಥಳೀಯ ಕನ್ನಡಿಗರಿಂದ ಉತ್ತಮ ಲೇಖನಗಳು ನಮಗೆ ಬರಲಾಂಭಿಸಿವೆ. ಇವುಗಳಲ್ಲಿ ಕೆಲವನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. ಹಾಗೇನೇ, ಶಿಕ್ಷಕರ ದಿನಾಚರಣೆ ಪ್ರಯುಕ್ತ ಡಾ. ಎಸ್. ರಾಧಾಕೃಷ್ಣನ್ ಕುರಿತು ಲೇಖನ, ಜಿ20 ಮತ್ತು ಚಂದ್ರಯಾನ ಕುರಿತು ವಿಶೇಷ ಲೇಖನಗಳು, 'ಪ್ರಕೃತಿ' ಬಗ್ಗೆ ಡಾ. ಭೀಮಭಟ್ಟರ ವೈದ್ಯಕೀಯ ಲೇಖನ, ಸಂಘದಲ್ಲಿ ಕಳೆದ ತಿಂಗಳು ನಡೆದ ಸ್ವಾತಂತ್ರ್ಯ ದಿನಾಚರಣೆ, ಸಂಗೊಳ್ಳಿ ರಾಯಣ್ಣ ಜಯಂತೋತ್ಸವ ಕಾರ್ಯಕ್ರಮ, ಹನುಮಗಿರಿ ಮೇಳದವರಿಂದ ಪ್ರಸ್ತುತಿಯಾದ ಆಹೋರಾತ್ರಿ **'ಶುಕ್ರನಂದನೆ'** ಯಕ್ಷಗಾನ, ಒಳಾಂಗಣ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು, ಹಿರಿಯ ರಂಗಭೂಮಿ ಕಲಾವಿದ, ಸುಪ್ರಸಿದ್ಧ ಕನ್ನಡ ಚಲನಚಿತ್ರ ನಟ **ಶ್ರೀ ದೊಡ್ಡಣ್ಣ**ನವರೊಂದಿಗೆ ಸಂವಾದ ಮುಂತಾದ ಕಾರ್ಯಕ್ರಮಗಳ ವರದಿ ಹಾಗೂ ಸ್ಥಳೀಯ ಇತರ ಸಂಘ ಸಂಸ್ಥೆಗಳ ಕಾರ್ಯಕ್ರಮಗಳ ವಿವರಗಳೊಂದಿಗೆ ನಿಮ್ಮ ಕೈ ಸೇರುತ್ತಿರುವ ಈ ತಿಂಗಳ ಅಭಿಮತ ಸಂಚಿಕೆ, ಎಲ್ಲಾ ಓದುಗ ಬಂಧುಗಳಿಗೆ ಇಷ್ಟವಾಗಬಹುದೆಂದು ನನ್ನ ಭಾವನೆ.

ಶಿಕ್ಷಕರ ದಿನಾಚರಣೆಯ ಶುಭಾಶಯಗಳನ್ನು ಮತ್ತು ವಂದನೆಗಳನ್ನು ನಮಗೆ ವಿದ್ಯಾಭ್ಯಾಸದ ನಾನಾ ಘಟ್ಟಗಳಲ್ಲಿ ಜ್ಞಾನಾರ್ಜನೆ ಮಾಡಿದ ಎಲ್ಲಾ ಶಿಕ್ಷಕರಿಗೂ, ದೆಹಲಿ ಕನ್ನಡ ಶಾಲೆಯ ಶಿಕ್ಷಕ ಶಿಕ್ಷಕಿಯರಿಗೂ ತಿಳಿಸುತ್ತಾ 2023ರ ಸಾಲಿನ ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿ ಪಡೆದ ಬಾಗಲಕೋಟೆ ಜಿಲ್ಲೆಯ ಶ್ರೀಮತಿ ಸಪ್ನಾ ಅನಿಗೋಳ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ನಾರಾಯಣ ಪರಮೇಶ್ ಭಾಗ್ವತ್ ಅವರಿಗೆ ಹಾಗೂ ದೆಹಲಿ ಸರ್ಕಾರದಿಂದ ರಾಜ್ಯ ಶಿಕ್ಷಕರ ಪ್ರಶಸ್ತಿ 2023 ಪುರಸ್ಕೃತರಾದ ದೆಹಲಿ ಕನ್ನಡ ಶಾಲೆಯ ಹೆಮ್ಮೆಯ ಫಿಸಿಕಲ್ ಎಜ್ಯುಕೇಷನ್ ಶಿಕ್ಷಕಿ ಶ್ರೀಮತಿ ಡ್ಯಾರೆಲ್ ಜೆಸಿಕಾ ಫೆರ್ನಾಂಡಿಸ್ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಹಾಗೂ ಅಭಿಮತ ಓದುಗರ ಪರವಾಗಿ ಹಾರ್ದಿಕ ಅಭಿನಂದನೆಗಳು.

ಮುಂಬರುವ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ಮತ್ತು ಗೌರಿ ಗಣೇಶ ಹಬ್ಬದ ಶುಭಾಶಯಗಳೊಂದಿಗೆ,

***ಕೆ. ಶ್ರೀನಿವಾಸ ಮೂರ್ತಿ***
ಪ್ರಧಾನ ಸಂಪಾದಕರು

# ಅಧ್ಯಕ್ಷರ ನುಡಿ



ಆತ್ಮೀಯ ಕನ್ನಡ ಬಂಧುಗಳೇ, ತಮಗೆ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು.

ಭಾರತವು ಬಹಳ ಅರ್ಥಪೂರ್ಣವಾಗಿ ಆಚರಿಸಿದ ಅಜಾದಿ ಕಾ ಅಮೃತ ಮಹೋತ್ಸವ ಮುಕ್ತಾಯಗೊಳ್ಳುತ್ತಿರುವ ಸಮಯದಲ್ಲಿ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ 76 ವರ್ಷಗಳು ತುಂಬಿ 77ನೇ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಚಂದ್ರಯಾನ–3 ಅಭಿಯಾನ ಯಶಸ್ವಿಯಾಗಿ ನಮ್ಮ ದೇಶದ ಇತಿಹಾಸ ಪುಟಗಳಲ್ಲಿ ಮೈಲಿಗಲ್ಲಾಗುವಂತೆ ಮಾಡಿದಂತಹ ನಮ್ಮ ಇಸ್ರೋ ಮುಖ್ಯಸ್ಥರಿಗೆ ಮತ್ತು ವಿಜ್ಞಾನಿಗಳಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ವಿಶೇಷವಾಗಿ ನಮ್ಮ ಹೆಮ್ಮೆಯ ಕರ್ನಾಟಕದ ವಿಜ್ಞಾನಿಗಳು ಅದರಲ್ಲೂ ಕನ್ನಡ ಮಾಧ್ಯಮದಲ್ಲಿ ಕಲಿತು ಚಂದ್ರಲೋಕಕ್ಕೆ ಮೆಟ್ಟಿಲು ಹಾಕಿಕೊಟ್ಟಿದ್ದಾರೆ. ಈ ಅಪ್ರತಿಮ ಸಾಧನೆಗಾಗಿ ನಮ್ಮ ಕನ್ನಡಿಗ ವಿಜ್ಞಾನಿಗಳಿಗೆ ವಿಶೇಷ ಅಭಿನಂದನೆಗಳು.

ಬಂಧುಗಳೇ, ಪ್ರತಿ ವಾರವೂ ಹಲವು ಕಾರ್ಯಕ್ರಮಗಳನ್ನು ನೀಡುತ್ತಾ ಬರುತ್ತಿದ್ದೇವೆ. ವಿಶೇಷವಾಗಿ ಈ ಬಾರಿ ಸ್ವಾತಂತ್ರ ದಿನಾಚರಣೆಯ ಅಂಗವಾಗಿ ಸ್ಥಳೀಯ ಕನ್ನಡ ಸಂಘ ಸಂಸ್ಥೆಗಳಿಗೆ ಸಹಕರಿಸುವ ನಿಟ್ಟಿನಲ್ಲಿ, ದೆಹಲಿ ಕರ್ನಾಟಕ ಸಂಘದ ಜೊತೆಗೂಡಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘಕ್ಕೆ ಸಂಪೂರ್ಣ ಸಹಕಾರ ನೀಡಿ ಸ್ವಾತಂತ್ರ ಹೋರಾಟಗಾರ ಸಂಗೊಳ್ಳಿ ರಾಯಣ್ಣ ಜಯಂತೋತ್ಸವ ಕಾರ್ಯಕ್ರಮವನ್ನು ಸ್ವಾತಂತ್ರ ದಿನಾಚರಣೆಯ ಅಂಗವಾಗಿ ಸಂಘದ ವೇದಿಕೆಯಲ್ಲಿ ಆ 15 ರಂದು ಸಂಜೆ ಆಯೋಜನೆ ಮಾಡಿ ಯಶಸ್ವಿಯಾಗಿದ್ದೇವೆ. ಜೊತೆ ಜೊತೆಗೆ ದಿನಾಂಕ 19ರಂದು ಅಹೋರಾತ್ರಿ ಯಕ್ಷಗಾನದ ಕಾರ್ಯಕ್ರಮ ನಡೆಸಲಾಯಿತು, **‘ಹನುಮಗಿರಿಯ ಶ್ರೀ ಕೋದಂಡರಾಮ ಕೃಪಾ ಪೋಷಿತ ಯಕ್ಷಗಾನ ಮಂಡಳಿ’ಯ ಮೇಳದವರಿಂದ** ಪ್ರಸ್ತುತಿಯಾದ **‘ಶುಕ್ರನಂದನೆ’** ಯಕ್ಷಗಾನ, ಸಂಘದ ಇತಿಹಾಸದಲ್ಲಿ ದಾಖಲೆಯಾಗಿದೆ. ಪೂರ್ತಿ ರಾತ್ರಿ ನಡೆದ ಈ ಕಾರ್ಯಕ್ರಮಕ್ಕೆ ತುಂಬಿ ತುಳುಕಿದ್ದ ಸಭಾಂಗಣದಲ್ಲಿ ಯಕ್ಷಗಾನ ಪ್ರೇಮಿಗಳು ಇಡೀ ರಾತ್ರಿ ಕಾರ್ಯಕ್ರಮವನ್ನು ವೀಕ್ಷಿಸಿ ಯಶಸ್ವಿಗೊಳಿಸಿದ್ದಾರೆ. ವಿಶೇಷವಾಗಿ ಅನೇಕ ಐಎಎಸ್, ಐಪಿಎಸ್, ಐಎಫ್ಎಸ್, ಐಆರ್ಎಸ್ ಅಧಿಕಾರಿಗಳು ಹಾಗು ಭಾರತೀಯ ಸೇನಾಧಿಕಾರಿಗಳು ಆ. 19ರ ರಾತ್ರಿಯಿಂದ 20ರ ಬೆಳಗ್ಗೆಯವರೆಗೂ ಕಾರ್ಯಕ್ರಮವನ್ನು ವೀಕ್ಷಿಸಿ ಖುಷಿಪಟ್ಟಿದ್ದಾರೆ.

ಯಕ್ಷಗಾನ ಕಲಾವಿದರನ್ನು ದೆಹಲಿಗೆ ಕರೆಸಿಕೊಂಡು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟ ಶ್ರೀ ಕೋದಂಡರಾಮ ಯಕ್ಷಗಾನ ಮಂಡಳಿಯ ಧಣಿಗಳಾದ **‘ಡಾ. ಟಿ. ಶ್ಯಾಮ್ ಭಟ್’** ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಬಂಧುಗಳೇ, ಡಾ. ಶ್ಯಾಮ್ ಭಟ್ ರವರು ನಿವೃತ್ತ ಐ.ಎ.ಎಸ್. ಅಧಿಕಾರಿಗಳೂ, ಮಾಜಿ ಕರ್ನಾಟಕ ಲೋಕ ಸೇವಾ ಆಯೋಗದ ಆಯುಕ್ತರು ಮತ್ತು ಕಲಾವಿದರ ಪೋಷಕರು. ಪ್ರತಿ ವರ್ಷ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕಲಾವಿದರನ್ನು ಬೆಳೆಸುತ್ತಿರುವ ಅವರಂತಹ ಕಲಾ ಪೋಷಕರಿಗೆ ದೆಹಲಿ ಕರ್ನಾಟಕ ಸಂಘದ ಅಮೃತ ವರ್ಷದ ಕಾರ್ಯಕಾಲದಲ್ಲಿ ಗೌರವಿಸಿ ಅಭಿನಂದನೆಯನ್ನು ಸಲ್ಲಿಸಿದ್ದು ನಮ್ಮ ಸೌಭಾಗ್ಯ. ಈ ಕಾರ್ಯಕ್ರಮಕ್ಕೆ ಸಹಯೋಗ ನೀಡಿದ ಮತ್ತು ‘ಯಕ್ಷ ಮಂಜೂಷ’ ತಂಡದ ನಿರ್ದೇಶಕಿ ‘ಶ್ರೀಮತಿ ವಿದ್ಯಾ ಕೊಳ್ಯೂರು’ ಹಾಗೂ ಸಹಕಾರ ನೀಡಿದ ಇತರ ಅನೇಕರಿಗೆ ನನ್ನ ಕೃತಜ್ಞತೆಗಳು. ವಿಶೇಷವಾಗಿ ಪೂರ್ತಿ ರಾತ್ರಿ ಇದ್ದ ವೀಕ್ಷಕರಿಗೆ ಬೋಂಡಾ, ಬಜ್ಜಿ, ಚುರುಮುರಿಯ ತಿನಿಸುಗಳು, ಕಾಫಿ, ಟೀ ಅತ್ಯಂತ ಸ್ವಾದಿಷ್ಟವಾಗಿ ಮಾಡಿ, ಕೊಟ್ಟ ಕೆಲಸವನ್ನು ಸಮರ್ಪಕವಾಗಿ ಮಾಡಿದ ಶ್ರೀಮತಿ ರತ್ನ ಮತ್ತು ಶ್ರೀ ಸತ್ಯ ನಾರಾಯಣ ಪದಿ ದಂಪತಿಗಳಿಗೆ ದೆಹಲಿ ಕರ್ನಾಟಕ ಸಂಘ ಮತ್ತು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಧನ್ಯವಾದಗಳನ್ನು ತಿಳಿಸುತ್ತೇನೆ.

ಬಂಧುಗಳೇ, ದೆಹಲಿ ಕರ್ನಾಟಕ ಸಂಘದಲ್ಲಿ ಸ್ಥಳೀಯರಿಗೆ ವಿಶೇಷವಾಗಿ ಸಂಘದ ಸದಸ್ಯರಿಗೆ ಈಗಾಗಲೇ ಅನೇಕ ಕಾರ್ಯಕ್ರಮಗಳನ್ನ ಹಮ್ಮಿಕೊಂಡಿದ್ದೇವೆ, ಇನ್ನೂ ಹಮ್ಮಿಕೊಳ್ಳುತ್ತಿದ್ದೇವೆ. ಈಗಾಗಲೇ ಸ್ಥಳೀಯರಿಗೆ ಒಳಾಂಗಣ ಕ್ರೀಡಾ ಸ್ಪರ್ಧೆಗಳು, ಭಾವಗೀತೆ, ಭಕ್ತಿಗೀತೆ, ರಂಗೋಲಿ, ಆಶು ಭಾಷಣ ಮುಂತಾದ ಸ್ಪರ್ಧೆಗಳು ನಡೆದಿದ್ದು ಬರುವ ವಾರಗಳಲ್ಲಿ ಇನ್ನೂ ಅನೇಕ ಹೊರಾಂಗಣ ಆಟೋಟಗಳನ್ನು ಇತರ ಸ್ಪರ್ಧೆಗಳನ್ನು ಆಯೋಜನೆ ಮಾಡುತ್ತಿದ್ದೇವೆ. ಈ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಅದರ ಲಾಭವನ್ನು ಪಡೆದುಕೊಳ್ಳಬೇಕಾಗಿ ಸದಸ್ಯರಲ್ಲಿ ವಿನಂತಿ. ಜೊತೆಗೆ ಈ ಬಾರಿಯ ನವೆಂಬರ್ ತಿಂಗಳಲ್ಲಿ ವಿದ್ಯಾರ್ಥಿವೇತನವನ್ನು ಸಹ ನೀಡಲಾಗುತ್ತಿದೆ. ಅರ್ಹತೆ ಮತ್ತು ಅವಶ್ಯಕತೆ ಇರುವ ಎಲ್ಲಾ ವಿದ್ಯಾರ್ಥಿಗಳು ಮತ್ತು ಪೋಷಕರು ಸಂಘದ ಕಚೇರಿಗೆ ದೂರವಾಣಿ ಕರೆ ಮಾಡಿ ವಿದ್ಯಾರ್ಥಿವೇತನ ಅರ್ಜಿಯನ್ನು ಪಡೆದುಕೊಂಡು ಇದರ ಲಾಭವನ್ನು ಪಡೆದುಕೊಳ್ಳಬೇಕಾಗಿ ಮನವಿ ಮಾಡುತ್ತೇನೆ.

ಬಂಧುಗಳೇ, ಸೆಪ್ಟೆಂಬರ್ ತಿಂಗಳಲ್ಲಿ ನಾಟಕೋತ್ಸವ ಆಯೋಜನೆಯಾಗಲಿದೆ. ರಾಜ್ಯದಿಂದ ನೂರಾರು ನುರಿತ ನಾಟಕ ಕಲಾವಿದರನ್ನು ಕರೆತಂದು ಶ್ರೀ ಟಿ.ಎಸ್. ನಾಗಾಭರಣರ ಅಧ್ಯಕ್ಷತೆಯಲ್ಲಿ ಸೆ. 23, 24 ಶನಿವಾರ ಮತ್ತು ಆದಿತ್ಯವಾರ ಎರಡು ದಿನ ನಡೆಯಲಿರುವ ನಾಟಕೋತ್ಸವದಲ್ಲಿ ಅತ್ಯಂತ ಸುಂದರವಾದ ಈ ಕೆಳಕಂಡ ಐದು ನಾಟಕಗಳನ್ನು ಪ್ರದರ್ಶಿಸಲಾಗುವುದು. ಶ್ರೀ ಮಂಡ್ಯ ರಮೇಶ್ ನಟನಾ ತಂಡದಿಂದ **‘ಕೃಷ್ಣೇ ಗೌಡರ ಆನೆ’,** ಶ್ರೀ ನಂಜೇಗೌಡರ ತಂಡದಿಂದ **‘ಮಾಯಾ ಬೇಟೆ’,** ಶ್ರೀ ಟಿ.ಎಸ್. ನಾಗಾಭರಣರವರ ಬೆನಕ ತಂಡದಿಂದ **‘ಸತ್ತವರ ನೆರಳು’** ಸಾಫಲ್ಯ ರಂಗ ತಂಡದಿಂದ **‘ವೈಶಂಪಾಯನ ತೀರ’,** ಜನಪದರು ಸಾಂಸ್ಕೃತಿಕ ವೇದಿಕೆ, ಹೊಸಕೋಟೆ ತಂಡದಿಂದ **‘ಸೂಳೆ ಸಂಕವ್ವ’** ನಾಟಕಗಳು. ಈ ನಾಟಕೋತ್ಸವಕ್ಕೆ ತಾವುಗಳು ಭಾಗಿಯಾಗಿ ಕಲಾವಿದರನ್ನು ಪ್ರೋತ್ಸಾಹಿಸಿ ಈ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕೆಂದು ಪ್ರಾರ್ಥಿಸುತ್ತೇನೆ.

ಆತ್ಮೀಯರೇ, ದೆಹಲಿ ಕರ್ನಾಟಕ ಸಂಘಕ್ಕೆ ಆಯ್ಕೆಯಾಗಿ ಬಂದು ಕೆಲಸ ಮಾಡುವುದು ನಮ್ಮ ಧರ್ಮ. ಕರ್ನಾಟಕ ಸಂಘದಿಂದ ಪರಿಚಯವಾಗಿ ಕರ್ನಾಟಕ ಸಂಘಕ್ಕೆ ದ್ರೋಹ ಮಾಡುವರನ್ನು ನಾನು ಎಂದಿಗೂ ಕ್ಷಮಿಸುವುದಿಲ್ಲ. ದೆಹಲಿ ಕರ್ನಾಟಕ ಸಂಘ ಎಲ್ಲಕ್ಕಿಂತ ದೊಡ್ಡದು. ಸಂಘಕ್ಕೆ ಯಾರಿಂದ ಕಿಂಚಿತ್ತು ತೊಂದರೆಯಾದರೂ, ಅಪಮಾನವಾಗುವಂತ ಕೆಲಸವಾದರೂ, ಕಾನೂನು ಬದ್ಧವಾಗಿ ಅವರನ್ನು ಸುಮ್ಮನೆ ಬಿಡುವುದಿಲ್ಲ. ಬಂಧುಗಳೇ, ನಾವು ಇಲ್ಲಿ ಆಯ್ಕೆಯಾಗಿ ಬಂದು ನಮ್ಮ ಅಮೂಲ್ಯವಾದ ಸಮಯವನ್ನು ಸಂಘಕ್ಕೆ ನೀಡಿ ಸಂಘದ ವತಿಯಿಂದ ನಿಮ್ಮಗಳಿಗೆ ಅನುಕೂಲವಾಗುವಂತಹ ಮನರಂಜಿಸುವಂತಹ ಕಾರ್ಯ ಕೆಲಸಗಳಲ್ಲಿ ತೊಡಗಿದ್ದೇವೆ. ಆದರೆ ಲಕ್ಷಾಂತರ ರೂಪಾಯಿ ಸಂಬಳಗಳನ್ನು ತೆಗೆದುಕೊಂಡು ಕನ್ನಡಕ್ಕೆ ದ್ರೋಹ ಬಗೆದು ಕನ್ನಡಪರ ಕೆಲಸಗಳನ್ನು ಮಾಡದೆ ವ್ಯರ್ಥವಾಗಿ ಸಮಯ ಕಳೆದು ದೆಹಲಿ ಕರ್ನಾಟಕ ಸಂಘದ ಪ್ರತಿಷ್ಟೆಗೆ ಧಕ್ಕೆ ತರುವವರನ್ನ ನಾವ್ಯಾಕೆ ಸುಮ್ಮನೆ ಬಿಡಬೇಕು. ಅವರು ಎಷ್ಟೇ ದೊಡ್ಡವರಾದರೂ ಅವರು ಎಷ್ಟೇ ಚಿಕ್ಕವರಾದರೂ ಸರಿ. ಕೆಲವು ಬುದ್ಧಿಜೀವಿಗಳು ಸಂಘದ ಮುಂದೆ ಧರಣಿ ಕೂರುತ್ತೇವೆ ಎಂದು ಮಾಧ್ಯಮಗಳಲ್ಲಿ ಪ್ರಚಾರ ಮಾಡಿ ಹೆಸರು ತೆಗೆದುಕೊಂಡು ಸಂಘಕ್ಕೆ ಮುಜುಗರ ಮಾಡುವ ರೀತಿಯಲ್ಲಿ ನಡೆದುಕೊಳ್ಳುವುದು ಮುಂದೆ ಏನಾದರೂ ಕಂಡು ಬಂದಲ್ಲಿ ಯಾರೇ ಆದರೂ ಸಂಘದ ಕಾನೂನು ಪ್ರಕಾರವಾಗಿ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು. ಇದು ಸತ್ಯ. ಎಲ್ಲರಿಗಿಂತಲೂ ಸಂಘ ದೊಡ್ಡದು. ನಿಮಗೆ ಅವಕಾಶ ನೀಡಿದ ಸಮಯದಲ್ಲಿ ಕೆಲಸ ಮಾಡದೆ ಈಗ ನಾವು ಮಾಡುವ ಕೆಲಸದಲ್ಲಿ ಹುಳುಕನ್ನು ಕಂಡುಹಿಡಿಯಲು ಬರುತ್ತಿರುವ ಮಹಾನ್ ಬುದ್ಧಿಜೀವಿಗಳಿಗೆ ಮನವರಿಕೆ ಮಾಡಿಕೊಳ್ಳುತ್ತೇನೆ. ದಯವಿಟ್ಟು ನಮ್ಮನ್ನು ಕೆಲಸ ಮಾಡಲು ಬಿಡಿ, ಚುನಾವಣೆ ಮುಂದೆ ಇದೆ. ಈ ಸಂದರ್ಭದಲ್ಲಿ ರಾಜಕೀಯ ಮಾಡಬೇಡಿ. ಏನಾದರೂ ತಪ್ಪು ಇದ್ದಲ್ಲಿ ಮಹಾಸಭೆಯಲ್ಲಿ ಚರ್ಚಿಸೋಣ ನಮ್ಮ ಜೊತೆ ಕಾವಲು ಸಮಿತಿಯೂ ಇದೆ, ಅವರೆಲ್ಲರೂ ಗಮನಿಸುತ್ತಿದ್ದಾರೆ. ನಾನು ಕೆಲಸ ಮಾಡಲು ಬಂದವನು, ಸುಮ್ಮನೆ ಸಮಯ ಕಳೆಯಲು ಬಂದವನಲ್ಲ.

ದೆಹಲಿ ಕರ್ನಾಟಕ ಸಂಘದಲ್ಲಿ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ಆ 29 ರಂದು ಹೆಸರಾಂತ ರಂಗ ಭೂಮಿ ಕಲಾವಿದರೂ, ಕನ್ನಡ ಚಲನಚಿತ್ರ ರಂಗದ ಮೇರು ನಟರಲ್ಲಿ ಒಬ್ಬರಾದಂತಹ, 1000 ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿ ನಮ್ಮನ್ನ ಮನರಂಜಿಸಿರುವ ಶ್ರೀ ದೊಡ್ಡಣ್ಣನವರು ದೆಹಲಿಗೆ, ಕರ್ನಾಟಕ ಸಂಘಕ್ಕೆ ಬಂದ ಸಮಯದಲ್ಲಿ ಅವರಿಗೆ ಒಂದು ಅಭಿನಂದನಾ ಮತ್ತು ಸಂವಾದ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿತ್ತು. ಸರಿಸುಮಾರು ಮೂರು ಗಂಟೆಗಿಂತಲೂ ಹೆಚ್ಚು ನಡೆದ ಶ್ರೀಯುತರೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ, ಸಮಯ ಕಳೆದಿದ್ದು ಗೊತ್ತಾಗಲೇ ಇಲ್ಲ. ಕನ್ನಡ ಮಾಧ್ಯಮದಲ್ಲಿ ಕಲಿತು, 10ನೇ ತರಗತಿಯಲ್ಲಿ ಉತ್ತೀರ್ಣರಾಗದಿರುವ ಪುಸ್ತಕ ಪ್ರಿಯ ದೊಡ್ಡಣ್ಣನವರ ಸಾಹಿತ್ಯ ಜ್ಞಾನ, ಅಭಿರುಚಿ ತುಂಬಾ ದೊಡ್ಡದು. ಯಾವ ಪಿ.ಎಚ್.ಡಿ. ಪಡೆದವರಿಗಿಂತ ಕಡಿಮೆ ಅನಿಸಲೇ ಇಲ್ಲ. ಬಸವಣ್ಣ, ಬಿಜ್ಜಳ ಮಹಾರಾಜ, ರಾಷ್ಟ್ರಕವಿ ಕುವೆಂಪು, ಬೆಂಗಳೂರನ್ನು ಕಟ್ಟಿದ ನಾಡಪ್ರಭು ಕೆಂಪೇಗೌಡ, ಶಂಕರಾಚಾರ್ಯರು ಇನ್ನು ಅನೇಕ ಮಹನೀಯರ ಬಗ್ಗೆ, ಕನ್ನಡದ ಕವಿಗಳ ಬಗ್ಗೆ ಅತ್ಯಂತ ಮನಮುಟ್ಟುವಂತೆ ಮಾತನಾಡಿದ ದೊಡ್ಡಣ್ಣ ಓರ್ವ ಮೇರು ಸಾಹಿತಿ ಎಂದು ಈ ಸಂದರ್ಭದಲ್ಲಿ ಹೇಳಬಹುದು. ಇಷ್ಟೊಂದು ದೊಡ್ಡ ಕಲಾವಿದರು ಕರ್ನಾಟಕ ಸಂಘಕ್ಕೆ ಬಂದು ನಮ್ಮ ಅಭಿನಂದನೆಯನ್ನು ಸ್ವೀಕರಿಸಿ ಸಂವಾದದಲ್ಲಿ ಭಾಗಿಯಾಗಿ ಸದಸ್ಯರನ್ನ ಮನರಂಜಿಸಿದ್ದಾರೆ. ಸಾಹಿತ್ಯದ ಬಗ್ಗೆ ಅತ್ಯಂತ ಸೊಗಸಾಗಿ ಮಾತನಾಡಿದ್ದಾರೆ. ಇಂಥ ಮಹಾನ್ ಕಲಾವಿದರನ್ನು ರಾಜ್ಯೋತ್ಸವದ ಸಂದರ್ಭದಲ್ಲಿ ಆಹ್ವಾನಿಸಿ ಅವರೊಂದಿಗೆ ಪೂರ್ತಿ ದಿನ ಸಮಯ ಕಳೆಯಬೇಕೆಂಬುದು ಕಾರ್ಯಕ್ರಮಕ್ಕೆ ಬಂದಿದ್ದಂತಹ ಎಲ್ಲಾ ಸದಸ್ಯರುಗಳ ಬಯಕೆಯಾಗಿತ್ತು. ಆದಷ್ಟು ಬೇಗನೇ ಈ ಕೆಲಸ ಪೂರ್ತಿ ಮಾಡೋಣ ಎಂದು ತಮ್ಮಲ್ಲಿ ಭರವಸೆ ನೀಡುತ್ತೇನೆ.

ದಿನಾಂಕ ಸೆ. 17 ರಂದು ಕಲ್ಯಾಣ ಕರ್ನಾಟಕ ಉತ್ಸವ ಅಂಗವಾಗಿ ಆಯೋಜಿಸುತ್ತಿರುವ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಬರುವ ಎಲ್ಲಾ ಕಾರ್ಯಕ್ರಮಗಳಿಗೆ ದಯವಿಟ್ಟು ಬಂದು ಯಶಸ್ವಿ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮತ್ತೊಮ್ಮೆ ಚಂದ್ರಯಾನ–3 ರ ಪರಿಶೋಧನಾ ಅಭಿಯಾನದಲ್ಲಿ ದುಡಿದಂತ ಇಸ್ರೋ ವಿಜ್ಞಾನಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಜೈ ಹಿಂದ್, ಜೈ ಕರ್ನಾಟಕ ಮಾತೆ

***ಸಿ.ಎಂ. ನಾಗರಾಜ***

ಅಧ್ಯಕ್ಷರು

## ಮುನ್ನೋಟ

ಆತ್ಮೀಯರೇ,

ದೆಹಲಿ ಕರ್ನಾಟಕ ಸಂಘ ಕನ್ನಡಿಗರ ಸಾಂಸ್ಕೃತಿಕ ರಾಯಭಾರಿಯಾಗಿ ಹತ್ತು ಹಲವು ಸಾಧನೆಗಳಿಗೆ ಸಾಕ್ಷ್ಯವಾಗಿದೆ. ನಾಡದೇವಿ ಚಾಮುಂಡೇಶ್ವರಿಯ ಆಶೀರ್ವಾದ, ಮೈಸೂರು ಮಹಾರಾಜರ ದೂರದೃಷ್ಟಿ ಆಡಳಿತ, ತಾಯಿ ಕಾವೇರಿ–ತುಂಗಾ–ಅರ್ಕಾವತಿ–ನೇತ್ರಾವತಿ ನದಿಗಳ ಕೃಪೆಯಿಂದಾಗಿ ಸುಭಿಕ್ಷ ತಾಯ್ನಾಡು ಕರ್ನಾಟಕದಿಂದ ಉದ್ಯೋಗವನ್ನರಸಿ ರಾಷ್ಟ್ರ ರಾಜಧಾನಿ ತಲುಪಿದ ನನ್ನ–ನಿಮ್ಮಂತಹ ನೂರಾರು ಜನರನ್ನು ಒಗ್ಗೂಡಿಸಿ ನಾಡು–ನುಡಿ–ಸಂಸ್ಕೃತಿಗಳ ಉಳಿವಿಕೆಗಾಗಿ ಹುಟ್ಟಿದ ಈ ಸಂಘ ಇಂದು ಹೆಮ್ಮರವಾಗಿ ಬೆಳೆದಿದೆ. ಹಲವು ಸಾಧನೆಗಳ ನಡುವೆ ಒಂದು ಸಾಧನೆ–"ಸುಮಾರು 100 ಮಕ್ಕಳು ಕನ್ನಡ ಭಾಷೆಯನ್ನು ಕಲಿಯುತ್ತಿರುವುದು, ಕಲಿತು ಸಮೃದ್ಧ ಕನ್ನಡ ಭಾಷೆ, ಸಾಹಿತ್ಯ, ಸಂಗೀತ, ನೃತ್ಯಗಳನ್ನು ಮೈಗೂಡಿಸಿ, ಸಂಘದ ವೇದಿಕೆಯಲ್ಲಿ ಪ್ರದರ್ಶನ ನೀಡಿರುವುದು" ನಕ್ಷತ್ರಗಳ ನಾಡಿನಲ್ಲಿ ಒಂದು ಧೃವ ನಕ್ಷತ್ರವಿದ್ದಂತೆ ಇದೆ.

ಸಂಘದ ಮೂಲ ಉದ್ದೇಶಗಳನ್ನು ಈಡೇರಿಸುತ್ತಿರುವ ಈ ಕಾರ್ಯಕ್ರಮ ನಮ್ಮ ಆಡಳಿತ ಮಂಡಳಿಗೆ ಒಂದು ಸಾರ್ಥಕತೆಯನ್ನು ತಂದುಕೊಟ್ಟಿದೆ. ಮೊದಲ ಬಾರಿಗೆ ಯಾವುದೇ ಅಡೆತಡೆಗಳಿಲ್ಲದೇ, ಸಂಖ್ಯಾಬಲ ಕುಗ್ಗದೆ ಸತತ 8–9 ತಿಂಗಳ ಪಯಣ ಮುಗಿಸಿದ ಕನ್ನಡ ಕಲಿಕಾ ಕೇಂದ್ರ, ಸಂಗೀತ ಮತ್ತು ನೃತ್ಯ ತರಬೇತಿ ಕಾರ್ಯಕ್ರಮಗಳು ಮುಂದುವರೆಯಲಿ. ಈ ರೀತಿಯ ಮತ್ತಷ್ಟು ಕೇಂದ್ರಗಳು ಮುಂಬರುವ ದಿನಗಳಲ್ಲಿ ದೆಹಲಿ ಕರ್ನಾಟಕ ಸಂಘದಿಂದ ತೆರೆಯುವಂತಾಗಲಿ ಎಂಬುದೇ ನಮ್ಮ ಹೆಬ್ಬಯಕೆ.

ನಿಮ್ಮಗಳ ಪ್ರೋತ್ಸಾಹ ನಮ್ಮ ಉತ್ಸಾಹವನ್ನು ಇಮ್ಮಡಿಗೊಳಿಸುತ್ತಿದೆ. ಆದುದರಿಂದ ಬನ್ನಿ, ಸಂಘದ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಸಹಭಾಗಿಯಾಗಿ.

***ಆರ್. ರೇಣುಕುಮಾರ್***
ಪ್ರಧಾನ ಕಾರ್ಯದರ್ಶಿ

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**17 ಸೆಪ್ಟೆಂಬರ್ 2023** **ಭಾನುವಾರ** **ಬೆಳಿಗ್ಗೆ 8.30 ಗಂಟೆಗೆ**

ಕಲ್ಯಾಣ ಕರ್ನಾಟಕ ಉತ್ಸವ ಅಂಗವಾಗಿ
**ಧ್ವಜಾರೋಹಣ**

**17 ಸೆಪ್ಟೆಂಬರ್ 2023** **ಭಾನುವಾರ** **ಸಂಜೆ : 6.00 ಗಂಟೆಗೆ**

ಕಲ್ಯಾಣ ಕರ್ನಾಟಕ ಉತ್ಸವ ಅಂಗವಾಗಿ
**ಸಾಂಸ್ಕೃತಿಕ ಕಾರ್ಯಕ್ರಮಗಳು**

**19 ಸೆಪ್ಟೆಂಬರ್ 2023**

ಗಣೇಶ ಚತುರ್ಥಿ **ಸಾಂಸ್ಕೃತಿಕ ಉತ್ಸವ**

**23 ಸೆಪ್ಟೆಂಬರ್ 2023** **ಶನಿವಾರ** **ಸಂಜೆ : 4.00 ಗಂಟೆಗೆ**

**ನಾಟಕೋತ್ಸವ**
ಸಾಫಲ್ಯ ರಂಗ ತಂಡದಿಂದ ನಾಟಕ **'ವೈಶಂಪಾಯನ ತೀರ'**
ಶ್ರೀ ಮಂಡ್ಯ ರಮೇಶ್ ತಂಡದಿಂದ ನಾಟಕ **'ಕೃಷ್ಣೇ ಗೌಡರ ಆನೆ'**

**24 ಸೆಪ್ಟೆಂಬರ್ 2023** **ಭಾನುವಾರ** **ಮಧ್ಯಾಹ್ನ : 2.30 ಗಂಟೆಗೆ**

**ನಾಟಕೋತ್ಸವ**
ಜನಪದರು ಸಾಂಸ್ಕೃತಿಕ ವೇದಿಕೆ, ಹೊಸಕೋಟೆ ತಂಡದಿಂದ ನಾಟಕ **'ಸೂಳೆ ಸಂಕವ್ವ'**
ಶ್ರೀ ನಂಜೇ ಗೌಡ ತಂಡದಿಂದ ನಾಟಕ -**'ಮಾಯಾ ಬೇಟೆ'**
ಹಾಗೂ ಬೆನಕ ತಂಡದಿಂದ ನಾಟಕ- **'ಸತ್ತವರ ನೆರಳು'**

## ಕಾರ್ಯಕಾರಿ ಸಮಿತಿಗೆ ಶ್ರೀ ವಸಂತ ಕುಮಾರ್ ಎಂ.ಬಿ.



**ಶ್ರೀ ವಸಂತ ಕುಮಾರ್ ಎಂ.ಬಿ.**

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಗೆ 2021–23ರ ಅವಧಿಗೆ ಸದಸ್ಯರಾಗಿ ಚುನಾಯಿತಗೊಂಡಿದ್ದ ಶ್ರೀ ಎ.ಟಿ. ಶ್ರೀನಿವಾಸ ಅವರ ರಾಜಿನಾಮೆಯಿಂದ ತೆರವುಗೊಂಡಿದ್ದ ಸ್ಥಾನಕ್ಕೆ ಸಮಿತಿಯ ಇನ್ನುಳಿದ ಕಾರ್ಯಾವಧಿಗೆ ಶ್ರೀ ವಸಂತ ಕುಮಾರ್ ಅವರನ್ನು ಸಂಘದ ಸಂವಿಧಾನ ಅನುಚ್ಛೇದ 11.7ರ ಪ್ರಕಾರ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಶ್ರೀ ವಸಂತ ಕುಮಾರ್ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.

## ಕರ್ನಾಟಕ ಭವನದಲ್ಲಿ ಸ್ವಾತಂತ್ರ್ಯ ದಿನಾಚರಣೆ



ನವದೆಹಲಿಯ ಕರ್ನಾಟಕ ಭವನದಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ನಿವಾಸಿ ಆಯುಕ್ತರಾದ ಶ್ರೀಮತಿ ಇಮ್‌ಕೊಂಗ್ಲಾ ಜಮೀರ್ ಐಎಎಸ್, ಸಹಾಯಕ ನಿವಾಸಿ ಆಯುಕ್ತರಾದ ಶ್ರೀ ಶಂಭುಲಿಂಗಪ್ಪ, ಮತ್ತು ನಿವಾಸಿ ಆಯುಕ್ತರವರ ಕಚೇರಿಯ ಅಧಿಕಾರಿಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ, ಕರ್ನಾಟಕ ಭವನದ ಸಿಬ್ಬಂದಿಗಳು ಹಾಗೂ ವ್ಯವಸ್ಥಾಪಕರಾದ ಶ್ರೀ ಡಿ.ಅನಂತ, ಶ್ರೀ ಬಿ ವಿ.ರಾಘವೇಂದ್ರ, ಶ್ರೀ ಕೆ.ಆರ್. ವೆಂಕಟೇಶ್, ಶ್ರೀ ಹೆಚ್. ಜಯಪ್ಪ, ಶ್ರೀಮತಿ ಸಿ.ಪಿ. ಭಾರ್ಗವಿ ಇನ್ನಿತರ ಕೆಎಸ್‌ಆರ್‌ಪಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

**ದೆಹಲಿ ಕರ್ನಾಟಕ ಸಂಘದ ಅಮೃತ ಕಾರ್ಯ ಕಾಲದಲ್ಲಿ ದೇಶಭಕ್ತಿಯೊಂದಿಗೆ ಅರ್ಥಪೂರ್ಣವಾಗಿ ಸಂಭ್ರಮಿಸಿದ**

# ಭಾರತದ 77ನೇ ಸ್ವಾತಂತ್ರ್ಯ ದಿನಾಚರಣೆ



ದೇಶದ ಆಜಾದಿ ಕಾ ಅಮೃತ್ ಮಹೋತ್ಸವ್ ಆಚರಣೆ ಹಿನ್ನೆಲೆಯಲ್ಲಿ, ದೆಹಲಿ ಕರ್ನಾಟಕ ಸಂಘವೂ ಸಹ ತನ್ನ ಅಸ್ತಿತ್ವದ 75 ವರ್ಷಗಳನ್ನು ಪೂರ್ಣಗೊಳಿಸುತ್ತಾ ಅಮೃತ ಮಹೋತ್ಸವ ಆಚರಿಸುತ್ತಿರುವ ಅಮೃತ ಕಾರ್ಯಕಾಲದಲ್ಲಿ ಆಗಸ್ಟ್ 15, 2023ರಂದು ಬೆಳಿಗ್ಗೆ ಸಂಘದ ಸಾಂಸ್ಕೃತಿಕ ಸಮುಚ್ಚಯದ ಆವರಣದಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡಿ ರಾಷ್ಟ್ರಗೀತೆ ಹಾಡುವುದರೊಂದಿಗೆ ಭಾರತದ ಸ್ವಾತಂತ್ರ್ಯೋತ್ಸವ ದಿನವನ್ನು ಅತ್ಯಂತ ಸಂಭ್ರಮ ಪೂರ್ಣವಾಗಿ ದೇಶಭಕ್ತಿಯ ಭಾವದೊಂದಿಗೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಗೌರವ ಉಪಸ್ಥಿತರಿದ್ದ ದೆಹಲಿ ಕರ್ನಾಟಕ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿಗಳೂ ಹಾಗು ಹಿರಿಯ ದೆಹಲಿ ಕನ್ನಡಿಗರಾದ ಶ್ರೀ ಸರವು ಕೃಷ್ಣ ಭಟ್ ಅವರು ಧ್ವಜಾರೋಹಣ ಮಾಡಿ ಮಾತನಾಡುತ್ತಾ, ಸ್ವಾತಂತ್ರ್ಯ ದಿನವು ಒಂದು ಆಚರಣೆಯ ದಿನವೂ ಹೌದು, ಸ್ವಾತಂತ್ರ್ಯಕ್ಕೋಸ್ಕರ ಹೋರಾಡಿದ ಲಕ್ಷಾಂತರ ಮಂದಿಯನ್ನು ನೆನಪಿಸಿಕೊಳ್ಳುವಂತಹ ಕ್ಷಣವೂ ಹೌದು. ಆದರೆ ಅವರು ಮಾಡಿದಂತಹ ತ್ಯಾಗ ಅವರು ನೀಡಿದಂತಹ ಕೊಡುಗೆ. ಅದನ್ನು ಉಳಿಸಿ ಬೆಳೆಸುವಲ್ಲಿ ನಮ್ಮನ್ನು ನಾವು ಮತ್ತೆ ಕಟಿಬದ್ಧರಾಗಿಸುವುದಕ್ಕೆ ಪ್ರತಿಜ್ಞೆಯನ್ನು ತೊಡುವಂತಹ ಒಂದು ಸಂದರ್ಭವೂ ಹೌದು. ದೇಶದ ಕೆಲಸದ ಪರಿಕಲ್ಪನೆ ಹೇಗಿದೆಯೋ ನಮ್ಮ ದೆಹಲಿ ಕರ್ನಾಟಕ ಸಂಘದಲ್ಲಿಯೂ ಅಂತಹದೇ ಒಂದು ಪರಿಕಲ್ಪನೆಯೂ ಇದೆ. ದೇಶವನ್ನು ರಕ್ಷಿಸುವ, ಮುನ್ನಡೆಸುವ ಈ ದಿನಗಳಲ್ಲಿ ನಮ್ಮ ನಮ್ಮ ಜೀವನದಲ್ಲಿ, ಸಂಘ ಸಂಸ್ಥೆಗಳಲ್ಲಿ ನಾವುಗಳು ಪೂರಕವಾಗಿ ದೇಶಕ್ಕೆ ಸಮರ್ಪಿಸಿಕೊಳ್ಳುವಂತಹ ಜನಪರ ಕೆಲಸಗಳಲ್ಲಿ ತೊಡಗಿಸಿಕೊಂಡರೆ ಆ ಕೆಲಸಗಳು ಇತಿಹಾಸದಲ್ಲಿ ಉಳಿದುಕೊಳ್ಳುತ್ತವೆ.

ನಮ್ಮ ದೇಶವು ಹೇಗೆ ಸಮರ್ಥ ನಾಯಕತ್ವದಲ್ಲಿ ಮುಂದುವರಿಯುತ್ತಿದೆಯೋ ಹಾಗೆಯೇ ಇಂದು ನಮ್ಮ ದೆಹಲಿ ಕರ್ನಾಟಕ ಸಂಘವೂ ಸಹ ಪ್ರಸ್ತುತ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜರ ಅಷ್ಟೇ ಸಮರ್ಥ ನಾಯಕತ್ವದೊಂದಿಗೆ ಮುಂದುವರಿಯುತ್ತಿರುವುದು ಹೆಮ್ಮೆಯ ವಿಷಯ. ಈಗಿನ ದಿನಗಳಲ್ಲಿ ಸಾಮಾಜಿಕವಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳುವಂತೆ ಬರುವ ಜನರ ಸಂಖ್ಯೆ ಕಡಿಮೆಯಾಗುತ್ತಿದೆ. ಆದರೂ ಕೂಡ ತಮ್ಮ ಸಮಯವನ್ನು ನೀಡಿ ದೆಹಲಿ ಕರ್ನಾಟಕ ಸಂಘವನ್ನು ಕಟ್ಟಿ ಬೆಳೆಸಿದವರಲ್ಲಿ ಈಗಿನ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜರ ಪರಿಶ್ರಮ, ಸಾಧನೆ ಶ್ಲಾಘನೀಯ. ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ಅವರು ಸಂಘಕ್ಕೆ ಇನ್ನೊಂದು ಜಾಗವನ್ನು ಪಡೆದುಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ, ಸಂಘದ ಸದಸ್ಯರಿಗೆ ಅನುಕೂಲವಾಗುವಂತ ಅನೇಕ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ, ಅವರಿಗೆ ಧನ್ಯವಾದಗಳನ್ನು, ಮುಂದಿನ ಯೋಜನೆಗಳಿಗೆ ಶುಭಾಶಯಗಳನ್ನು ಹೇಳುತ್ತಾ, ಇಂದು ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಎಲ್ಲಾ ದೆಹಲಿ ಕನ್ನಡಿಗರಿಗೆ ದೇಶದ ಸ್ವಾತಂತ್ರ್ಯ ದಿನಾಚರಣೆಯ ಅಭಿನಂದನೆಗಳನ್ನು ತಿಳಿಸುತ್ತೇನೆ ಎಂದರು.

ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ಬಂದು 76 ವರ್ಷಗಳು ತುಂಬಿ ನಾವು 77ನೇ ಸ್ವಾತಂತ್ರ್ಯ ದಿನವನ್ನು ಇಂದು ಆಚರಣೆ ಮಾಡುತ್ತಿದ್ದೇವೆ. ದೇಶದ ಆಜಾದಿ ಕಾ ಅಮೃತ್ ಮಹೋತ್ಸವದ ಈ ಸಂದರ್ಭದಲ್ಲಿ ನಮ್ಮ ಸಂಘವೂ ಸಹ 75 ವರ್ಷ ಪೂರ್ಣ ಮಾಡಿ 76ನೇ ವರ್ಷಕ್ಕೆ ಕಾಲಿಡುತ್ತಿದೆ. ಸ್ವಾತಂತ್ರ್ಯ ಮಹೋತ್ಸವಾಚರಣೆಯ ಈ ಶುಭ ಘಳಿಗೆಯಲ್ಲಿ ದೇಶಕ್ಕೋಸ್ಕರ ಹೋರಾಡಿ ತಮ್ಮ ಪ್ರಾಣವನ್ನು ಬಲಿದಾನ ನೀಡಿದ ಸಾವಿರಾರು ಯೋಧರನ್ನು, ಕರ್ನಾಟಕದ ವೀರ ವನಿತೆಯರನ್ನು ನೆನಪಿಸಿಕೊಳ್ಳುವುದು ನಮ್ಮ ಕರ್ತವ್ಯ. ನಮ್ಮ ನಾಡಿನ ಕಿತ್ತೂರು ರಾಣಿ ಚೆನ್ನಮ್ಮ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನಂತಹವರನ್ನು ಸ್ಮರಿಸಿಕೊಳ್ಳುತ್ತಾ, ಸಂಘದ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ಈ ದಿನ ನಮ್ಮೊಂದಿಗೆ ಸ್ವಾತಂತ್ರ್ಯೋತ್ಸವನ್ನು ಆಚರಿಸುತ್ತಿರುವ ದೆಹಲಿ ಎನ್.ಸಿ.ಆರ್. ಕನ್ನಡಿಗರಿಗೆ, ಕನ್ನಡನಾಡಿನ ಮತ್ತು ದೇಶದ ಎಲ್ಲಾ ಸಮಸ್ತ ನಾಗರಿಕರಿಗೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ ಎಂದರು.

ಧ್ವಜಾರೋಹಣ ಕಾರ್ಯಕ್ರಮದಲ್ಲಿ ಉತ್ತಮ ಸಂಖ್ಯೆಯಲ್ಲಿ ಭಾಗವಹಿಸಿದ ದೆಹಲಿ ಕನ್ನಡಿಗರು ರಾಷ್ಟ್ರಗೀತೆಯೊಂದಿಗೆ ರಾಷ್ಟ್ರಧ್ವಜಕ್ಕೆ ಗೌರವ ವಂದನೆಗಳನ್ನು ಸಲ್ಲಿಸಿ ತಮ್ಮ ದೇಶಭಕ್ತಿಯನ್ನು ಮೆರೆದರು. ಈ ಸಂದರ್ಭದಲ್ಲಿ ಸಂಘದ ಕಾರ್ಯಕಾರಿ ಸಮಿತಿಯ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್, ಜಂಟಿ ಕಾರ್ಯದರ್ಶಿ ಶ್ರೀಮತಿ ಸುಮಿತಾ ಮುರಗೋಡ, ಸದಸ್ಯರಾದ ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀಮತಿ ಸವಿತಾ ನೆಲ್ಲಿ, ಶ್ರೀ ಶಿವಪ್ಪ ಎಂ., ಶ್ರೀ ಕೆ.ಎಸ್. ಮೂರ್ತಿ, ಶ್ರೀ ಸಂತೋಷ ಜೆ., ಶ್ರೀ ನವೀನ್ ಕುಮಾರ್ ವಿ. ಭಾಗವಹಿಸಿದ್ದರು.

ಸಂಘದ ಆಜೀವ ಸದಸ್ಯರಾದ ಶ್ರೀ ರಮೇಶ್ ಆರ್.ಎಸ್., ಶ್ರೀ ಪ್ರಹ್ಲಾದ್, ಡಾ. ಡಿ.ಎಸ್. ಶಂಕರ್, ಶ್ರೀಮತಿ ಶೋಭಾ ನಾಗರಾಜ, ಶ್ರೀಮತಿ ಕನಕ, ಶ್ರೀಮತಿ ಆಶಾ, ಶ್ರೀಮತಿ ರಾಜಶ್ರೀ, ಶ್ರೀಮತಿ ರೂಪಶ್ರೀ, ಶ್ರೀ ನರಸಿಂಹಮೂರ್ತಿ, ಶ್ರೀ ಉಸ್ಮಾನ್ ಷರೀಫ್, ಶ್ರೀ ಆನಂದ ಮುರಗೋಡ, ಶ್ರೀಮತಿ ರತ್ನ ಮತ್ತು ಶ್ರೀ ಸತ್ಯನಾರಾಯಣ ಪದಿ, ಶ್ರೀ ರಂಜಿತ್, ಸದಸ್ಯರ ಮಕ್ಕಳು, ಸಂಘದ ವ್ಯವಸ್ಥಾಪಕರು, ಸಿಬ್ಬಂದಿ ವರ್ಗ, ಬೀದರ್‌ನಿಂದ ಬಂದಿದ್ದ ಕನ್ನಡಿಗರು ಇತರರು ಉಪಸ್ಥಿತರಿದ್ದರು.

ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ವಿಜ್ಞಾನಿ ಡಾ. ಎಂ.ಎಸ್. ಶಶಿಕುಮಾರ್‌ರವರು ಮಾತನಾಡಿ ನಮಗೆ ಸಿಕ್ಕ ಸ್ವಾತಂತ್ರ್ಯ ಬಹುಮೂಲ್ಯವಾದುದು. Independence we got was not for free, ಇದಕ್ಕೋಸ್ಕರ ಸಾವಿರಾರು ವೀರ ಯೋಧರು ಹಾಗು ದೇಶಭಕ್ತರು ಪ್ರಾಣ ತ್ಯಾಗ ಮಾಡಿದ್ದಾರೆ. ಅವರಿಗೆ ನನ್ನ ಹೃದಯಪೂರ್ವಕ ನಮನಗಳು ಎಂದರು. ದೇಶದ 77 ನೇ ಸ್ವಾತಂತ್ರ್ಯ ದಿನದ ಅಭಿನಂದನೆಗಳನ್ನು ತಿಳಿಸುತ್ತಾ, ಧ್ವಜಾರೋಹಣ ನಡೆಸಿಕೊಟ್ಟ ಹಿರಿಯರಾದ ಶ್ರೀ ಸರವು ಕೃಷ್ಣ ಭಟ್ ಮತ್ತು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರಿಗೆ, ಹಾಗೂ ಉಪಸ್ಥಿತರಿದ್ದ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು, ಸಂಘದ ಸದಸ್ಯರು, ಮಹಿಳೆಯರು, ಮಕ್ಕಳು, ಕನ್ನಡಿಗ ಮಿತ್ರರು ಹಾಗೂ ಸಮಸ್ತ ದೆಹಲಿ ಕನ್ನಡಿಗರಿಗೆ ಧನ್ಯವಾದಗಳನ್ನು ಸಮರ್ಪಿಸಿದರು.■

***ಅಭಿಮತ ವರದಿ***

## ದೆಹಲಿ ಕರ್ನಾಟಕ ಸಂಘದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಸಹಯೋಗದಲ್ಲಿ

# ಸ್ವಾತಂತ್ರ್ಯೋತ್ಸವ ಹಾಗು ಸಂಗೊಳ್ಳಿ ರಾಯಣ್ಣ ಜಯಂತೋತ್ಸವ ಆಚರಣೆ



ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ 15.08.2023 ರಂದು ಸಂಜೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ 225ನೇ ಜನ್ಮ ದಿನದ ಸ್ಮರಣೆ ಕಾರ್ಯಕ್ರಮವನ್ನು ದೇಶದ 77ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ನವದೆಹಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಸಹಯೋಗದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಮಾಜಿ ಸಂಸದರೂ, ಕರ್ನಾಟಕ ಸರ್ಕಾರದ ಮಾಜಿ ಶಿಕ್ಷಣ ಸಚಿವರೂ ಹಾಗು ಹಾಲಿ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಚ್. ವಿಶ್ವನಾಥ ಮತ್ತು ರಾಜ್ಯದ ಮಾಜಿ ಸಾರಿಗೆ ಸಚಿವರಾದ ಶ್ರೀ ಎಚ್.ಎಂ. ರೇವಣ್ಣನವರು ಆಗಮಿಸಿದ್ದರು. ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ವಹಿಸಿದ್ದರು. ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಸಂಘದ ಅಧ್ಯಕ್ಷ ಶ್ರೀ ಆರ್. ಮಹಾದೇವ, ಗೌರವಾಧ್ಯಕ್ಷ ಡಾ. ಮುನಿರಾಜು ಮತ್ತು ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್ ಅವರು ವೇದಿಕೆಯಲ್ಲಿದ್ದರು.

ಶ್ರೀಮತಿ ನೇತ್ರಾ ಮತ್ತು ತಂಡದವರು ದೇಶ ಭಕ್ತಿಯ ಪ್ರಾರ್ಥನೆ ಗೀತೆ ಹಾಡಿದರು. ದೀಪ ಪ್ರಜ್ವಲನೆ ಹಾಗೂ ಸಂಗೊಳ್ಳಿ ರಾಯಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರೊಂದಿಗೆ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಲಾಯಿತು.

ಭಾರತ ಸರ್ಕಾರದ ನೀತಿ ಆಯೋಗದಲ್ಲಿ ಉಪ ಸಲಹೆಗಾರರೂ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಗೌರವಾಧ್ಯಕ್ಷರಾದ ಡಾ. ಎಸ್.ಬಿ. ಮುನಿರಾಜು ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದ ಅತಿಥಿಗಳನ್ನು, ಗಣ್ಯರನ್ನು ಹಾಗೂ ಸಭಾಂಗಣದಲ್ಲಿ ನೆರೆದಿದ್ದ ಕನ್ನಡಿಗರನ್ನು, ಕನ್ನಡೇತರರರನ್ನು ಆತ್ಮೀಯವಾಗಿ ಸ್ವಾಗತಿಸುತ್ತಾ, ಪ್ರಾಸ್ತಾವಿಕ ಮಾತುಗಳನ್ನಾಡಿದರು. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಮೊದಲೇ ಕಿತ್ತೂರು ಸಂಸ್ಥಾನದ ರಕ್ಷಣೆಗಾಗಿ ರಾಣಿ ಚೆನ್ನಮ್ಮನವರ ಸೇನಾಧಿಪತಿ ಸಂಗೊಳ್ಳಿ ರಾಯಣ್ಣನವರು ಬ್ರಿಟಿಷರ ವಿರುದ್ಧ ಹೋರಾಡಿ ತಮ್ಮ ಜೀವನವನ್ನು ತ್ಯಾಗ ಮಾಡಿದ್ದನ್ನು ಸ್ಮರಿಸಿಕೊಂಡು, ಅವರ ಜನ್ಮ ದಿನವನ್ನು ಸ್ವಾತಂತ್ರ್ಯೋತ್ಸವದ ಈ ಸಂದರ್ಭದಲ್ಲಿ ಅರ್ಥಪೂರ್ಣವಾಗಿ ದೆಹಲಿ ಕರ್ನಾಟಕ ಸಂಘದ ಜೊತೆಯಲ್ಲಿ ಆಯೋಜಿಸುತ್ತಿರುವುದರ ಬಗ್ಗೆ ಸಂತಸ ವ್ಯಕ್ತಪಡಿಸಿದರು.

ಕಾರ್ಯಕ್ರಮದ ನಿರೂಪಣೆಯನ್ನು ಆರಂಭಿಸಿದ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಸಂತೋಷ ಜೆ, ಸಂಘದ ಅಮೃತ ಮಹೋತ್ಸವ ಅಂಗವಾಗಿ ನಡೆದ ಜಿಲ್ಲಾವಾರು ಕಾರ್ಯಕ್ರಮಗಳು ಹಾಗೂ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ಉಪಸ್ಥಿತಿಯಲ್ಲಿ ನೆರವೇರಿದ ಸಮಾರೋಪ ಕಾರ್ಯಕ್ರಮಗಳ ಬಗ್ಗೆ ವಿವರಿಸುತ್ತಾ ಕರ್ನಾಟಕದಿಂದ ಬಂದ ಸುಮಾರು 2500ಕ್ಕೂ ಹೆಚ್ಚು ಕಲಾವಿದರು ಸಂಘದ ವೇದಿಕೆಯಲ್ಲಿ ಕಲಾ ಪ್ರದರ್ಶನ ಮಾಡಿರುವುದನ್ನು ಉಲ್ಲೇಖಿಸಿ, ಸಂಗೊಳ್ಳಿ ರಾಯಣ್ಣನವರ ಬಗ್ಗೆ ಮಾಹಿತಿ ನೀಡುವುದರೊಂದಿಗೆ ಇಂದಿನ ಕಾರ್ಯಕ್ರಮ ಆಯೋಜನೆಯ ಹಿನ್ನೆಲೆಯನ್ನು ನೀಡಿದರು.

ಮತ್ತೋರ್ವ ಅತಿಥಿಗಳೂ ಹಾಗು ಕಾರ್ಯಕ್ರಮದ ಉದ್ಘಾಟಕರಾದ ರಾಜ್ಯದ ಮಾಜಿ ಸಚಿವ ಶ್ರೀ ಎಚ್. ಎಂ. ರೇವಣ್ಣನವರು ಮಾತನಾಡಿ ತಮ್ಮ ಮತ್ತು ದೆಹಲಿ ಕರ್ನಾಟಕ ಸಂಘಕ್ಕೆ ಇರುವ ಉತ್ತಮ ನಂಟನ್ನು ಪ್ರಸ್ತಾಪಿಸುತ್ತಾ ತಾವು ಅತೀ ಹೆಚ್ಚು ಬಾರಿ ಈ ಸಂಘದ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದೇನೆ. ಕಳೆದ ಡಿಸೆಂಬರ್‌ನಲ್ಲಿ ಇಲ್ಲಿ ನಡೆದ ಮೈಸೂರು ಸಾಂಸ್ಕೃತಿಕ ಕಲಾ ಉತ್ಸವದಲ್ಲಿ ಭಾಗವಹಿಸಿದ್ದೆ, ಕರ್ನಾಟಕದ ಸಂಸ್ಕೃತಿ ಮತ್ತು ಕಲೆಯ ಸೊಗಡನ್ನು ಇಲ್ಲಿನ ಕನ್ನಡಿಗರಿಗೆ ಪರಿಚಯಿಸಿದ್ದು, ಹಾಗೆಯೇ ತಾಲ್ಕಟೋರಾ ಕ್ರೀಡಾಂಗಣದಲ್ಲಿ ದೊಡ್ಡ ಮಟ್ಟದ ಕಾರ್ಯಕ್ರಮ ಆಯೋಜಿಸಿದ್ದು ಶ್ಲಾಘನೀಯ. ಶ್ರೀ ಸಿ.ಎಂ. ನಾಗರಾಜರು ಒಬ್ಬ ಕ್ರಿಯಾಶೀಲ ಅಧ್ಯಕ್ಷ, ಅವರು ಸಂಘಕ್ಕೆ ಅನುದಾನವಾಗಿ ಬಂದ ಸುಮಾರು ನಾಲ್ಕು ಕೋಟಿ ರೂಪಾಯಿಗಳಲ್ಲಿ ಒಂದು ಕೋಟಿ ರೂಪಾಯಿಗಳನ್ನು ಉಳಿಸಿ ಇನ್ನೊಂದು ಹೊಸ ಜಾಗವನ್ನ ತೆಗೆದುಕೊಳ್ಳಲು ಮೀಸಲಾಗಿಟ್ಟಿರುವುದು ಮೆಚ್ಚುವಂತಹದ್ದು ಎಂದರು.

ಸಂಗೊಳ್ಳಿ ರಾಯಣ್ಣನವರ ಬಗ್ಗೆ ಮಾತನಾಡುತ್ತಾ, ಅವರೊಬ್ಬ ಅಪ್ರತಿಮವೀರ, ಬ್ರಿಟಿಷರ ಗುಂಡಿಗೆ ಗಂಡುಗೆ ತೋರಿಸಿದ ಹೋರಾಟಗಾರ. ಅವರ ಸ್ಮರಣಾರ್ಥ ಸಂಗೊಳ್ಳಿಯಲ್ಲಿ ಅವರ ಸಮಾಧಿಯ ಬಳಿ 100 ಎಕರೆ ಜಾಗದಲ್ಲಿ ಅತ್ಯುತ್ತಮ ಸೈನಿಕ ಶಾಲೆ, ರಾಕ್ ಗಾರ್ಡನ್ ಇವೆ. ಹಾಗೇನೇ, ಬೆಳಗಾವಿ ಸಮೀಪ ಅತ್ಯುತ್ತಮ ಮ್ಯೂಸಿಯಂ ಹಾಗೂ ಕೆರೆಯೊಂದರಲ್ಲಿ ಅವರ ಪ್ರತಿಮೆ ಸ್ಥಾಪನೆಯಾಗಿದೆ. ಅದನ್ನು ನೋಡಲು ಇಲ್ಲಿನ ಕನ್ನಡಿಗರು ಭೇಟಿ ನೀಡಬೇಕೆಂದು ಕರೆ ನೀಡುತ್ತಾ ಹಿಂದೆ ತಾವು ನೆರವು ನೀಡಿದಂತೆಯೇ ದೆಹಲಿ ಕರ್ನಾಟಕ ಸಂಘದ ಮುಂದಿನ ಕಾರ್ಯಗಳಿಗೂ ಸಹಾ ತಮ್ಮ ಸಂಪೂರ್ಣ ಸಹಕಾರವಿರುತ್ತದೆ, ಇಲ್ಲಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಅಧ್ಯಕ್ಷ ಶ್ರೀ ಮಹಾದೇವ ಸಹಾ ಉತ್ತಮ ಕಾರ್ಯ ಮಾಡುತ್ತಿದ್ದಾರೆ. ಇಂದು ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಶೆಫರ್ಡ್ಸ್ ಇಂಡಿಯಾ ಇಂಟರ್ ನ್ಯಾಷನಲ್‌ನಿಂದ ಆಗಮಿಸಿರುವ ಇಲ್ಲಿನ ಅನೇಕ ಕನ್ನಡೇತರರಿಗೂ ಹಾಗೂ ದೆಹಲಿಯ ಕನ್ನಡಿಗರಿಗೆ ಹಾರ್ದಿಕ ಶುಭಾಶಯಗಳನ್ನು ತಿಳಿಸಿದರು.

ಮುಖ್ಯ ಅತಿಥಿಗಳಾದ ಶೆಫರ್ಡ್ಸ್ ಇಂಡಿಯಾ ಇಂಟರ್ ನ್ಯಾಷನಲ್ ಸಂಸ್ಥೆಯ ಅಧ್ಯಕ್ಷರೂ, ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಚ್. ವಿಶ್ವನಾಥ ಅವರು ಮಾತನಾಡಿ, ಸಂಗೊಳ್ಳಿ ರಾಯಣ್ಣನವರ ಹೆಸರು ಒಂದು ರೋಮಾಂಚನ, ಭಾರತದ ಸ್ವಾತಂತ್ರ್ಯ ಸಂಗ್ರಾಮದ ಮೊದಲ ಕಹಳೆ ಊದಿದವರು ಕಿತ್ತೂರು ರಾಣಿ ಚೆನ್ನಮ್ಮನ ಸೇನಾಧಿಪತಿಯಾಗಿದ್ದ (Commander in Chief) ಸ್ವಾತಂತ್ರ್ಯ ಸೇನಾನಿ ಸಂಗೊಳ್ಳಿ ರಾಯಣ್ಣ. ಅವರು ಸದಾ ಸ್ಮರಣಿ, ಅವರ ಹುಟ್ಟು ಸಾವಿನ ದಿನಗಳು ರಾಷ್ಟ್ರೀಯ ದಿನಗಳಾಗಿವೆ. 'ಸ್ಥಾವರಕ್ಕೆ ಅಳಿವುಂಟು ಜಂಗಮರಿಗೆ ಅಳಿವಿಲ್ಲ' ನಾವೆಲ್ಲ ರಾಯಣ್ಣ, ಕನಕದಾಸರು, ಬಸವಣ್ಣ, ಕೆಂಪೇಗೌಡರು ಹಾಗೆಯೇ ವೀರ ಸಾವರ್ಕರ್ ಮೊದಲಾದ ಇತಿಹಾಸ ಮಹಾಪುರುಷರನ್ನು ನಮ್ಮ ನಮ್ಮ ಪಂಜರದಲ್ಲಿಟ್ಟುಕೊಂಡಿದ್ದೇವೆ, ಚರಿತ್ರಾಕಾರರು ದೇಶಕ್ಕೋಸ್ಕರ ಹೋರಾಡಿದವರನ್ನು ಕಡೆಗಣಿಸುತ್ತಿದ್ದಾರೆ. ಇಂತಹ ಮಹನೀಯರನ್ನು ಮನೆ ಮನೆಗೆ ತಲುಪಿಸುವ ಕೆಲಸಗಳಾಗಬೇಕು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜರು ಇಲ್ಲಿನ ಸಂಗೊಳ್ಳಿ ರಾಯಣ್ಣ ಸಂಘದೊಂದಿಗೆ ರಾಯಣ್ಣನ ಜಯಂತೋತ್ಸವವನ್ನು ವೈಶಿಷ್ಟಪೂರ್ಣವಾಗಿ ಆಚರಿಸುತ್ತಿರುವುದು ಶ್ಲಾಘನೀಯ, ಹಾಗೂ ಅವರು ಮಾಡುತ್ತಿರುವ ಕಾರ್ಯಗಳು, ನಮ್ಮ ಕನ್ನಡಿಗರ ಮಕ್ಕಳ ನಾಗರಿಕ ಪರೀಕ್ಷೆ ತರಬೇತಿ ಮತ್ತು ವಸತಿ ಸೌಕರ್ಯಕ್ಕಾಗಿ ಸಂಘಕ್ಕಾಗಿ ಇನ್ನೊಂದು ಜಾಗವನ್ನು ಪಡೆಯಲು ಮಾಡುತ್ತಿರುವ ಪ್ರಯತ್ನಗಳು ಅಭಿನಂದನಾರ್ಹ




ಎಂದು ಹೇಳುತ್ತಾ ಮಾಜಿ ಸಚಿವರಾದ ಶ್ರೀ ಎಚ್. ಎಂ. ರೇವಣ್ಣನವರ ಸಂಚಾಲಕತೆಯಲ್ಲಿ ಬರುವ ಅಕ್ಟೋಬರ್ 2, ಗಾಂಧಿ ಜಯಂತಿಯ ದಿನದಂದು, ಬೆಳಗಾವಿಯಲ್ಲಿ ಎರಡು ದಿನಗಳ ಶೆಫರ್ಡ್ಸ್ ಇಂಡಿಯ ಇಂಟರ್‌ನ್ಯಾಷನಲ್‌ನ 9ನೇ ವಾರ್ಷಿಕೋತ್ಸವ ಹಮ್ಮಿಕೊಂಡಿರುವುದನ್ನ ಪ್ರಸ್ತಾಪಿಸಿ ಎಲ್ಲರನ್ನು ಆ ಕಾರ್ಯಕ್ರಮಕ್ಕೆ ಆಹ್ವಾನಿಸಿದರು.

ಅಧ್ಯಕ್ಷೀಯ ಭಾಷಣ ಮಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಮಾತನಾಡಿ, ದೆಹಲಿ ಕರ್ನಾಟಕ ಸಂಘ ಅಮೃತ ಮಹೋತ್ಸವ ಆಚರಿಸುತ್ತಿರುವ ಈ ಅಮೃತ ಕಾಲದಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದು 76 ವರ್ಷಗಳು ತುಂಬಿದ್ದು 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ನಾವು ಇಂದು ಆಚರಿಸುತ್ತಿದ್ದೇವೆ. ದೆಹಲಿ ಕರ್ನಾಟಕ ಸಂಘ ಒಂದು ಮಾತ್ರ ಸಂಸ್ಥೆಯಾಗಿ ಇತರ ಕನ್ನಡ ಪರ ಸಂಘ ಸಂಸ್ಥೆಗಳಿಗೆ ಕಾರ್ಯಕ್ರಮ ನಡೆಸಲು ಸಮಾನವಾಗಿ ಸಹಕಾರ ನೀಡುತ್ತಾ ಬಂದಿದ್ದು, ಅದೇ ನಿಟ್ಟಿನಲ್ಲಿ ಇಂದು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಜೊತೆ ರಾಯಣ್ಣನ ಜಯಂತೋತ್ಸವ ಆಚರಿಸುತ್ತಿರುವುದು ಸಾಂದರ್ಭಿಕವಾಗಿದೆ. ಸಂಗೊಳ್ಳಿರಾಯಣ್ಣ ಕನ್ನಡದ ಕಣ್ಮಣಿ, ಅವರ ಬಗ್ಗೆ ಪಠ್ಯ ಪುಸ್ತಕಗಳು ಬರಬೇಕು. ಅವರು ಸಾಮಾನ್ಯ ವೀರರಲ್ಲ, ಹುಲಿಯನ್ನು ಕೊಂದ ವೀರ ತಂದೆಯ ಮಗ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮ ಪ್ರಾಣ ಬಲಿದಾನ ನೀಡಿದ ಅವರನ್ನು ನೆನಪಿಸಿಕೊಳ್ಳುತ್ತಿರುವುದು ಹೆಮ್ಮೆಯ ಸಂಗತಿ ಎಂದರು. ಇಲ್ಲಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಸ್ಥಾಪನೆಗೆ ಮೂಲ ಕಾರಣಕರ್ತರು ಡಾ. ಮುನಿರಾಜು ಮತ್ತು ದೆಹಲಿ ಪೋಲಿಸ್‌ನ ಅಧಿಕಾರಿ ಶ್ರೀ ಮಂಜುನಾಥರವರು. ಈಗಿನ ಅಧ್ಯಕ್ಷರಾದ ಶ್ರೀ ಆರ್. ಮಹಾದೇವ, ಪ್ರಧಾನ ಕಾರ್ಯದರ್ಶಿ ಶ್ರೀ ಎಸ್.ಡಿ. ಶ್ರೀನಿವಾಸ ಹಾಗೂ ಕಾರ್ಯಕಾರಿ ಸಮಿತಿ ಚೆನ್ನಾಗಿ ಆ ಸಂಘವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಅವರಿಗೆ ದೆಹಲಿ ಕರ್ನಾಟಕ ಸಂಘದಿಂದ ಮುಂದೆಯೂ ಸಂಪೂರ್ಣ ಸಹಕಾರವಿರುತ್ತದೆ ಎಂದರು. ದೆಹಲಿ ಕರ್ನಾಟಕ ಸಂಘಕ್ಕೆ ಶ್ರೀ ಎಚ್.ಎಂ. ರೇವಣ್ಣನವರ ಕೊಡುಗೆಯನ್ನು ಪ್ರಸ್ತಾಪಿಸುತ್ತಾ, ಸಂಘದ ಈ ಸಾಂಸ್ಕೃತಿಕ ಸಮುಚ್ಚಯದ ಶಂಕುಸ್ಥಾಪನೆಯಲ್ಲಿಯೂ ಅವರು ಬಂದು ಅಡಿಗಲ್ಲನ್ನು ಇಟ್ಟವರು, ಇಲ್ಲಿನ ಜೆ.ಎನ್.ಯು.ನಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆಗೆ ಅವರ ಬೆಂಬಲ, ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಸಹಕಾರ ಹಾಗೂ ಐ.ಎ.ಎಸ್. ಅಧಿಕಾರಿಗಳಾದ ಶ್ರೀ ದಯಾನಂದ್‌ರವರ ನೆರವನ್ನು ನೆನಪಿಸಿಕೊಂಡರು.

ಮಾಜಿ ಸಚಿವರಾದ ಶ್ರೀ ಎಚ್. ವಿಶ್ವನಾಥರೂ ಸಹ ಸಂಘದ ಜೊತೆ ಸದಾ ನಿಂತಿದ್ದಾರೆ. ಹಾಗೇನೇ ಹಿಂದೆ ಸಂಘದ ಇದೇ ವೇದಿಕೆಯಲ್ಲಿ Shepherds India International ಸಂಸ್ಥೆಯೊಂದಿಗೆ ದೊಡ್ಡ ಮಟ್ಟದ ಕಾರ್ಯಕ್ರಮವನ್ನು ಶ್ರೀ ಎಚ್.ಎಂ. ರೇವಣ್ಣನವರ ಸಾರಥ್ಯದಲ್ಲಿ ಹಾಗೂ ಶ್ರೀ ಎಚ್. ವಿಶ್ವನಾಥರವರ ಮಾರ್ಗದರ್ಶನದಲ್ಲಿ ಸಂಗೊಳ್ಳಿ ರಾಯಣ್ಣ ಸಂಘದೊಂದಿಗೆ ಆಯೋಜಿಸಿದ್ದನ್ನು ನೆನಪಿಸಿಕೊಂಡರು. ಸಂಘದ ಜೊತೆ ಮೋತಿಬಾಗ್ ಮೆಟ್ರೋ ಸ್ಟೇಷನ್‌ನ ಹೆಸರನ್ನು ಸರ್.ಎಂ. ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ನಾಮಾಂಕರಣ ಮಾಡಲು ಸಹಕರಿಸಿದ ಅಂದಿನ ಕೇಂದ್ರ ಮಂತ್ರಿಗಳಾದ ಶ್ರೀ ಅನಂತಕುಮಾರ್, ಶ್ರೀ ಡಿ.ವಿ. ಸದಾನಂದ ಗೌಡ, ಶ್ರೀ ವೆಂಕಯ್ಯ ನಾಯ್ಡು ಅವರನ್ನು ಸದಾ ನೆನೆಯುತ್ತೇವೆ, ಮುಂದುವರಿದು, ನಮ್ಮ ಸಂಘವು ಯಾವುದೇ ಜಾತಿ, ಮತ, ಸಮುದಾಯಗಳ ಭೇದ ಭಾವ ಮಾಡದೇ ಇಲ್ಲಿನ ಎಲ್ಲಾ ಕನ್ನಡಿಗರಿಗೆ ಅನುಕೂಲವಾಗುವಂತಹ, ಕನಕ ಜಯಂತಿ, ಬಸವ ಜಯಂತಿ, ಅಂಬೇಡ್ಕರ್ ಜಯಂತಿ, ಸಂಗೊಳ್ಳಿ ರಾಯಣ್ಣ ಜಯಂತಿ, ಕೆಂಪೇಗೌಡ ಸ್ಮರಣೆ ಮುಂತಾದ ಕಾರ್ಯಕ್ರಮಗಳನ್ನು ಸದಾ ಆಯೋಜಿಸುತ್ತಾ ಬಂದಿದ್ದು, ಎಲ್ಲಾ ಸಂಘ ಸಂಸ್ಥೆಗಳಿಗೂ ಸಮಾನ ಅವಕಾಶ ನೀಡಿದೆ. ಬಸವಣ್ಣ, ರಾಯಣ್ಣ, ಕೆಂಪೇಗೌಡ, ಅಂಬೇಡ್ಕರ್‌ರವರು ಮಹಾ ಪುರುಷರು. ಅವರು ಯಾವುದೇ ಒಂದು ಸಮುದಾಯಕ್ಕೆ ಸೀಮಿತವಾಗದೇ ಎಲ್ಲರಿಗೂ ಸೇರಿದವರು. ಅವರ ತತ್ವಗಳು ಕೇವಲ ಬೋಧನೆ ಮಾಡಲು ಉಪಯೋಗಿಸದೇ ನಮ್ಮ ಜೀವನದಲ್ಲಿ ಅನುಕರಿಸುವಂತಾಗಬೇಕು. ಆಗಮಿಸಿರುವ ಅತಿಥಿಗಳಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತಾ ಎಲ್ಲರಿಗೂ ಸ್ವಾತಂತ್ರ್ಯೋತ್ಸವ ಮತ್ತು ಸಂಗೊಳ್ಳಿ ರಾಯಣ್ಣನವರ ಜಯಂತೋತ್ಸವದ ಹಾರ್ದಿಕ ಶುಭಾಶಯಗಳನ್ನು ತಿಳಿಸಿದರು.

ಸಭಾ ಕಾರ್ಯಕ್ರಮದ ನಿರೂಪಣೆಯನ್ನು ಜಂಟಿಯಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಸಂತೋಷ ಜೆ ಮತ್ತು ಶ್ರೀಮತಿ ಸವಿತಾ ನೆಲ್ಲಿಯವರು ಸುಂದರವಾಗಿ ನಿರ್ವಹಿಸಿದರು. ಆಗಮಿಸಿದ್ದ ಅತಿಥಿಗಳಿಗೆ ದೆಹಲಿ ಕರ್ನಾಟಕ ಸಂಘದ ವತಿಯಿಂದ ಸ್ಮರಣಿಕೆ, ಸ್ಮರಣಸಂಚಿಕೆ ನೀಡಿ ಗೌರವ ಸಮರ್ಪಣೆ ಮಾಡಲಾಯಿತು ಹಾಗು ಡಾ. ಮುನಿರಾಜು ಎಸ್.ಬಿ. ಅವರನ್ನು ಗೌರವಿಸಿ ಸನ್ಮಾನಿಸಲಾಯಿತು. ಇದೇ ಸಂದರ್ಭ, ದೆಹಲಿ ಪೋಲೀಸ್‌ನಲ್ಲಿ ಸೇವೆ ಸಲ್ಲಿಸಿ ಸೇವಾ ನಿವೃತ್ತಿ ತರುವಾಯ ತಾಯ್ನಾಡಿಗೆ ತೆರಳುತ್ತಿರುವ ಸಂಘದ ಆಜೀವ ಸದಸ್ಯರಾದ ಶ್ರೀ ಕೆ.ಪಿ. ನಾಗರಾಜ ಹಾಗೂ ಶ್ರೀ ಕೇಶವ ಮೂರ್ತಿಯವರನ್ನು ಸಂಘದ ಪರವಾಗಿ ಹಾಗೂ ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿ ವತಿಯಿಂದ ಸನ್ಮಾನಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು. ಅವರಿಬ್ಬರ ಕಿರು ಪರಿಚಯವನ್ನು ಶ್ರೀಮತಿ ಆಶಾಲತ ಮಹಾದೇವ ಅವರು ಮಾಡಿಕೊಟ್ಟರು.

ಧಾರವಾಡದಿಂದ ಆಗಮಿಸಿದ್ದ ಶ್ರೀ ಜಗ್ಗು ಜಾದೂಗರ್ ತಮ್ಮ ಮ್ಯಾಜಿಕ್ ಶೋದಿಂದ ಸಭಿಕರನ್ನು ರಂಜಿಸಿದರು. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಅಧ್ಯಕ್ಷ ಶ್ರೀ ಆರ್. ಮಹಾದೇವ ಅವರು ಆಗಮಿಸಿದ್ದ ಅತಿಥಿಗಳಿಗೆ, ವೇದಿಕೆಯಲ್ಲಿದ್ದ ಗಣ್ಯರಿಗೆ ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ್ದ ದೆಹಲಿ ಎನ್.ಸಿ.ಆರ್. ಕನ್ನಡಿಗರಿಗೆ ಮತ್ತು ಕನ್ನಡೇತರರಿಗೆ ವಂದನೆಗಳನ್ನು ಸಲ್ಲಿಸಿದರು. ಇಂದಿನಂತೆಯೇ ಮುಂದೆಯೂ ಸಂಗೊಳ್ಳಿ ರಾಯಣ್ಣನ ಜನ್ಮದಿನೋತ್ಸವವನ್ನು ಪ್ರತಿ ವರ್ಷ ಸ್ವಾತಂತ್ರ್ಯೋತ್ಸವದ ದಿನ ಸಂಘದ ವೇದಿಕೆಯಲ್ಲಿ ಆಯೋಜಿಸಬೇಕೆಂದು, ಅದಕ್ಕೆ ಬೇಕಾದ ಸಹಕಾರ ನೀಡುವಂತೆ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜರಿಗೆ ಮನವಿ ಮಾಡಿಕೊಂಡರು.

ಸಭಾ ಕಾರ್ಯಕ್ರಮದ ನಂತರ ಸ್ಥಳೀಯ ಮಹಿಳೆಯರಿಂದ, ಮಕ್ಕಳಿಂದ, ಗಾಯನ, ನೃತ್ಯ, ವಂದೇ ಮಾತರಂ ನೃತ್ಯರೂಪಕ, ನಾಟಕ ಕಲಾವಿದರಿಂದ ಸಂಗೊಳ್ಳಿ ರಾಯಣ್ಣ ಆಧಾರಿತ ಹಾಗೂ ಸ್ವಾತಂತ್ರ್ಯ ಹಿನ್ನೆಲೆ ಆಧಾರಿತ ಕಿರು ನಾಟಕಗಳು (small skits) ಹಾಗು ಧಾರವಾಡದ ರೈಸಿಂಗ್ ಸ್ಟಾರ್ ಅಕಾಡೆಮಿ ಕಲಾವಿದರಿಂದ ಸಮೂಹ ನೃತ್ಯಗಳು ಪ್ರಸ್ತುತಿಗೊಂಡು ನೆರೆದಿದ್ದವರ ಮನಸೂರೆಗೊಂಡವು. ಈ ಸಾಂಸ್ಕೃತಿಕ ಕಾರ್ಯಕ್ರಮದ ನಿರೂಪಣೆಯನ್ನು ಕ್ರಾಂತಿವೀರ









ಸಂಗೊಳ್ಳಿ ರಾಯಣ್ಣ ಸಂಘದ ಶ್ರೀಮತಿ ಆಶಾಲತ ಎಂ. ಅವರು ನಿರ್ವಹಿಸಿಕೊಟ್ಟರು. ಅಪಾರ ಸಂಖ್ಯೆಯಲ್ಲಿ ಸಭಾಂಗಣದಲ್ಲಿ ನೆರೆದಿದ್ದ ದೆಹಲಿ ಎನ್.ಸಿ.ಆರ್. ಕನ್ನಡಿಗರು, ಕನ್ನಡೇತರರು ಈ ಸ್ವಾತಂತ್ರ್ಯೋತ್ಸವ ಹಾಗು ಸಂಗೊಳ್ಳಿ ರಾಯಣ್ಣ ಜಯಂತೋತ್ಸವದಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.■


***ಅಭಿಮತ ವರದಿ***





## "ಚಿಕ್ಕ ವಯಸ್ಸಿನಲ್ಲಿಯೇ ಹತ್ತಾರು ಯೋಗ ಸಾಧನೆಗಳ ಮೂಲಕ ಮಸ್ಸೂರಿಯ ಖ್ಯಾತ 'LBSNAA' ತರಬೇತಿ ಕೇಂದ್ರದಲ್ಲಿ , ಐಎಎಸ್ ಅಧಿಕಾರಿಗಳ ಯೋಗ ತರಬೇತಿದಾರನಾಗಿ ಆಯ್ಕೆಯಾದ ದೆಹಲಿ ಕನ್ನಡಿಗ ಮುರುಳಿ"

ತುಮಕೂರು ಜಿಲ್ಲೆಯ ಶಿರಾ ತಾಲೂಕಿನ ಎಂ.ಜಿ. ಪಾಳ್ಯ ಗ್ರಾಮದ ಬಡ ಮತ್ತು ರೈತ ಕುಟುಂಬದ ಮುರುಳಿ. ಎಂ.ಆರ್ ತಮ್ಮ ಉನ್ನತ ವಿದ್ಯಾಭ್ಯಾಸಕ್ಕಾಗಿ 2018 ರಲ್ಲಿ ದೆಹಲಿಗೆ ಬಂದು ತಮ್ಮ B.sc ಯೋಗ ಪದವಿಯನ್ನು ವಿಶ್ವದ ಅತ್ಯುನ್ನತ ಯೋಗ ಕಾಲೇಜುಗಳಲ್ಲಿ ಒಂದಾದ ಮೋರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥಾನದಲ್ಲಿ (MDNIY) ನಿರ್ದೇಶಕರಾಗಿದ್ದ ಡಾ. ಈಶ್ವರ್ ವಿ. ಬಸವರಡ್ಡಿ ಅವರ ಮಾರ್ಗದರ್ಶನದಲ್ಲಿ ಪಡೆದು, ಹಿಂದಿ ಭಾಷೆ ಗೊತ್ತಿಲ್ಲದ ಹುಡುಗ ಅನೇಕ ಸವಾಲುಗಳನ್ನು ಎದುರಿಸಿ ತಮ್ಮ ವಿದ್ಯಾಭ್ಯಾಸದಲ್ಲಿ ಮುಂದುವರೆದು ಇಂದು ಒಬ್ಬ ಅತ್ಯುನ್ನತ ಯೋಗ ಚಿಕಿತ್ಸಕನಾಗಿ ಅನೇಕ ಕ್ಷೇತ್ರಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇವರು 2021 ರಲ್ಲಿ ಯೋಗ ವಿಜ್ಞಾನದಲ್ಲಿ ತಮ್ಮ ಬಿಎಸ್ಸಿ ಪದವಿಯನ್ನು ಮುಗಿಸಿ ನಂತರ ಎಂ.ಎಸ್ಸಿ. ಯೋಗ ವಿಷಯದಲ್ಲಿ ತಮ್ಮ ಸ್ನಾತಕೋತ್ತರ ಪದವಿ ಪಡೆದುಕೊಂಡಿದ್ದು, ವಿದ್ಯಾಭ್ಯಾಸದ ಜೊತೆಗೆ ಬೇರೆ ಬೇರೆ ರಾಜ್ಯಗಳಲ್ಲಿ ನಡೆಯುವ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಆರೋಗ್ಯ ಮೇಳದಲ್ಲಿ ಯೋಗ ಚಿಕಿತ್ಸಕರಾಗಿ ತಮ್ಮ ಸಮಯವನ್ನು ಮತ್ತು ಸೇವೆಯನ್ನು ನೀಡುತ್ತ ಬಂದಿದ್ದಾರೆ. ಹಾಗೆಯೇ ಪ್ರತಿ ವರ್ಷ ದೆಹಲಿಯಲ್ಲಿ ನಡೆಯುವ ಭಾರತ ಅಂತರರಾಷ್ಟ್ರೀಯ ವ್ಯಾಪಾರ ಮೇಳದಲ್ಲಿ ವಿದೇಶಗಳಿಂದ ಬರುವ ಜನರ ಆರೋಗ್ಯ ಸಮಸ್ಯೆಗಳಿಗೆ ಯೋಗ ಸೇವೆಯ ಮುಖಾಂತರ ಪರಿಹಾರವನ್ನು ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ಅದಲ್ಲದೆ, ಭಾರತ ಸರ್ಕಾರದ ವಿವಿಧ ಮಂತ್ರಾಲಯದ ಸಚಿವರಿಗೆ, ಕಾರ್ಯದರ್ಶಿಗಳಿಗೆ, ಹಿರಿಯ ಐಎಎಸ್ ಅಧಿಕಾರಿಗಳಿಗೆ ಯೋಗ ಚಿಕಿತ್ಸಕರಾಗಿ ತಮ್ಮ ಸೇವೆಯನ್ನು ನೀಡಿರುತ್ತಾರೆ. ಇದರೊಂದಿಗೆ ಅನೇಕ ಮಂತ್ರಾಲಯ ಮತ್ತು ಶಾಲೆಗಳಲ್ಲಿ ಯೋಗ ಕಾರ್ಯಾಗಾರಗಳನ್ನು ಮಾಡಿರುತ್ತಾರೆ, ದೇಶದ



ಹೆಮ್ಮೆಯ ರಕ್ಷಣಾ ಪಡೆಗಳಾದ ಎನ್. ಎಸ್.ಜಿ, ಏರ್ ಫೋರ್ಸ್ ಮತ್ತು ಬಿ.ಎಸ್.ಎಫ್ ನ ಕಮಾಂಡೋ ಮತ್ತು ಅಧಿಕಾರಿಗಳಿಗೆ ಯೋಗ ತರಬೇತಿಯನ್ನು ಸಹನೀಡಿರುತ್ತಾರೆ. ಕೊರೋನ ಸಮಯದಲ್ಲಿ ದೇಶದ ಅನೇಕ ಆಸ್ಪತ್ರೆಗಳಿಗೆ ಹೋಗಿ ಯೋಗದ ಮೂಲಕ ಕರೋನವನ್ನು ತಡೆಗಟ್ಟಬಹುದು ಎಂದು ಕರೋನ ಬಗೆಗಿನ ಬಿಕ್ಕಟ್ಟು ನಿವಾರಿಸಲು ಜನರಿಗೆ ಆತ್ಮವಿಶ್ವಾಸ ಮೂಡಿಸಿದ್ದಾರೆ. ಮತ್ತು ತಾವು ಹುಟ್ಟಿ ಬೆಳೆದ ಗ್ರಾಮವನ್ನು ಯೋಗ ಗ್ರಾಮವನ್ನಾಗಿ ಮಾಡಲು ಪಣತೊಟ್ಟು ಯೋಗ ಶಿಬಿರಗಳನ್ನು ಪ್ರಾರಂಭಿಸಿದ್ದಾರೆ. ಇವರು ಎಂ.ಎಸ್ಸಿ ಯೋಗ ಪದವಿಯಲ್ಲಿ ಹೆಚ್ಚು ಪರಿಚಿತವಿಲ್ಲದ ದೇಶದ ಪುರಾತನ ಸಂಪ್ರದಾಯ ವ್ರತವಾದ 'ಚಂದ್ರಾಯಣ ವ್ರತ' ಮಾಡುವ ಮೂಲಕ ದೇಹದ ತೂಕವನ್ನು ಮತ್ತು ಕೊಲೆಸ್ಟ್ರಾಲ್ ಕಡಿಮೆ ಮಾಡಬಹುದು ಎಂಬುದನ್ನು ತಮ್ಮ ಸಂಶೋಧನೆ ಮೂಲಕ ತಿಳಿಸಿಕೊಟ್ಟಿದ್ದಾರೆ. ಕಳೆದ ಎರಡು ವರ್ಷಗಳಿಂದ NCERT ನಡೆಸಿಕೊಂಡು ಬರುತ್ತಿರುವ 'DD PM e-Vidya ಚಾನೆಲ್‌ನ "ಯೋಗ ಶಕ್ತಿ" ನೇರಪ್ರಸಾರ ಕಾರ್ಯಕ್ರಮದಲ್ಲಿ ಯೋಗ Demonstrator ಆಗಿಯೂ ಸಹ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಸಾಧನೆಯನ್ನು ಗಮನಿಸಿ ಭಾರತ ಸರ್ಕಾರದ ಆಯುಷ್ ಮಂತ್ರಾಲಯದ ಮೋರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥಾನ ಕಾಲೇಜಿನ ಅತ್ಯುತ್ತಮ ವಿದ್ಯಾರ್ಥಿ ಎಂದು ಪರಿಗಣಿಸಿ 25,000 ನಗದು ಮತ್ತು ಪ್ರಮಾಣ ಪತ್ರವನ್ನು ನೀಡಿ ಗೌರವಿಸಿದ್ದಾರೆ. ಅಲ್ಲದೆ ಇವರ ಸಾಧನೆಯನ್ನು ಗುರುತಿಸಿ ಎಂ.ಎಸ್ಸಿ ಪದವಿ ಮುಗಿದ ನಂತರ ದೇಶದ ಆಡಳಿತ ವ್ಯವಸ್ಥೆಯನ್ನು ನಡೆಸಿಕೊಂಡು ಹೋಗುವ ಯುಪಿಎಸ್ಸಿ (UPSC) ಪಾಸಾದ ಐಎಎಸ್ ವಿದ್ಯಾರ್ಥಿಗಳಿಗೆ ನೀಡುವ ಫೌಂಡೇಶನ್ ಕೋರ್ಸ್‌ಗೆ ಯೋಗ ಶಿಕ್ಷಕರಾಗಿ ಆಯ್ಕೆ ಭಾರತ ಸರ್ಕಾರದ ಆಯುಷ್ ಮಂತ್ರಾಲಯದ ಮೋರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥಾನ ಇವರನ್ನು 'ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಅಕಾಡೆಮಿ ಆಫ್ ಅಡ್ಮಿನಿಸ್ಟ್ರೇಷನ್ (LBSNAA) ಗೆ ಕಳುಹಿಸಿಕೊಡಲಾಗಿದೆ'. ಪ್ರಧಾನಿ ನರೇಂದ್ರ ಮೋದಿಯವರು ಯೋಗ ಪ್ರಚಾರ, ಪ್ರಸಾರಕ್ಕಾಗಿ ಬಹಳಷ್ಟು ಸಹಕಾರ ನೀಡುತ್ತಿರುವ ಸಂದರ್ಭದಲ್ಲಿ ಪ್ರಧಾನಿಗಳಿಂದ ಮತ್ತು ಸಂಸ್ಥೆಯ ಯಶಸ್ವಿ ನಿರ್ದೇಶಕರಾಗಿದ್ದ ಡಾ. ಈಶ್ವರ್ ವಿ. ಬಸವರಡ್ಡಿಯವರ ಯೋಗ ಸೇವೆಯಿಂದ ಸ್ಫೂರ್ತಿ ಪಡೆದು ಭವಿಷ್ಯತ್ತಿನಲ್ಲಿ ಯೋಗದಲ್ಲಿ ಸಂಶೋಧನೆ ಮಾಡುವ ಮೂಲಕ ದೇಶಾದ್ಯಾಂತ ಯೋಗ ಪ್ರಸಾರ, ಪ್ರಚಾರದ ಗುರಿ ಮತ್ತು ಸೇವಾ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಮತ್ತು ಅಭಿಮತ ಓದುಗರ ಪರವಾಗಿ ಅಭಿನಂದನೆಗಳು. ■

***ಶ್ರೀ ಯಲ್ಲಾಲಿಂಗ ಕೊಪ್ಪದ***

ಸದಸ್ಯ, ಅಭಿಮತ ಸಂಪಾದಕ ಮಂಡಳಿ

## ದೆಹಲಿ ಕರ್ನಾಟಕ ಸಂಘದಲ್ಲಿ ಅಹೋರಾತ್ರಿ ಯಕ್ಷಗಾನ:

# ಹನುಮಗಿರಿ ಶ್ರೀ ಕೋದಂಡರಾಮ ಕೃಪಾ ಪೋಷಿತ ಯಕ್ಷಗಾನ ಮಂಡಳಿಯಿಂದ “ಶುಕ್ರನಂದನೆ” ಪ್ರಸ್ತುತಿ



ಕರ್ನಾಟಕದ ಸಾಂಸ್ಕೃತಿಕ ಕಲಾ ಪರಂಪರೆಗಳಲ್ಲಿ ಯಕ್ಷಗಾನವು ರಾಜ್ಯಾದ್ಯಂತ ಮತ್ತು ದೇಶ ವಿದೇಶಗಳಲ್ಲಿ ವಿಶಿಷ್ಟವಾದ ಸ್ಥಾನವನ್ನು ಹೊಂದಿದ್ದು ವಿಶ್ವ ಪ್ರಸಿದ್ಧಿ ಪಡೆದಿದೆ. ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿಯೂ ಸಹ ಅನೇಕ ಯಕ್ಷಗಾನಗಳು ಈ ಹಿಂದೆಯೂ ಪ್ರದರ್ಶನಗೊಂಡಿದ್ದು, ಅಮೃತ ಮಹೋತ್ಸವ ಜಿಲ್ಲಾವಾರು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಾಲಿಗ್ರಾಮ ಮೇಳದವರಿಂದ ‘ದಕ್ಷ ಯಜ್ಞ ಗದಾಯುದ್ಧ’ ಯಕ್ಷಗಾನ ಪ್ರಸಂಗ, ಮಂಡ್ಯದ ವಿವೇಕಾ ವಿದ್ಯಾ ಸಂಸ್ಥೆಯ ಶಾಲಾ ಮಕ್ಕಳಿಂದ ಶ್ರೀ ದೇವಿ ಮಹಾತ್ಮೆ ಮೂಡಲಪಾಯ ಯಕ್ಷಗಾನ, ಬಾರಿಸು ಕನ್ನಡ ಡಿಂಡಿಮವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕೆರೆಮನೆ ಶಿವಾನಂದ ಹೆಗಡೆಯವರ ಇಡುಗುಂಜಿ ಮಹಾಗಣಪತಿ ಮೇಳದವರಿಂದ ‘ಪಂಚವಟಿ’ ಯಕ್ಷಗಾನ ಪ್ರಸಂಗಗಳು ಪ್ರಸ್ತುತಿಗೊಂಡಿವೆ. ಈ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ಮತ್ತೊಂದು ಅದ್ಭುತವಾದ ಯಕ್ಷಗಾನ ‘ಶುಕ್ರನಂದನೆ’ ಪ್ರಸಂಗ ಹನುಮಗಿರಿ ಶ್ರೀ ಕೋದಂಡರಾಮ ಕೃಪಾ ಪೋಷಿತ ಯಕ್ಷಗಾನ ಮಂಡಳಿ ವತಿಯಿಂದ ಕಳೆದ ಅಗಸ್ಟ್ 19, 2023 ರಂದು ಪೂರ್ತಿ ರಾತ್ರಿ ಇಲ್ಲಿನ ಆರ್.ಕೆ. ಪುರಂನಲ್ಲಿರುವ ದೆಹಲಿ ಕರ್ನಾಟಕ ಸಂಘದ ತುಂಬಿ ತುಳುಕುತ್ತಿದ್ದ ಸಭಾಂಗಣಧಲ್ಲಿ ಪ್ರದರ್ಶನಗೊಂಡು ಅಪಾರ ಜನಮನ್ನಣೆ ಪಡೆಯಿತು.

ಯಕ್ಷಗಾನ ಪ್ರಸ್ತುತಿಯ ಮೊದಲು, ಆಯೋಜನೆಗೊಂಡ ಸಭಾ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ನಿವೃತ್ತ ಐ.ಎ.ಎಸ್. ಅಧಿಕಾರಿ, ಮಾಜಿ ಕರ್ನಾಟಕ ಲೋಕಸೇವಾ ಆಯೋಗದ ಆಯುಕ್ತರಾದ ಡಾ. ಟಿ. ಶ್ಯಾಮಭಟ್, ಬ್ಯೂರೋ ಆಫ್ ಪೋಲಿಸ್ ರೀಸರ್ಚ್ ಅಂಡ್ ಡೆವಲಪ್‌ಮೆಂಟಿನ ಡಿ.ಐ.ಜಿ.ಗಳಾದ ಹಿರಿಯ ಐ.ಪಿ.ಎಸ್. ಅಧಿಕಾರಿ ಶ್ರೀ ಎನ್. ರಾಜಶೇಖರ್ ಹಾಗೂ ಕೇಂದ್ರ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿಗಳಾದ ಡಾ. ಕೆ.ಜೆ. ಶ್ರೀನಿವಾಸ, ಐ.ಎಫ್.ಎಸ್ ಹಾಗು ಜಾನಪದ ವಿದ್ವಾಂಸರೂ, ಸಂಘದ ಮಾಜಿ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ವಹಿಸಿದ್ದರು., ಯಕ್ಷ ಮಂಜೂಷದ ನಿರ್ದೇಶಕಿಯಾದ ಶ್ರೀಮತಿ ವಿದ್ಯಾ ಕೊಳ್ಯೂರು ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕು. ದೇವಿಯ ಪ್ರಾರ್ಥನೆ ಹಿನ್ನೆಲೆಯಲ್ಲಿ ಅತಿಥಿಗಳಿಂದ ದೀಪ ಪ್ರಜ್ವಲನೆಯೊಂದಿಗೆ ಕಾರ್ಯಕ್ರಮವನ್ನು ಶುಭಾರಂಭ ಮಾಡಲಾಯಿತು. ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಕಾರ್ಯಕ್ರಮ ನಿರೂಪಣೆ ಮಾಡುತ್ತಾ ಎಲ್ಲರನ್ನು ಬರಮಾಡಿಕೊಂಡರು. ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಸರವು ಕೃಷ್ಣ ಭಟ್ ಮುಖ್ಯ ಅತಿಥಿಗಳನ್ನು ಮತ್ತು ನೆರೆದಿದ್ದ ಯಕ್ಷಗಾನ ಪ್ರೇಮಿಗಳನ್ನು ಆತ್ಮೀಯವಾಗಿ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಯಕ್ಷಗಾನ ಕಲೆಯು ಕರಾವಳಿ ಪ್ರದೇಶದಲ್ಲಿ ಅತ್ಯಂತ ಜನಪ್ರಿಯವಾಗಿದ್ದು, ರಾಜ್ಯಾದ್ಯಂತ, ದೇಶ ವಿದೇಶಗಳಲ್ಲಿ ವರ್ಷಕ್ಕೆ ಸರಿ ಸುಮಾರು 12 ಸಾವಿರಕ್ಕೂ ಹೆಚ್ಚು ತೆಂಕುತಿಟ್ಟು, ಬಡಗುತಿಟ್ಟು ಮೂಡಲಪಾಯ ಯಕ್ಷಗಾನಗಳು ಪ್ರದರ್ಶನವಾಗುತ್ತಿವೆ. ಮಂಗಳೂರು ಮೂಲದ ಯಕ್ಷ ಮಂಜೂಷ ಅಮೆರಿಕದಲ್ಲೂ ಸಹ ಕಳೆದ ನಾಲ್ಕು ವರ್ಷಗಳಲ್ಲಿ 25ಕ್ಕೂ ಹೆಚ್ಚು ಪ್ರದರ್ಶನಗಳನ್ನು ಆಯೋಜಿಸಿದೆ. ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲೂ ಅನೇಕ ಯಕ್ಷಗಾನ ಪ್ರದರ್ಶನಗಳು ಪ್ರಸ್ತುತಿಯಾಗಿವೆ ಹಾಗು ದೆಹಲಿಯ ಹಲವೆಡೆ ಸಹ ಈ ಹಿಂದೆ ಬಹಳಷ್ಟು ಯಕ್ಷಗಾನಗಳು ಪ್ರದರ್ಶನ ಕಂಡಿವೆ. ಇಂದಿನ ಅಹೋರಾತ್ರಿ ಶುಕ್ರನಂದನೆ ಯಕ್ಷಗಾನ ಪ್ರಸ್ತುತಿ ನೀಡುತ್ತಿರುವ ಹನುಮಗಿರಿ ಶ್ರೀ ಕೋದಂಡರಾಮ ಯಕ್ಷಗಾನ ಮಂಡಳಿಯವರಿಗೆ, ಮಂಡಳಿ ಮುಖ್ಯಸ್ಥರಾದ ಡಾ. ಟಿ. ಶ್ಯಾಮ್ ಭಟ್‌ರವರಿಗೆ, ಆಯೋಜನೆಯಲ್ಲಿ ಸಹಕರಿಸುತ್ತಿರುವ ಯಕ್ಷ ಮಂಜೂಷ ನಿರ್ದೇಶಕಿ ಶ್ರೀಮತಿ ವಿದ್ಯಾ ಕೊಳ್ಯೂರುರವರಿಗೆ ಅಭಿನಂದನೆಗಳು, ಹಾಗು ನಮಗೆ ಮಾರ್ಗದರ್ಶನ ನೀಡುತ್ತಿರುವ ಯಕ್ಷಪ್ರೇಮಿ, ಜಾನಪದ ವಿದ್ವಾಂಸರಾದ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದರು.

ಮುಖ್ಯ ಅತಿಥಿಗಳಲ್ಲಿ ಮೊದಲು ಮಾತನಾಡಿದ ಹಿರಿಯ ಐ.ಪಿ.ಎಸ್. ಅಧಿಕಾರಿ ಶ್ರೀ ಎನ್. ರಾಜಶೇಖರ್ ಅವರು ಕರ್ನಾಟಕದ ಜಾನಪದ ಸೊಗಸು ಯಕ್ಷಗಾನ, ಶತಮಾನಗಳಿಂದ ಈ ಕಲೆಯನ್ನು ಜೀವಂತವಾಗಿರಿಸಿಕೊಂಡು ಬಂದಿದ್ದಾರೆ, ಯುಪಿಎಸ್‌ಸಿ ಪರೀಕ್ಷೆಗಳಲ್ಲಿ ಸಹಾ ಕನ್ನಡ ಐಚ್ಛಿಕ ವಿಷಯ ಆಯ್ದುಕೊಂಡವರು, ಯಕ್ಷಗಾನದ ಮೇಲೆ ಒಂದೆರಡು ಪ್ರಶ್ನೆಗಳನ್ನು ಖಂಡಿತಾ ನಿರೀಕ್ಷಿಸಬಹುದು, ಸಾವಿರಾರು ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆಯಲ್ಲಿ ಪಂಪ ಸಾಹಿತ್ಯ, ವಚನ ಸಾಹಿತ್ಯ, ದಾಸ ಸಾಹಿತ್ಯ ಮುಂತಾದ ಕಾಲಘಟ್ಟಗಳಲ್ಲಿ ಕನ್ನಡ ಸಾಹಿತ್ಯ ಬೆಳವಣಿಗೆ ಕಂಡಿದೆ. ನಾಡಿನ ಜಾನಪದ ಕಲೆಗಳು ಇಂದು ವಿಶ್ವದಾದ್ಯಂತ ಪ್ರದರ್ಶನವಾಗುತ್ತಿರುವುದು ಸಂತಸದ ವಿಷಯವೆಂದರು.

ಇನ್ನೊರ್ವ ಮುಖ್ಯ ಅತಿಥಿಗಳಾದ ಐ.ಎಫ್.ಎಸ್. ಅಧಿಕಾರಿ ಡಾ. ಕೆ.ಜೆ. ಶ್ರೀನಿವಾಸ ಅವರು ಮಾತನಾಡಿ ಅಮೃತ ಮಹೋತ್ಸವ ಸಂಭ್ರಮದಲ್ಲಿರುವ ದೆಹಲಿ ಕರ್ನಾಟಕ ಸಂಘ ಒಂದು ಪ್ರತಿಷ್ಠಿತ ಸಂಸ್ಥೆ. ಇಂದು ಯಕ್ಷಗಾನ ವೀಕ್ಷಿಸಲು ಇಷ್ಟು ಜನ ಕನ್ನಡಿಗರು ಇಲ್ಲಿ ಬಂದಿರುವುದನ್ನು ನೋಡಿ ತಮಗೆ ಅತ್ಯಂತ ಸಂತೋಷವಾಗಿದೆ. ಅಮೇರಿಕಾ, ಗಯಾನ, ಯುರೋಪ್, ಸೌತ್‌ಆಫ್ರಿಕಾದಂತಹ ಹೊರದೇಶಗಳಲ್ಲಿ ತಾವು ಭಾರತದ ರಾಯಭಾರಿಯಾಗಿ ಕೆಲಸ ಮಾಡುತ್ತಿದ್ದ ಸಂದರ್ಭಗಳಲ್ಲಿ ರಾಜ್ಯದ ಭಾರತದ ಸಂಸ್ಕೃತಿ ಹಾಗೂ ಕನ್ನಡ ಭಾಷೆ, ಕಲೆಗಳನ್ನು ಅಲ್ಲಿನ ಜನರಿಗೆ ಪರಿಚಯಿಸುವಂತಹ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಇತ್ತೀಚಿಗೆ ದೆಹಲಿಗೆ ಹಿಂದಿರುಗಿ ಬಂದ ನಂತರ ತಾವು ಭಾಗಿಯಾಗುತ್ತಿರುವ ಮೊದಲ ಕಾರ್ಯಕ್ರಮವಿದು, ‘ಯಕ್ಷಗಾನ’ವನ್ನು ಮೊದಲ ಬಾರಿಗೆ ಪ್ರತ್ಯಕ್ಷವಾಗಿ ನೋಡಲು ತಮಗೆ ಸಿಕ್ಕ ಈ ಸದವಕಾಶಕ್ಕಾಗಿ ಸಂಘಕ್ಕೆ ಕೃತಜ್ಞತೆ ವ್ಯಕ್ತಪಡಿಸಿದರು.

ಅತಿಥಿಗಳಾಗಿ ಉಪಸ್ಥಿತರಿದ್ದ ಶ್ರೀಮತಿ ವಿದ್ಯಾ ಕೊಳ್ಯೂರು, ನಿರ್ದೇಶಕಿ ಯಕ್ಷಮಂಜೂಷ ಅವರು ಮಾತನಾಡಿ, ತಾವು 4 ವರ್ಷಗಳಲ್ಲಿ ಅಮೇರಿಕಾದಲ್ಲಿ 25ಕ್ಕೂ ಹೆಚ್ಚು ಯಕ್ಷಗಾನ ಪ್ರದರ್ಶನ ಆಯೋಜಿಸಿದ್ದು 32 ಕಲಾವಿದರ ಹನುಮಗಿರಿ ಶ್ರೀ ಕೋದಂಡರಾಮ ಕೃಪಾ ಪೋಷಿತ ಯಕ್ಷಗಾನ ಮಂಡಳಿ ವತಿಯಿಂದ ದೆಹಲಿಯಲ್ಲಿ ಪ್ರಥಮ ಯಕ್ಷಗಾನ ಪ್ರದರ್ಶನ ಮಾಡಲು ಅವಕಾಶ ನೀಡಿದ ಸಂಘದ ಅಧ್ಯಕ್ಷರಿಗೆ ಹಾಗು ದೆಹಲಿಯ ಯಕ್ಷಗಾನ ಪ್ರೇಮಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ, ಹನುಮಗಿರಿ ಯಕ್ಷಗಾನ ಮಂಡಳಿಯ ದಣಿಗಳಾದ ಡಾ. ಶ್ಯಾಮ ಭಟ್ ಅವರು ಕಲಾವಿದರ ಸಮಸ್ಯೆಗಳಿಗೆ, ಕುಂದು ಕೊರತೆಗಳಿಗೆ ಸದಾ ಚಿಂತಿಸುತ್ತಾರೆ, ಬೇಕಾದ ಸಹಾಯ ಹಸ್ತ ನೀಡುತ್ತಾರೆ. ಪ್ರತಿ ವರ್ಷ ಊರಿನಲ್ಲಿ ಆಯೋಜಿಸುವ 24 ಗಂಟೆಗಳ ನಿರಂತರವಾದ ಯಕ್ಷೋತ್ಸವದಲ್ಲಿ 10,000ಕ್ಕೂ ಹೆಚ್ಚು ಜನರು ಭಾಗವಹಿಸುತ್ತಾರೆ. ಅದರ ಮುಖ್ಯ ರೂವಾರಿ

ಡಾ. ಶ್ಯಾಮ್ ಭಟ್ ರವರು ಎಂದರು.

ಇನ್ನೊರ್ವ ಮುಖ್ಯ ಅತಿಥಿಗಳೂ, ಜಾನಪದ ವಿದ್ವಾಂಸರಾದ ಡಾ. ಪುರುಷೋತ್ತಮ ಬಿಳಿಮಲೆಯವರು ಮಾತನಾಡಿ ಯಕ್ಷಗಾನ ಒಂದು ದೊಡ್ಡಲೋಕ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಲ್ಲೊಂದು ಎಸೆದರೆ ಅದು ಯಾವುದಾದರೂ ಒಬ್ಬ ಯಕ್ಷಗಾನ ಕಲಾವಿದನ ತಲೆ ಮೇಲೆ ಬೀಳುತ್ತದೆ ಎಂಬ ಮಾತಿದೆ ಎಂದರು. ಇಂದಿನ ಕಾರ್ಯಕ್ರಮದ ಮುಖ್ಯ ಕೇಂದ್ರ ಬಿಂದುವಾದ ಡಾ. ಶ್ಯಾಮ್ ಭಟ್‌ರವರ ಬಗ್ಗೆ ಮಾತನಾಡುತ್ತಾ ಅವರು ಬಹಳ ಹೆಸರುವಾಸಿ ಯಾಗಿರುವಂತಹವರು, ಅವರನ್ನು ಅಲ್ಲಿನ ಜನರು ಎಂಗಳ ಶ್ಯಾಮಣ್ಣ ಎಂದು ಪ್ರೀತಿಯಿಂದ ಕರೆಯುತ್ತಾರೆ. ಅವರ ಜೀವನದ ಒಂದು ಆಯಾಮವೆಂದರೆ ಅವರು ಐ.ಎ.ಎಸ್. ಅಧಿಕಾರಿಯಾಗಿ ಒಬ್ಬ ಉತ್ತಮ ಆಡಳಿತಗಾರರಾಗಿದ್ದರು. ಕೆ.ಎಸ್.ಆರ್.ಟಿ.ಸಿ. ಕಾರ್ಯದರ್ಶಿಯಾಗಿ, ಬೀದರ ಮತ್ತು ಉಡುಪಿ ಜಿಲ್ಲಾಧಿಕಾರಿಯಾಗಿ, ಧಾರ್ಮಿಕ ಮತ್ತು ದತ್ತಿ ಇಲಾಖೆ ಆಯುಕ್ತರಾಗಿ, ಬಿ.ಡಿ.ಎ. ಅಧ್ಯಕ್ಷರಾಗಿ, ಕೆ.ಪಿ.ಎಸ್.ಸಿ. ಛೇರ್ಮನ್ ಆಗಿ ಸೇವೆ ಸಲ್ಲಿಸಿದ್ದಾರೆ.

ಯಕ್ಷಗಾನ ಕ್ಷೇತ್ರಕ್ಕೆ ವಿದ್ಯಾವಂತರು ಪ್ರವೇಶವಾದ ಕಾಲಘಟ್ಟದಲ್ಲಿ ಕಲಾ ಪೋಷಕರಾಗಿ ಯಕ್ಷಗಾನಕ್ಕೆ ಜಾತ್ರೆ ಆಯಾಮ ಕೊಟ್ಟವರು ಡಾ. ಶ್ಯಾಮಣ್ಣನವರು. ಹನುಮಗಿರಿಯ ಯಕ್ಷಗಾನ ಮಂಡಳಿ ಮುಖ್ಯಸ್ಥರಾದ ಶ್ರೀಯುತರು, ಹಳ್ಳಿ ಹಳ್ಳಿಗಳಲ್ಲಿ ಭಜನಾ ಮಂದಿರಗಳ ರಿಪೇರಿ, ಜೋಡಾಟ, ಯಕ್ಷಗಾನ ಜಾತ್ರೆ, ಯಕ್ಷೋತ್ಸವ ಆಯೋಜನೆ ಮುಂತಾದವುಗಳಲ್ಲಿ ನೀಡಿದ ಕೊಡುಗೆ ಅಸಾಮಾನ್ಯವಾದದ್ದು. ಯಕ್ಷೋತ್ಸವದಲ್ಲಿ ಒಂದು ಕಲೆ ಯಾವ ಮಟ್ಟದಲ್ಲಿ ಸಂಭ್ರಮಿಸುವುದು ಎಂದು ನೋಡಬಹುದು. ದೇಶ ವಿದೇಶಗಳಲ್ಲಿ ಯಕ್ಷಗಾನ ಪ್ರದರ್ಶಿಸುವುದು ಒಂದು ಚಾರಿತ್ರಿಕ ಕೆಲಸ, ಇವರು ಸಹಾಯ, ಮಾರ್ಗದರ್ಶನ ನೀಡುವುದಲ್ಲದೇ ನಿರ್ದೇಶನವನ್ನೂ ಸುಸೂತ್ರವಾಗಿ ನಿಭಾಯಿಸಿ ತಂಡದ ಸೃಜನಶೀಲತೆಯನ್ನು ಹೆಚ್ಚಿಸಿದ್ದಾರೆ. ಕಡಲಲ್ಲಿ ಸಿಕ್ಕಿದ್ದು ಮುತ್ತು ಮತ್ತು ಸಿಗಲಾಗದು ಸಾಗರ ಎಂಬ ಮಾತಿನಂತೆ, ಶ್ರೀ ಶೇಣಿ ಗೋಪಾಲಕೃಷ್ಣ ಭಟ್‌ರವರಂತೆ ಇವರು ಒಬ್ಬ ಕಲಾವಿದರೂ ಕೂಡ, ಕಲಾ ಪೋಷಕರಾಗಿ ಈ ಕಲೆಯನ್ನು ಅಭಿವೃದ್ಧಿಪಡಿಸುವಲ್ಲಿ ಮುಖ್ಯ ಭೂಮಿಕೆ ವಹಿಸಿದ್ದಾರೆ ಎಂದರು.

ನಂತರ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಡಾ. ಟಿ. ಶ್ಯಾಮ ಭಟ್ ಅವರನ್ನು ದೆಹಲಿ ಕರ್ನಾಟಕ ಸಂಘದ ಪರವಾಗಿ ಗೌರವಿಸಿ ಸನ್ಮಾನಿಸಲಾಯಿತು. ಅವರ ವಿವರವಾದ ಪರಿಚಯವನ್ನು ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಸವಿತಾ ನೆಲ್ಲಿ ಅವರು ಮಾಡಿಕೊಟ್ಟರು.

ಅಭಿನಂದನೆಯನ್ನು ಸ್ವೀಕರಿಸಿ ಮಾತನಾಡಿದ ಡಾ. ಟಿ. ಶ್ಯಾಮ್ ಭಟ್ ರವರು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ತಮ್ಮ ಹನುಮಗಿರಿ ಶ್ರೀ ಕೋದಂಡರಾಮ ಕೃಪಾ ಪೋಷಿತ ಯಕ್ಷಗಾನ ಮಂಡಳಿಗೆ ಶುಕ್ರನಂದನೆ (ಅಂದರೆ ಶುಕ್ರಾಚಾರ್ಯರ ಮಗಳು ದೇವಯಾನಿ) ಯಕ್ಷಗಾನ ಪ್ರಸಂಗವನ್ನು ಪ್ರದರ್ಶಿಸಲು ಅವಕಾಶ ಮಾಡಿಕೊಟ್ಟ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಮತ್ತು ಪದಾಧಿಕಾರಿಗಳಿಗೆ ತಮ್ಮ ಕೃತಜ್ಞತೆ ಅರ್ಪಿಸಿದರು. ಈಗ ಯಕ್ಷಗಾನದ ಭೌಗೋಳಿಕ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ, ದೇಶ ವಿದೇಶಗಳಲ್ಲಿ ಯಕ್ಷಗಾನ ಪ್ರದರ್ಶನವಾಗುತ್ತಿದೆ. ಪಟ್ಲ ಸತೀಶ್ ಶೆಟ್ಟಿಯವರೂ ಉತ್ತಮ ರೀತಿಯಲ್ಲಿ ಯಕ್ಷಗಾನ ಕಲೆಯನ್ನು ಜಾಗತಿಕ ಮಟ್ಟದಲ್ಲಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಯಕ್ಷಗಾನದ ಮೂಲ ಸ್ವರೂಪ ಇಡೀ ರಾತ್ರಿ ಪ್ರದರ್ಶನ, ಮಧ್ಯರಾತ್ರಿಯ ನಂತರ ಪ್ರೇಕ್ಷಕರ ಸಂಖ್ಯೆ ಕಡಿಮೆಯಾಗುತ್ತಿದ್ದ ಹಿನ್ನೆಲೆಯಲ್ಲಿ ಇತ್ತೀಚೆಗೆ ಕಾಲಮಿತಿಯಲ್ಲಿ ಬದಲಾವಣೆ, ಸುಧಾರಣೆಗಳಾಗಿವೆ. ಧರ್ಮಸ್ಥಳ ಮೇಳದವರೂ ಸಹಾ ಹೊಸ ಸಂಯೋಜನೆ, ಚಿಂತನೆ, ಹೊಸ ಥೀಮ್‌ನೊಂದಿಗೆ ಹೊಸ ರೂಪದಲ್ಲಿ ಯಕ್ಷಗಾನ ನಡೆಸುತ್ತಿದ್ದಾರೆ. ಡಾ. ಬಿಳಿಮಲೆ ಮತ್ತು ತಾವು ಸುಳ್ಯದಿಂದ ಬಂದವರು ಪರಸ್ಪರ ಅಭಿಮಾನ ಪಡುವವರು, ತಮ್ಮನ್ನು ಸನ್ಮಾನಿಸಿದ ದೆಹಲಿ ಕರ್ನಾಟಕ ಸಂಘಕ್ಕೆ, ದೆಹಲಿಯ ಕನ್ನಡಾಭಿಮಾನಿಗಳಿಗೆ ಯಕ್ಷಪ್ರೇಮಿಗಳಿಗೆ ವಂದನೆಗಳನ್ನು ಅರ್ಪಿಸುತ್ತೇನೆ ಎಂದು ಹೇಳಿದರು.

ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ಏರ್ಪಡಿಸಲಾದ ಇಂದಿನ ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲಾ ಮುಖ್ಯ ಅತಿಥಿಗಳಿಗೆ ಹಾಗು ಸಭಾಂಗಣದಲ್ಲಿ ಉಪಸ್ಥಿತರಿದ್ದ ಸುಪ್ರೀಂಕೋರ್ಟಿನ ಅಡಿಷನಲ್ ಸಾಲಿಸಿಟರ್



ಜನರಲ್ ಶ್ರೀ ನಟರಾಜ್‌ರವರಿಗೂ, ಅಪಾರ ಸಂಖ್ಯೆಯಲ್ಲಿ ಭಾಗಿಯಾಗಿದ್ದ ದೆಹಲಿ ಕನ್ನಡಿಗರಿಗೆ ಧನ್ಯವಾದಗಳನ್ನು ತಿಳಿಸುತ್ತಾ, ಈ ಸಂಘದ ಈ ಸುಂದರ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣ ಕಾರ್ಯ ಡಾ. ಪುರುಷೋತ್ತಮ ಬಿಳಿಮಲೆಯವರ ಅಧ್ಯಕ್ಷತೆ ಅವಧಿಯಲ್ಲಿ ಆಗಿದ್ದನ್ನು ನೆನೆದು ಅವರ ಪರಿಶ್ರಮವನ್ನು ಹಾಗೂ ಜೆ.ಎನ್.ಯು.ನಲ್ಲಿ ಕನ್ನಡ ಅಧ್ಯಯನ ಪೀಠದ ಹಿಂದಿನ ಮುಖ್ಯಸ್ಥರಾಗಿದ್ದ ಅವರ ಕಾರ್ಯ ಅವಧಿಯ ಕಾರ್ಯಗಳನ್ನು ಶ್ಲಾಘಿಸಿದರು. ದೆಹಲಿ ಕರ್ನಾಟಕ ಸಂಘ ಆಯೋಜಿಸಿದ್ದ ಬಾರಿಸು ಕನ್ನಡ ಡಿಂಡಿಮವ ಕಾರ್ಯಕ್ರಮದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಭಾಗವಹಿಸಿದ್ದನ್ನು ಉಲ್ಲೇಖಿಸಿ, ಸಂಘದ ಮುಂದಿನ ಕಾರ್ಯಗಳ ಧ್ಯೇಯೋದ್ದೇಶಗಳ ಬಗ್ಗೆ ಸಂಕ್ಷಿಪ್ತ ವಿವರ ನೀಡುತ್ತಾ ಸಂಘವು ಇನ್ನೊಂದು ಜಾಗವನ್ನು ಪಡೆಯುವ ನಿಟ್ಟಿನಲ್ಲಿ ಎಲ್ಲರ ಸಹಕಾರ ಕೋರಿದರು. ಇಂದು ಈ ಯಕ್ಷಗಾನ ಪ್ರಸಂಗದ ಪ್ರಸ್ತುತಿಯಾಗಲು ಪ್ರಮುಖ ಕಾರಣಕರ್ತರಾದ ಹನುಮಗಿರಿ ಯಕ್ಷಗಾನ ಮಂಡಳಿಯ ಮುಖ್ಯಸ್ಥರಾಘದ ಡಾ. ಟಿ. ಶ್ಯಾಮ



**ಹನುಮಗಿರಿ ಶ್ರೀಕೋದಂಡರಾಮ ಕೃಪಾಪೋಷಿತ ಯಕ್ಷಗಾನ ಮಂಡಳಿಯ ಧಣಿಗಳಾದ ಡಾ. ಟಿ. ಶಾಮ್ ಭಟ್‌ರವರನ್ನು ಸಂಘದ ವೇದಿಕೆಯಲ್ಲಿ 'ಶುಕ್ರನಂದನೆ' ಯಕ್ಷಗಾನ ಪ್ರಸ್ತುತಿ ಸಂದರ್ಭ ಅಭಿನಂದಿಸಿದ ಕ್ಷಣ**



ಭಟ್‌ರವರಿಗೆ, ಶ್ರೀಮತಿ ವಿದ್ಯಾ ಕೊಳ್ಳೂರು ಹಾಗೂ ಯಕ್ಷಗಾನ ತಂಡದ ಎಲ್ಲ ಕಲಾವಿದರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಯನ್ನು ತಿಳಿಸಿದರು.

ಸಭಾಕಾರ್ಯಕ್ರಮವನ್ನು ಸುಂದರವಾಗಿ ನಿರ್ವಹಿಸಿದ ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಅವರು ಆಗಮಿಸಿದ್ದ ಮುಖ್ಯ ಅತಿಥಿಗಳನ್ನು, ಕಿಕ್ಕಿರಿದು ತುಂಬಿದ್ದ ಸಭಾಂಗಣದಲ್ಲಿ ಆಸೀನರಾಗಿದ್ದ ಯಕ್ಷಗಾನ ಪ್ರೇಮಿಗಳಿಗೆ ವಂದನೆಗಳನ್ನು ಸಲ್ಲಿಸಿದರು. ಸಭಾ ಕಾರ್ಯಕ್ರಮದ ನಂತರ ರಾತ್ರಿ ಸುಮಾರು 11 ಗಂಟೆಯಿಂದ ಮರುದಿನ ಬೆಳಿಗ್ಗೆ 7.30 ಗಂಟೆಯವರೆಗೆ ಪ್ರದರ್ಶನಗೊಂಡ **'ಶುಕ್ರನಂದನೆ'** ಯಕ್ಷಗಾನವು ದೆಹಲಿ ಕನ್ನಡಿಗರ ಮನಸೂರೆಗೊಂಡಿತು.ದೇವಯಾನಿ, ಕಚ, ಶುಕ್ರಾಚಾರ್ಯ, ಶರ್ಮಿಷ್ಠೆ, ಯಯಾತಿ ಮತ್ತು ಪುರುವಿನ ಕತೆಯು ಯಕ್ಷಗಾನ ಪಾತ್ರಧಾರಿಗಳ ವೇಷಭೂಷಣ, ಅಮೋಘ ಪ್ರದರ್ಶನ, ಭಾಗವತರ ಹಿಮ್ಮೇಳ, ಚಂಡೆ ವಾದನ, ಭಾಗವಹಿಸಿದ 500ಕ್ಕೂ ಹೆಚ್ಚು ಯಕ್ಷ ಪ್ರೇಮಿಗಳ ಪ್ರಶಂಸೆಗೆ ಪಾತ್ರವಾಯಿತು. ಸಂಘದ ಸಭಾಂಗಣದಲ್ಲಿ ಪೂರ್ತಿ ರಾತ್ರಿ ಪ್ರಸ್ತುತಿ ಮಾಡಿದ ಪ್ರತಿಭಾವಂತ ಕಲಾವಿದರ ಹನುಮಗಿರಿ ತಂಡವು ಸ್ವಾರಸ್ಯಕರವಾದ ಕತೆಯನ್ನು ಸಮರ್ಥವಾಗಿ ಪ್ರೇಕ್ಷಕರ ಮುಂದಿಟ್ಟಿತು.



ಯಕ್ಷಗಾನ ಪ್ರದರ್ಶನದ ಜೊತೆ ಜೊತೆಗೆ, ಆಗಮಿಸಿದ್ದವರಿಗೆ ಚುರುಮುರಿ, ಬಿಸಿಬಿಸಿ ಬೋಂಡಾ, ಬಜ್ಜಿ, ವಡೆ, ಕಾಫಿ, ಟೀಗಳ ವ್ಯವಸ್ಥೆಯನ್ನು ಸಂಘದ ವತಿಯಿಂದ ಮಾಡಲಾಗಿತ್ತು. ಈ ಕಾರ್ಯದಲ್ಲಿ ಸಹಯೋಗ ನೀಡಿದ ಶ್ರೀಮತಿ ರತ್ನ ಮತ್ತು ಶ್ರೀ ಸತ್ಯನಾರಾಯಣ ಪದಿ ದಂಪತಿಗಳಿಗೆ ಕೃತಜ್ಞತೆಗಳು. ಯಕ್ಷಗಾನ ಪ್ರದರ್ಶನದ ಕೊನೆಯಲ್ಲಿ ಆಯೋಜಿಸಿದ್ದ ಲಕ್ಕಿ ಡ್ರಾನಲ್ಲಿ ವಿಜೇತರಾದ ಹತ್ತು ಜನರಿಗೆ ಆಕರ್ಷಕ ಬಹುಮಾನ ನೀಡಲಾಯಿತು. ಹನುಮಗಿರಿ ಶ್ರೀ ಕೋದಂಡರಾಮ ಯಕ್ಷಗಾನ ಮಂಡಳಿಯ ಮುಖ್ಯ ಆಯೋಜಕರಿಗೆ, ಭಾಗವತರಿಗೆ, ವ್ಯವಸ್ಥಾಪಕರಿಗೆ ಹಾಗೂ ಎಲ್ಲಾ 32 ಕಲಾವಿದರಿಗೆ ಸಂಘದ ಪರವಾಗಿ ಗೌರವಿಸಿ ಪದಕ ನೀಡಿ ಸನ್ಮಾನಿಸಲಾಯಿತು. ದೆಹಲಿಯಲ್ಲಿ ಆಯೋಜನೆಗೊಂಡ ಯಕ್ಷಗಾನಗಳಲ್ಲಿಯೇ ಅತ್ಯಂತ ಉತ್ತಮ ಪ್ರದರ್ಶನ ಶುಕ್ರನಂದನೆ ಯಕ್ಷಗಾನ ಪ್ರಸಂಗವಾಗಿತ್ತು. ಹನುಮಗಿರಿ ಯಕ್ಷಗಾನ ಮಂಡಳಿಯ ಎಲ್ಲಾ ಕಲಾವಿದರಿಗೆ ಅಭಿನಂದನೆಗಳು.■

***ಅಭಿಮತ ವರದಿ***





### ತಮ್ಮ ಜನ್ಮದಿನವನ್ನು ಶಿಕ್ಷಕರ ದಿನವನ್ನಾಗಿ ಆಚರಣೆ ಮಾಡಲು ಆದ್ಯತೆ ನೀಡಿದ ಆದರ್ಶ ಶಿಕ್ಷಕ

# ಡಾ. ಸರ್ವಪಲ್ಲಿ ರಾಧಾಕೃಷ್ಣನ್



ಭಾರತದ ಮೊದಲ ಉಪರಾಷ್ಟ್ರಪತಿ ಮತ್ತು ಎರಡನೇ ರಾಷ್ಟ್ರಪತಿಗಳಾದ ಡಾ. ಎಸ್ ರಾಧಾಕೃಷ್ಣನ್ ಅವರು ಖ್ಯಾತ ವಿದ್ವಾಂಸರು, ಪ್ರಸಿದ್ಧ ತತ್ವಜ್ಞಾನಿಗಳು ಮತ್ತು ಶ್ರೇಷ್ಠ ಶಿಕ್ಷಣ ತಜ್ಞರಾಗಿದ್ದರು. ಮಕ್ಕಳ ಹಾಗೂ ಯುವ ಜನತೆಯ ಮನಸ್ಸು ಮತ್ತು ಭವಿಷ್ಯವನ್ನು ರೂಪಿಸುವಲ್ಲಿ ಶಿಕ್ಷಕರು ಪ್ರಮುಖ ಪಾತ್ರ ವಹಿಸುತ್ತಾರೆ ಹಾಗೂ ನಿಜವಾದ ಅರ್ಥದಲ್ಲಿ ಅವರೇ ರಾಷ್ಟ್ರದ ನಿರ್ಮಾತೃಗಳು ಎಂದು ಅವರು ನಂಬಿದ್ದರು. 1962ರಲ್ಲಿ ಡಾ. ರಾಧಾಕೃಷ್ಣನ್ ರಾಷ್ಟ್ರಪತಿಯಾಗಿದ್ದಾಗ ಅವರ ವಿದ್ಯಾರ್ಥಿಗಳು ಮತ್ತು ಸ್ನೇಹಿತರು ಅವರ 77ನೇ ಜನ್ಮದಿನವನ್ನು ಆಚರಿಸಬಹುದೇ ಎಂದು ಕೇಳಿದಾಗ ಅವರು ಬದಲಿಗೆ ಸೆಪ್ಟಂಬರ್ 5 ಅನ್ನು "ಶಿಕ್ಷಕರ ದಿನ"ವನ್ನಾಗಿ ಆಚರಿಸಲು ತಾವು ಆದ್ಯತೆ ನೀಡುವುದಾಗಿ ಹೇಳಿ, ತಮ್ಮ ಜನ್ಮದಿನವನ್ನು ಆಚರಿಸಲು ನಿರಾಕರಿಸಿದರು.

ಸಮಾಜಕ್ಕೆ ಅವರು ನೀಡಿದ ಕೊಡುಗೆಗಳನ್ನು ಗೌರವಿಸಲು ಶಿಕ್ಷಕರು "ವಿಶೇಷ ದಿನ"ಕ್ಕೆ ಅರ್ಹರು ಎಂದು ಅವರು ಪ್ರತಿಪಾದಿಸಿದ್ದರು. ಡಾ. ರಾಧಾಕೃಷ್ಣನ್ ಅವರ ಮಾತುಗಳಿಗೆ ಕಿವಿಗೊಟ್ಟು 1962ರಿಂದ ಭಾರತದಲ್ಲಿ ಸೆಪ್ಟೆಂಬರ್ 5 ಅನ್ನು "ಶಿಕ್ಷಕರ ದಿನ"ವನ್ನಾಗಿ ಆಚರಿಸಲಾಗುತ್ತಿದೆ. ಈ ದಿನದಂದು ವಿದ್ಯಾರ್ಥಿಗಳು, ಪೋಷಕರು ಶಿಕ್ಷಣದ ಮಹತ್ವವನ್ನು ತಿಳಿಯಲು, ಕಲಿಯಲು, ಬೆಳೆಯಲು ಹಾಗೂ ಮುಂದೆ ಬರಲು ಸಹಾಯ ಮಾಡಿದ ಶಿಕ್ಷಕರಿಗೆ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಲು ಶಿಕ್ಷಕರೊಂದಿಗೆ ಒಟ್ಟಾಗಿ ಸೇರುತ್ತಾರೆ. ಶ್ರೀ ರಾಧಾಕೃಷ್ಣನ್ ಅವರು ಜೀವನವನ್ನು ಪರಿವರ್ತಿಸುವ ಶಿಕ್ಷಣದ ಶಕ್ತಿಯಲ್ಲಿ ಅಪಾರ ನಂಬಿಕೆ ಹೊಂದಿದ್ದರು. ಶಿಕ್ಷಣದ ಮಹಾನ್ ಪ್ರತಿಪಾದಕರಾಗಿದ್ದ ಅವರು, ಅದು ಪ್ರಗತಿಗೆ ಕೀಲಿಯಾಗಿದೆ ಎಂದು ನಂಬಿದ್ದರು.

ಶಿಕ್ಷಕರ ಪ್ರಾಮುಖ್ಯತೆಯ ಕುರಿತು ಡಾ. ಎಸ್. ರಾಧಾಕೃಷ್ಣನ್ ಅವರ ಕೆಲವು ಉಲ್ಲೇಖಗಳು ಇಲ್ಲಿವೆ. 'ಜಗತ್ತನ್ನು ಬದಲಾಯಿಸಲು ನೀವು ಬಳಸಬಹುದಾದ ಅತ್ಯಂತ ಶಕ್ತಿಶಾಲಿ ಅಸ್ತ್ರ ಶಿಕ್ಷಣವಾಗಿದೆ' 'ಶಿಕ್ಷಕರು ಭವಿಷ್ಯದ ಸೃಷ್ಟಿಕರ್ತ ಹಾಗೂ ವಾಸ್ತುಶಿಲ್ಪಿಗಳು, ಶಿಕ್ಷಕರು, ವಿದ್ಯಾರ್ಥಿಗಳ ಪಾತ್ರ, ಮನಸ್ಸು ಮತ್ತು ಬುದ್ಧಿ ಶಕ್ತಿಯನ್ನು ರೂಪಿಸುವವರು, ಶಿಕ್ಷಕರು ಮನುಷ್ಯರನ್ನು ರಚಿಸುವವರು, ಶಿಕ್ಷಕರು ವಿದ್ಯಾರ್ಥಿಗಳ ಆದರ್ಶ ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಿ ಇತ್ಯಾದಿ. ಸೆಪ್ಟೆಂಬರ್ 5. 1988 ರಂದು ಬ್ರಿಟಿಷ್ ಇಂಡಿಯಾದ ಮದ್ರಾಸ್ ಪ್ರೆಸಿಡೆನ್ಸಿಯ ತಿರುತ್ತಣಿಯಲ್ಲಿ, ಬಡ ತೆಲುಗು ಬ್ರಾಹ್ಮಣ ಕುಟುಂಬದಲ್ಲಿ ಸರ್ವಪಲ್ಲಿ ವೀರಸ್ವಾಮಿ ಮತ್ತು ಸೀತಮ್ಮ ದಂಪತಿಗಳ ಮೂರು ಜನ ಮಕ್ಕಳಲ್ಲಿ ಎರಡನೆಯವರಾಗಿ ರಾಧಾಕೃಷ್ಣನ್ ಜನಿಸಿದರು. ಅವರು ವಿದ್ಯಾರ್ಥಿ ದೆಸೆಯಲ್ಲಿ ಅದ್ಭುತವಾದ ಪ್ರತಿಭೆಯನ್ನು ಹೊಂದಿದ್ದರು. ವಿದ್ಯಾರ್ಥಿ ವೇತನದ ಮೂಲಕ ತಮ್ಮ ಶಿಕ್ಷಣವನ್ನು ಪೂರ್ಣಗೊಳಿಸಿದರು. ಮದ್ರಾಸ್ ವಿಶ್ವವಿದ್ಯಾಲಯದಿಂದ ತತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ನಂತರ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಿ ಅಲ್ಲಿ ಅವರು ತತ್ವಶಾಸ್ತ್ರದಲ್ಲಿ ಡಿಫಿಲ್ ಗಳಿಸಿದರು. ಭಾರತಕ್ಕೆ ಹಿಂದಿರುಗಿದ ನಂತರ ರಾಧಾಕೃಷ್ಣನ್ ರವರು ಮೈಸೂರು ವಿಶ್ವವಿದ್ಯಾಲಯ, ಕಲ್ಕತ್ತಾ ವಿಶ್ವವಿದ್ಯಾಲಯ, ಚೆನ್ನೈನ ಪ್ರೆಸಿಡೆನ್ಸಿ ಕಾಲೇಜು ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳು ಸೇರಿದಂತೆ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ತತ್ವಶಾಸ್ತ್ರವನ್ನು ಬೋಧಿಸಿದರು. ರವೀಂದ್ರನಾಥ್ ಟ್ಯಾಗೋರ್ ಮತ್ತು ತತ್ವಶಾಸ್ತ್ರ, ಸಮಕಾಲೀನ ತತ್ವಶಾಸ್ತ್ರದಲ್ಲಿ ಧರ್ಮದ ಆಳ್ವಿಕೆ, ಜೀವನದ ಹಿಂದೂ ದೃಷ್ಟಿಕೋನ, ಕಲ್ಕಿ ಅಥವಾ ನಾಗರಿಕತೆಯ ಭವಿಷ್ಯ, ನಮಗೆ ಬೇಕಾದ ಧರ್ಮ, ಗೌತಮ ಬುದ್ಧ, ಭಾರತ ಮತ್ತು ಚೀನಾ ಮುಂತಾದ ಹಲವಾರು ಪುಸ್ತಕಗಳನ್ನು ಅವರು ಬರೆದಿದ್ದಾರೆ. ಅವರ ತತ್ವಶಾಸ್ತ್ರವು ಅದ್ವೈತ ವೇದಾಂತದಲ್ಲಿ ನೆಲೆಗೊಂಡಿದ್ದು, ಸಮಕಾಲೀನ ತಿಳುವಳಿಕೆಗಾಗಿ ಈ ಸಂಪ್ರದಾಯವನ್ನು ಮರು ವ್ಯಾಖ್ಯಾನಿಸಿದವರು ಡಾ. ರಾಧಾಕೃಷ್ಣನ್ ಅವರು ಹಿಂದೂ ಧರ್ಮದ ತಿಳುವಳಿಕೆ ಇಲ್ಲದ ಪಾಶ್ಚಾತ್ಯ ಟೀಕೆಯ ವಿರುದ್ಧ ಸಮರ್ಥಿಸಿಕೊಂಡವರು. ಸಮಕಾಲೀನ ಹಿಂದೂ ಗುರುತಿನ ರಚನೆಗೆ ಕೊಡುಗೆ ನೀಡಿದರು. ಭಾರತ ಮತ್ತು ಪಶ್ಚಿಮ ರಾಷ್ಟ್ರಗಳ ನಡುವೆ ಸೇತುವೆ ನಿರ್ಮಾಪಕರೆಂದೂ ಖ್ಯಾತಿಯನ್ನು ಗಳಿಸಿದ್ದಾರೆ. ಅವರು ಸಾಹಿತ್ಯಕ್ಕಾಗಿ 16 ಬಾರಿ ಮತ್ತು ನೋಬಲ್ ಶಾಂತಿ ಪ್ರಶಸ್ತಿಗೆ ಹನ್ನೊಂದು ಬಾರಿ ಸೇರಿದಂತೆ 27 ಬಾರಿ ನೊಬೆಲ್ ಪ್ರಶಸ್ತಿಗೆ ನಾಮನಿರ್ದೇಶನಗೊಂಡರು. ಅವರು ಸ್ವೀಕರಿಸಿದ ಇತರ ಪ್ರಮುಖ ಗೌರವಗಳಲ್ಲಿ 1931 ರಲ್ಲಿ ಬ್ರಿಟಿಷ್ ನೈಟ್ ಬ್ಯಾಚುಲರ್ಶಿಪ್ ಆಗಿತ್ತು. ಆದರೂ ಅವರು ಭಾರತಕ್ಕೆ ಸ್ವಾತಂತ್ರ್ಯವನ್ನು ಪಡೆದ ನಂತರ ಸರ್ ಎಂಬ ಬಿರುದನ್ನು ಬಳಸುವುದನ್ನು ನಿಲ್ಲಿಸಿದರು. ಡಾ. ಎಸ್. ರಾಧಾಕೃಷ್ಣನ್, 1903 ರಲ್ಲಿ ಶಿವಕಾಮು ಅವರನ್ನು ಮದುವೆಯಾದರು. ಈ ದಂಪತಿಗಳಿಗೆ ಒಟ್ಟು ಆರು ಮಕ್ಕಳು, ಒಂದು ಗಂಡು ಮತ್ತು ಐದು ಜನ ಹೆಣ್ಣು ಮಕ್ಕಳು. ಮಗ ಸರ್ವಪಲ್ಲಿ ಗೋಪಾಲ್ ಅವರೂ ಸಹ ಒಬ್ಬ ಹೆಸರಾಂತ ಲೇಖಕರೂ, ಸುಪ್ರಸಿದ್ಧ ಭಾರತೀಯ ಇತಿಹಾಸಕಾರರಾಗಿದ್ದರು.

ಡಾ. ಎಸ್. ರಾಧಾಕೃಷ್ಣನ್ 1931 ರಲ್ಲಿ ನೈಟ್ ಹುಡ್ ನಂತರ 1938 ರಲ್ಲಿ ಅವರು ಬ್ರಿಟಿಷ್ ಅಕಾಡೆಮಿಯ ಫೆಲೋ ಆಗಿ ಆಯ್ಕೆಯಾದರು. 1954 ರಲ್ಲಿ ಜರ್ಮನ್ ಆರ್ಡರ್ ಫಾರ್ ಲಾ, ಮೆರಿಟ್ ಫಾರ್ ಆರ್ಟ್ಸ್ ಅಂಡ್ ಸೈನ್ಸ್ ಮತ್ತು 1963 ರಲ್ಲಿ ಬ್ರಿಟಿಷ್ ರಾಯಲ್ ಆರ್ಡರ್ ಆಫ್ ಮೆರಿಟ್‌ನ ಗೌರವ ಸದಸ್ಯತ್ವವನ್ನು ಪಡೆದರು. ಆಕ್ರಮಣ ಶೀಲತೆಯನ್ನು ಪ್ರತಿಪಾದಿಸಿ, ಪ್ರೀತಿ ಮತ್ತು ಬುದ್ಧಿವಂತಿಕೆಯನ್ನು ಎಲ್ಲಾ ಜನರಿಗೆ ತಿಳಿಸಿದ್ದಕ್ಕಾಗಿ 1975ರಲ್ಲಿ ಟೆಂಪಲ್ಟನ್ ಪ್ರಶಸ್ತಿಯನ್ನು ಸಹಾ ಇವರಿಗೆ ನೀಡಲಾಯಿತು. ಅವರು 1931 ರಿಂದ 1936 ರವರೆಗೆ ಆಂಧ್ರ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ಮತ್ತು 1939ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾಲಯದ (ಬಿಹೆಚ್‌ಯು) ಉಪಕುಲಪತಿಯಾಗಿ ಸೇವೆ ಸಲ್ಲಿಸಿದ್ದರು. ಸೋವಿಯತ್ ಯೂನಿಯನ್‌ಗೆ ಭಾರತದ ರಾಯಭಾರಿಯಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಅವರು 1952 ರಿಂದ 1962ರ ವರೆಗೆ ಭಾರತದ ಮೊದಲ ಉಪ ರಾಷ್ಟ್ರಪತಿಯಾಗಿ, ನಂತರ 1962ರಿಂದ 1967 ರವರೆಗೆ ಭಾರತದ ಎರಡನೇ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದ್ದರು. ಅವರಿಗೆ 1954 ರಲ್ಲಿ ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ" ಭಾರತರತ್ನ" ವನ್ನು ನೀಡಿ ಗೌರವಿಸಲಾಗಿದೆ. ಅವರು 1952ರಲ್ಲಿ ಭಾರತದ ಎರಡನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮವಿಭೂಷಣವನ್ನು ಸಹ ಪಡೆದಿದ್ದರು. ರಾಧಾಕೃಷ್ಣನ್: ಎ ಬಯಾಗ್ರಫಿ ಮತ್ತು ಜವಾಹರಲಾಲ್ ನೆಹರು: ಎ ಬಯೋಗ್ರಫಿ ಮುಂತಾದ ಕೃತಿಗಳ ಲೇಖಕರಾದ ಇವರ ಮಗ ಸರ್ವಪಲ್ಲಿ ಗೋಪಾಲ್ ಸಹಾ ಪದ್ಮವಿಭೂಷಣ ಪ್ರಶಸ್ತಿಯಿಂದ ಗೌರವಿಸಲ್ಪಟ್ಟಿದ್ದಾರೆ. ಎಲ್ಲರಿಗೂ ಶಿಕ್ಷಣದಲ್ಲಿ ನಿಜವಾದ ನಂಬಿಕೆ ಅವರು, ಎಲ್ಲಾ ಸಾಧನೆಗಳ, ಕೊಡುಗೆಗಳ ಹೊರತಾಗಿಯೂ ತಮ್ಮ ಜೀವನದುದ್ದಕ್ಕೂ ಶಿಕ್ಷಕರಾಗಿಯೇ ಉಳಿದರು. ಡಾ. ಎಸ್. ಸರ್ವಪಲ್ಲಿ ರಾಧಾಕೃಷ್ಣನ್ ರವರು ಏಪ್ರಿಲ್ 17, 1975 ರಂದು ತಮ್ಮ 87ನೇ ವಯಸ್ಸಿನಲ್ಲಿ ನಿಧನರಾದರು.

ಭಾರತವು ರಾಷ್ಟ್ರೀಯ ಶಿಕ್ಷಕರ ದಿನವನ್ನು ರಾಧಾಕೃಷ್ಣನ್ ಅವರ ಜನ್ಮ ದಿನದ ನೆನಪಿಗಾಗಿ ಆಚರಿಸುತ್ತಾ ಬಂದಿದೆ. ಈ ದಿನದಂದು ಅವರ ಸಾಧನೆಗಳಿಗೆ ಗೌರವವನ್ನು ನೀಡಲು,ಪ್ರತಿ ವರ್ಷ ಸೆಪ್ಟೆಂಬರ್ 5 ರಂದು ಅಸಾಧಾರಣ ಶಿಕ್ಷಕರನ್ನು ಅವರ ಕೊಡುಗೆಗಳಿಗಾಗಿ ಪ್ರೋತ್ಸಾಹಿಸಲು ಮತ್ತು ಪ್ರಶಂಸಿಸಲು ಭಾರತದ ರಾಷ್ಟ್ರಪತಿಗಳು ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿಗಳನ್ನು ನೀಡುತ್ತಾರೆ. ಈ ಬಾರಿ ಕರ್ನಾಟಕದ ಎರಡು ಕನ್ನಡಿಗ ಶಿಕ್ಷಕರು ಈ ಪ್ರಶಸ್ತಿಗೆ ಪುರಸ್ಕೃತವಾಗಿರುವುದು ಹಾಗು ನಮ್ಮ ಕನ್ನಡ ಶಾಲೆ ಶಿಕ್ಷಕಿ ಶ್ರೀಮತಿ ಡ್ಯಾರೆಲ್ ಜೆಸಿಕಾ ಫರ್ನಾಂಡಿಸ್‌ಗೆ ದೆಹಲಿ ರಾಜ್ಯ ಶಿಕ್ಷಕರ ಪ್ರಶಸ್ತಿ ಸಿಕ್ಕಿರುವುದು ನಮಗೆಲ್ಲ ಹೆಮ್ಮೆಯ ವಿಷಯವಾಗಿದೆ. ಇಂದಿಗೂ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಶಿಕ್ಷಕರ ದಿನವನ್ನು ಆಚರಿಸುತ್ತಾ, ತಮ್ಮ ಅಮೂಲ್ಯವಾದ ಕಲಿಕೆಗಾಗಿ ತಮ್ಮ ಶಿಕ್ಷಕರಿಗೆ ಧನ್ಯವಾದಗಳು ಅರ್ಪಿಸಲು ಕವಿತೆಗಳು, ಭಾಷಣಗಳು, ನಾಟಕಗಳು ಮತ್ತು ಇತರ ಸೃಜನಶೀಲ ಕಾರ್ಯಕ್ರಮಗಳನ್ನು ವಿವಿಧ ರೀತಿಯ ಪಠ್ಯ ಇತರ ಚಟುವಟಿಕೆಗಳನ್ನು ಮಾಡುವುದನ್ನು ಗಮನಿಸುತ್ತೇವೆ. ಶಿಕ್ಷಕರ ಗೌರವಾರ್ಥವಾಗಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ, ಶಿಕ್ಷಕರಿಗೆ ತಮ್ಮ ಆಲೋಚನೆಗಳು ಮತ್ತು ಅನುಭವಗಳನ್ನು ವಿದ್ಯಾರ್ಥಿಗಳ ಜೊತೆ ಹಂಚಿಕೊಳ್ಳಲು ಅವಕಾಶವನ್ನು ನೀಡಲಾಗುತ್ತದೆ. ಶಿಕ್ಷಕರ ದಿನವೂ ನಮ್ಮ ಶಿಕ್ಷಕರ ಕಠಿಣ ಪರಿಶ್ರಮ ಮತ್ತು ಸಮರ್ಪಣೆಗೆ ನಮ್ಮ ಮೆಚ್ಚುಗೆಯನ್ನು ತೋರಿಸುವ ಒಂದು ಮಾರ್ಗವಾಗಿದೆ. ಮಕ್ಕಳಿಗೆ ಶಿಕ್ಷಣ ನೀಡಲು ಮತ್ತು ಸ್ಫೂರ್ತಿ ನೀಡಲು ಅವರು ಮಾಡುವ ಎಲ್ಲದಕ್ಕೂ ಅವರಿಗೆ ಧನ್ಯವಾದವನ್ನು ಸಲ್ಲಿಸುವ ದಿನವಾಗಿದೆ. ಭಾರತದ ಜೊತೆಗೆ, ಪ್ರಪಂಚದಾದ್ಯಂತ ಅನೇಕ ದೇಶಗಳಲ್ಲಿ ಶಿಕ್ಷಕರ ದಿನವನ್ನು ಆಚರಿಸಲಾಗುತ್ತದೆ. ಶಿಕ್ಷಕರ ದಿನದ ದಿನಾಂಕಗಳು ದೇಶದಿಂದ ದೇಶಕ್ಕೆ ಬದಲಾಗುತ್ತದೆ ಆದರೆ, ಗುರಿ ಯಾವಾಗಲೂ ಒಂದೇ ಆಗಿದ್ದು ಶಿಕ್ಷಕರು ಮಾಡುವ ಪ್ರಮುಖ ಕೆಲಸಕ್ಕಾಗಿ ಮೆಚ್ಚುಗೆಯನ್ನು ತೋರಿಸುವುದು ಪ್ರಮುಖ ಉದ್ದೇಶವಾಗಿರುತ್ತದೆ. ಶಿಕ್ಷಕರ ದಿನವು ಶಿಕ್ಷಣದ ಮಹತ್ವ ಮತ್ತು ನಮ್ಮ ಜೀವನವನ್ನು ರೂಪಿಸುವಲ್ಲಿ ಶಿಕ್ಷಕರು ವಹಿಸುವ ಪಾತ್ರವನ್ನು ಪ್ರತಿಬಿಂಬಿಸುವ ಸಮಯವಾಗಿದೆ. ಜೀವನದಲ್ಲಿ ಯಶಸ್ವಿಯಾಗಲು ಅಗತ್ಯವಿರುವ ಕೌಶಲ್ಯ ಮತ್ತು ಜ್ಞಾನವನ್ನು ಶಿಕ್ಷಕರು ನಮಗೆ ನೀಡಿರುತ್ತಾರೆ. ಅವರು ನಮ್ಮ ಕೃತಜ್ಞತೆ ಮತ್ತು ಗೌರವಕ್ಕೆ ಅರ್ಹರು.ಸಮರ್ಪಣಾ ಮನೋಭಾವ ಮತ್ತು ವಿದ್ಯಾರ್ಥಿಗಳ ಜೀವನ ರೂಪಿಸುವಲ್ಲಿ ಮಾಡುವ ತ್ಯಾಗ, ಕಠಿಣ ಪರಿಶ್ರಮಕ್ಕಾಗಿ ಎಲ್ಲಾ ಶಿಕ್ಷಕರಿಗೆ ಧನ್ಯವಾದ ಹೇಳಲು ನಾನು ಈ ಸಂದರ್ಭದಲ್ಲಿ ಬಯಸುತ್ತೇನೆ. ಶಿಕ್ಷಕರ ದಿನ ಶಿಕ್ಷಣದ ಶಕ್ತಿಯ ಆಚರಣೆಯಾಗಲಿ. ನಮ್ಮ ಕನಸುಗಳ ಹಿಂದಿನ ಸ್ಫೂರ್ತಿಯಾದ ಶಿಕ್ಷಕರುಗಳಿಗೆ ನಮಿಸುತ್ತ, ಎಲ್ಲರಿಗೂ ಶಿಕ್ಷಕರ ದಿನದ ಶುಭಾಶಯಗಳನ್ನು ತಿಳಿಸುತ್ತಿದ್ದೇನೆ. ವಂದನೆಗಳು.■

***ಶ್ರೀ ವಸಂತ ಕುಮಾರ್ ಎಂ.ಬಿ.***
ದೆ.ಕ.ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು

# ಪ್ರಕೃತಿ

## ವೈಯಕ್ತಿಕ, ದೈಹಿಕ ಮತ್ತು ಮಾನಸಿಕ ಕಾನ್ಸ್ಟಿಟ್ಯೂಷನ್



ಲೇಖಕರು : ಡಾ. ಭೀಮ ಭಟ್ಟ
ಎಂ.ಡಿ. (ಆಯು)
ವೈದ್ಯಕೀಯ ನಿರ್ದೇಶಕರು,
ಆಯುರ್ ವೈದ್ ಮೇದಾಂತ ಮೆಡಿಸಿಟಿ,
ಗುರುಗ್ರಾಮ ಹರಿಯಾಣ
ಮೊ : 9810113902

ಪ್ರತಿಯೊಬ್ಬ ವ್ಯಕ್ತಿಯು ತನ್ನ ಸ್ವಂತ ವೈಯಕ್ತಿಕ ವಿಶಿಷ್ಟ ಮೂಲ ಸ್ವಭಾವದೊಂದಿಗೆ ಜನಿಸುತ್ತಾನೆ. ಇದು ಆಯುರ್ವೇದದಲ್ಲಿ ಪ್ರಕೃತಿ (constitution) ಎಂದು ಕರೆಯಲ್ಪಡುವ ತಳೀಯವಾಗಿ ನಿರ್ಧರಿಸಿದ ಸಂವಿಧಾನವಾಗಿದೆ. ವ್ಯಕ್ತಿಯ ಶಾರೀರಿಕ (ದೇಹ ಮತ್ತು ಮನಸ್ಸಿನ ಎಲ್ಲಾ ಭಾಗಗಳ ಸಾಮಾನ್ಯ ರಚನೆ ಮತ್ತು ಕಾರ್ಯ) ಸ್ಥಿತಿಯನ್ನು ಪ್ರಕೃತಿ ಎಂದು ಕರೆಯಲಾಗುತ್ತದೆ ಮತ್ತು ಅಸಮತೋಲನದ ಸ್ಥಿತಿಯನ್ನು ವಿಕೃತಿ ಎಂದು ಕರೆಯಲಾಗುತ್ತದೆ. ಪ್ರಕೃತಿಯ ಪರಿಕಲ್ಪನೆಯು ಗರ್ಭಧಾರಣೆಯ ಸಮಯದಲ್ಲಿ ವೀರ್ಯ ಮತ್ತು ಅಂಡಾಣುಗಳಲ್ಲಿ ಇರುವ ಪಂಚಮಹಾಭೂತ (ಆಕಾಶ, ವಾಯು, ಅಗ್ನಿ, ಆಪ್, ಪೃಥ್ವಿ), ತ್ರಿದೋಷ (ವಾತ, ಪಿತ್ತ, ಕಫ) ಮತ್ತು ತ್ರಿಗುಣ (ಸತ್ವ, ರಜಸ್, ತಮಸ್)ಗಳ ಕ್ರಮಪಲ್ಲಟನೆ ಮತ್ತು ಸಂಯೋಜನೆಯನ್ನು ಅವಲಂಭಿಸಿರುತ್ತದೆ. ಗರ್ಭಧಾರಣೆಯ ಸಮಯದಲ್ಲಿ ಈ ಆನುವಂಶಿಕ ಸಂಕೇತವನ್ನು ಒಮ್ಮೆ ಸರಿಪಡಿಸಿದ ನಂತರ ಪ್ರಕೃತಿ ನಿರ್ಧಾರಿತವಾಗುತ್ತದೆ ಮತ್ತು ಅದು ಸಾಮಾನ್ಯವಾಗಿ ಆ ವ್ಯಕ್ತಿಯ ಜೀವನದುದ್ದಕ್ಕೂ ಸ್ಥಿರವಾಗಿರುತ್ತದೆ. ಪ್ರಕೃತಿಯು ಈ ಜ್ಞಾನವು ವ್ಯಕ್ತಿತ್ವ, ಆಹಾರ ಪದ್ಧತಿ, ಜೀವನಶೈಲಿಯನ್ನು ಕಾಪಾಡಿಕೊಳ್ಳಲು ಮತ್ತು ಆರೋಗ್ಯವನ್ನು ಉತ್ತೇಜಿಸಲು, ರೋಗಗಳನ್ನು ತಡೆಗಟ್ಟಲು ಮತ್ತು ಗುಣಪಡಿಸಲು ಬಹಳ ಅವಶ್ಯಕವಾಗಿದೆ. ಪ್ರಕೃತಿ ಜ್ಞಾನವು ವ್ಯಕ್ತಿಯ ಮೂಲಭೂತ ದೈಹಿಕ ಮತ್ತು ಮಾನಸಿಕ ಸ್ವಭಾವವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಪ್ರಕೃತಿ ರೋಗಗಳಿಗೆ ಒಳಗಾಗುವ ಸಾಧ್ಯತೆಯನ್ನು ಮತ್ತು ಮುನ್ನರಿವು ಸಹ ಸೂಚಿಸುತ್ತದೆ. ಆದ್ದರಿಂದ, ಆಯುರ್ವೇದವು ವ್ಯಕ್ತಿ ಮತ್ತು ರೋಗವನ್ನು ಅರ್ಥಮಾಡಿಕೊಳ್ಳಲು ಸಮಾನ ಪ್ರಾಮುಖ್ಯತೆಯನ್ನು ನೀಡುತ್ತದೆ. ಪ್ರಕೃತಿ (ಜೆನೆಟಿಕ್ಸ್)ಯ ಈ ಜ್ಞಾನವು ಪ್ರಾಚೀನ ಆಯುರ್ವೇದ ವಿದ್ವಾಂಸರಿಗೆ ಚೆನ್ನಾಗಿ ತಿಳಿದಿತ್ತು, ಆದರೆ ತಳಿಶಾಸ್ತ್ರದ ಜ್ಞಾನ, ಆಧುನಿಕ ವೈದ್ಯಕೀಯ ವಿಜ್ಞಾನಕ್ಕೆ ಬಹಳ ಹೊಸ ವಿಷಯವಾಗಿದೆ.

ಆಯುರ್ವೇದದ ಪ್ರಕಾರ, ಎಲ್ಲಾ ಜನರನ್ನು 7 ವಿಧದ ಭೌತಿಕ ಪ್ರಕೃತಿಯ ಅಡಿಯಲ್ಲಿ ಗುಂಪು ಮಾಡಬಹುದು-ಶಾರೀರಿಕ ಪ್ರಕೃತಿ (ವಾತ, ಪಿತ್ತ, ಕಫ, ವಾತ-ಪಿತ್ತ, ಪಿತ್ತ-ಕಫ, ಕಫ-ವಾತ, ವಾತ-ಪಿತ್ತ-ಕಫಜ) ಮತ್ತು 3 ರೀತಿಯ-ಮಾನಸಿಕ ಪ್ರಕೃತಿ (ಸಾತ್ವಿಕ, ರಾಜಸಿಕ, ತಾಮಸಿಕ)ಗಳಾಗಿ ಗುಂಪು ಮಾಡಬಹುದು. ಆದರೆ, ಸ್ಥೂಲವಾಗಿ ನಾವು ಕೇವಲ 3 ವಿಧದ ಭೌತಿಕ ಪ್ರಕೃತಿಯನ್ನು ದೋಷಗಳ ಪ್ರಾಧಾನ್ಯದ ಪ್ರಕಾರ ತೆಗೆದುಕೊಳ್ಳಬಹುದು, ಅಂದರೆ ವಾತ ಪ್ರಧಾನ, ಪಿತ್ತ ಪ್ರಧಾನ ಮತ್ತು ಕಫ ಪ್ರಧಾನ ಪ್ರಕೃತಿ. ಪ್ರತಿಯೊಬ್ಬ ವ್ಯಕ್ತಿಯು ಈ ಎಲ್ಲಾ ಮೂರು ದೋಷಗಳನ್ನು, ಆದರೆ ವಿಭಿನ್ನ ಪ್ರಮಾಣದಲ್ಲಿ, ಹೊಂದಿರುತ್ತಾನೆ. ಪ್ರತಿಯೊಬ್ಬ ವ್ಯಕ್ತಿಯು (ಅವನು / ಅವಳು) ತನ್ನ ಸ್ವಂತ ಪ್ರಕೃತಿಯನ್ನು ತಿಳಿದುಕೊಳ್ಳುವುದು ಮುಖ್ಯವಾಗಿದೆ, ಇದರಿಂದ ಅವನು/ಅವಳು ತನ್ನ ಸ್ವಂತ ಪ್ರಕೃತಿ/ಸೂಕ್ತತೆಗೆ ಅನುಗುಣವಾಗಿ ಆಹಾರ ಮತ್ತು ಜೀವನಶೈಲಿಯನ್ನು ಅಳವಡಿಸಿಕೊಳ್ಳಬಹುದು ಮತ್ತು ಸರಿಹೊಂದಿಸಬಹುದು. ಈಗ ಪ್ರತಿಯೊಂದು ಪ್ರಕೃತಿಯ ವಿಶಿಷ್ಟ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ಅರ್ಥ ಮಾಡಿಕೊಳ್ಳೋಣ. ಭೌತಿಕ ಪ್ರಕೃತಿ-ಶಾರೀರಿಕ ಪ್ರಕೃತಿ ವೈಶಿಷ್ಟ್ಯಗಳು, ಮಾನಸಿಕ ಪ್ರಕೃತಿ ವೈಶಿಷ್ಟ್ಯಗಳು-

| ಭೌತಿಕ ಲಕ್ಷಣಗಳು | ವಾತ | ಪಿತ್ತ | ಕಫ |
|---|---|---|---|
| ದೇಹದ ಚೌಕಟ್ಟುದಪ್ಪ | ತೆಳ್ಳಗಿರುತ್ತದೆ | ಮಧ್ಯಮ | ದೊಡ್ಡದು |
| ದೇಹದ ತೂಕ | ಕಡಿಮೆ | ಮಧ್ಯಮ | ಅಧಿಕ ತೂಕ |
| ಚರ್ಮ | ಒಣ, ಒರಟು, ತಂಪು, ಕಪ್ಪು | ಮೃದು, ಎಣ್ಣೆಯುಕ್ತ, ಬೆಚ್ಚಗಿನ, ಕೆಂಪು | ದಪ್ಪ, ಎಣ್ಣೆಯುಕ್ತ ತಂಪು, ಬಿಳಿ, ಹೊಳೆಯುವ |
| ಕೂದಲು | ಶುಷ್ಕ, ಒರಟು, ಸುಲಭವಾಗಿ, ಕಂದುಬಣ್ಣದ | ಮೃದು, ಎಣ್ಣೆಯುಕ್ತ, ಬೂದು, ಬೋಳು | ದಪ್ಪ, ಎಣ್ಣೆಯುಕ್ತ, ದಟ್ಟ, ಅಲೆಅಲೆಯಾದ, |
| ಹಲ್ಲುಗಳು | ಅನಿಯಮಿತ, ವಕ್ರವಾದ, ಒಸಡುಗಳು, ಚಾಚಿಕೊಂಡಿರುವ ಕಪ್ಪು ಒಸಡುಗಳು | ನಿಯಮಿತ, ಮೃದು ತೆಳುವಾದ ಕೆಂಪು ಬಣ್ಣದ ಒಸಡುಗಳು | ನಿಯಮಿತ, ಬಲವಾದ ಬಿಳಿ ಕೆಂಪು ಒಸಡುಗಳು |
| ಕಣ್ಣು | ಚಿಕ್ಕದು, ಮಂದ, ಕಣ್ಣು ರೆಪ್ಪೆಗಳು | ಮಧ್ಯಮ, ಚೂಪಾದ, ಒಣ, ತೆಳ್ಳಗಿನ ಕಣ್ಣು ರೆಪ್ಪೆಗಳು ಹಳದಿ | ದೊಡ್ಡದು, ತೇವವಾದ ದಪ್ಪ ಕಣ್ಣು ರೆಪ್ಪೆಗಳು |
| ಕೀಲುಗಳು | ಪ್ರಮುಖವಾಗಿ ಕಾಣುತ್ತದೆ | ಕೇವಲ ಗೋಚರಿಸುತ್ತವೆ, | ಗೋಚರಿಸುವುದಿಲ್ಲ |
| ಸ್ನಾಯುಗಳು | ತೆಳ್ಳಗಿನ | ಮಧ್ಯಮ | ದೃಢವಾದ |
| ಹಸಿವು | ಅಲ್ಪ, ಬದಲಾಗುವಂತಹ | ಹೆಚ್ಚಾದ | ಒಳ್ಳೆಯದಾದ |
| ಬಾಯಾರಿಕೆ | ಬದಲಾಗುವಂತಹ | ವಿಪರೀತ | ಕಡಿಮೆ |
| ಬೆವರುವಿಕೆ | ಬದಲಾಗುವಂತಹ | ವಿಪರೀತ | ಕಡಿಮೆ |
| ನಿದ್ರೆ | ಕದಡಿದ | ಮಧ್ಯಮ | ಗಾಢವಾದ |
| ದೈಹಿಕ ಚಟುವಟಿಕೆಗಳು | ವೇಗದ, ಸಕ್ರಿಯ, | ಮಧ್ಯಮ | ನಿಧಾನ, ಆಲಸ್ಯ |
| ಮಲ ಪ್ರವೃತ್ತಿ | ಮಲಬದ್ಧತೆ ಪ್ರವೃತ್ತಿ | ಸಾಮಾನ್ಯವಾಗಿ ಮೃದು ಬೇದಿ | ನಿಯಮಿತ ಮೃದು ಮಲಚಲನೆ |
| ಮನಸ್ಸು (ಮೈಂಡ್) | ಚಂಚಲ | ಆಕ್ರಮಣಕಾರಿ, ಆತಂಕ, ಕೆರಳಿಸುವ, ದುರಾಸೆಯ, ಕೋಪ | ಶಾಂತ ಮನೋಧರ್ಮ, ಶಾಂತ, ಸ್ತಬ್ಧ |
| ಸ್ಮೃತಿ (ಸ್ಮರಣೆ) | ಇತ್ತೀಚೆಗಿನ ಕಡಿಮೆ ಸ್ಮರಣೆ | ಚೂಪಾದ ಸ್ಮರಣೆ | ಉತ್ತಮ ಸ್ಮರಣೆ |
| ಸಮಸ್ಯೆಗಳಿಂದ ಬಳಲುವ ಸಾಧ್ಯತೆ | ಮೂಲವ್ಯಾಧಿ, ಪೈಲ್ಸ್, ಕೀಲು ನೋವು, ನರವೈಜ್ಞಾನಿಕ, ಮಲಬದ್ಧತೆ | ಅಸಿಡಿಟಿ, ಹೃದಯ ಉರಿ, ರಕ್ತಸ್ರಾವ ಪ್ರವೃತ್ತಿ, ಹುಣ್ಣುಗಳು, ಯಕೃತ್ತು ರೋಗ | ಶೀತ, ಕೆಮ್ಮು, ಅಸ್ತಮಾ, ಮಧುಮೇಹ, ಬೊಜ್ಜು |

ಪರಿಕಲ್ಪನೆ/ ಗರ್ಭಧಾರಣೆ ಸಮಯದಲ್ಲಿ ಮನಸ್ಸಿನ ಮೂರು ಗುಣಗಳಲ್ಲಿ (ಗುಣಗಳು) ಯಾವುದು ಪ್ರಬಲವಾಗಿದೆ ಎಂಬುದರ ಪ್ರಕಾರ ಇದನ್ನು ನಿರ್ಧರಿಸಲಾಗುತ್ತದೆ.

**ಸಾತ್ವಿಕ ಪ್ರಕೃತಿಯ ವಿಶಿಷ್ಟ ಲಕ್ಷಣಗಳು :**

ಈ ಪ್ರಕೃತಿಯ ವ್ಯಕ್ತಿಗಳು ಉತ್ತಮ ಬುದ್ಧಿಶಕ್ತಿ ಮತ್ತು ಸ್ಮರಣೆಯನ್ನು ಹೊಂದಿರುತ್ತಾರೆ, ಮನಸ್ಸು ಮತ್ತು ದೇಹದ ಶುದ್ಧತೆ, ಸಭ್ಯತೆ, ಸಂತೋಷ, ಶಾಂತತೆ ಮತ್ತು ಸ್ಪಷ್ಟತೆ ಸಹಾಯ ಮಾಡುವ ಮತ್ತು ದಯಾ ಸ್ವಭಾವ, ನಿಸ್ವಾರ್ಥತೆ, ಉತ್ತಮ ಇಚ್ಛಾ ಶಕ್ತಿ, ನಿಯಮಿತತೆ, ಕ್ರಿಯಾಶೀಲತೆ, ದೇವರಲ್ಲಿ ಅಪಾರ ನಂಬಿಕೆಯನ್ನು ಹೊಂದಿರುವವರಾಗಿರುತ್ತಾರೆ.

**ರಾಜಸಿಕ ಪ್ರಕೃತಿಯ ವೈಶಿಷ್ಟ್ಯಗಳು :**

ರಾಜಸಿಕ ಪ್ರಕೃತಿಯ ಜನರು ಇತರರ ಮೇಲೆ ಅಧಿಕಾರವನ್ನು ಪಡೆಯಲು ಪ್ರಯತ್ನಿಸುವ ಸ್ವಭಾವವನ್ನು ಹೊಂದಿರುತ್ತಾರೆ, ಅವರು ಪ್ರಚೋದಕ ಮತ್ತು ಕ್ರಿಯಾತ್ಮಕ ಶಕ್ತಿಯನ್ನು ವ್ಯಕ್ತಪಡಿಸುತ್ತಾರೆ, ಸ್ಥಾನ, ಸಂಪತ್ತು, ಆಸ್ತಿಗಳಿಂದ ತೃಪ್ತರಾಗುವುದಿಲ್ಲ., ತುಂಬಾ ಮಹತ್ವಾಕಾಂಕ್ಷೆ, ದುರಾಸೆ, ಬಿಸಿ ಸ್ವಭಾವ ಮತ್ತು ಅಹಂಕಾರದವರಾಗಿದ್ದು, ಅವರು ಧೈರ್ಯಶಾಲಿ, ಆದರೆ ಅಸೂಯೆ ಮತ್ತು ಕ್ರೂರ ಪಾತ್ರ (ಕ್ರೂರ ಸ್ವಭಾವ / ವ್ಯಕ್ತಿತ್ವ) ವನ್ನು ಹೊಂದಿರುತ್ತಾರೆ.

**ತಾಮಸಿಕ ಪ್ರಕೃತಿಯ ವೈಶಿಷ್ಟ್ಯಗಳು :**

ತಾಮಸಿಕ ಪ್ರಕೃತಿ ಜನರು ಸೋಮಾರಿಗಳು ಮತ್ತು ಅಜ್ಞಾನಿಗಳು. ಅವರಿಗೆ ಯಾವುದರ ಬಗ್ಗೆಯೂ ಕುತೂಹಲವಿರುವುದಿಲ್ಲ. ಅವರು ಕಡಿಮೆ ಬುದ್ಧಿವಂತರು, ಕೆಲಸ ಮಾಡದಿರಲು ಆದ್ಯತೆ ನೀಡುತ್ತಾರೆ ಮತ್ತು ಮುಖ್ಯವಾಗಿ ತಿನ್ನುವುದು ಮತ್ತು ಮಲಗುವುದರಲ್ಲಿ ಆಸಕ್ತಿ ಹೊಂದಿರುತ್ತಾರೆ. ಅವರು ಶುಚಿತ್ವದಿಂದ ದೂರವಿರುತ್ತಾರೆ (ತಪ್ಪಿಸಿಕೊಳ್ಳುತ್ತಾರೆ) ಮತ್ತು ಆರೋಗ್ಯ ಪ್ರಜ್ಞೆ (ಕಾಳಜಿ)ಯನ್ನು ಹೊಂದಿರುವುದಿಲ್ಲ. ಅವರು ಸ್ವಂತವಾಗಿ ಯಾವುದೇ ಕೆಲಸದಲ್ಲಿ ಉಪಕ್ರಮವನ್ನು ತೆಗೆದುಕೊಳ್ಳುವುದಿಲ್ಲ.

ವೈಯಕ್ತಿಕ ವ್ಯಕ್ತಿಯ ಪ್ರಕೃತಿ ಪರೀಕ್ಷೆಯು, ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಮಾತ್ರವಲ್ಲದೆ ರೋಗಗಳ ತಡೆಗಟ್ಟುವಿಕೆ ಮತ್ತು ಚಿಕಿತ್ಸೆಗಾಗಿ ಸೂಕ್ತವಾದ ಆಹಾರ ಮತ್ತು ಜೀವನಶೈಲಿಯನ್ನು ಶಿಫಾರಸು ಮಾಡಲು ಬಹಳ ಅವಶ್ಯಕವಾಗಿದೆ.■

# ಅರುಂಧತಿ ನಕ್ಷತ್ರ

## ಶಾಸ್ತ್ರ - ಆಚರಣೆ - ಅರ್ಥ - ಪ್ರಾಮುಖ್ಯತೆ .....ಇತ್ಯಾದಿ

ಮದುವೆಯ ಶಾಸ್ತ್ರಗಳಲ್ಲಿ ಮಾಡುವ ಅರುಂಧತಿ ದರ್ಶನ ಇತ್ತೀಚಿನ ದಿನಗಳಲ್ಲಿ ಬರೀ photo shoot ಗೋಸ್ಕರ ಆಗ್ಬಿಟ್ಟಿದೆ. ಇನ್ನೂ ಕೆಲವರಿಗೆ ಅದು ಗೊಡ್ಡು ಸಂಪ್ರದಾಯ ವಾದರೆ ಮತ್ತೆ ಕೆಲವರದ್ದು ಹಗಲಿನಲ್ಲಿ ನಕ್ಷತ್ರ ತೋರಿಸೋದಾ ಎನ್ನೋ ಕುಹಕ ...ಮದುವೆ ಹೆಣ್ಣಿಗೆ ಮಾತ್ರ ಯಾಕೆ ಈ ನಕ್ಷತ್ರ ತೋರಿಸೋ ಕಟ್ಟಳೆ ಎಂಬುದು ಸ್ತ್ರೀವಾದಿಗಳ ತಾತ್ಸಾರ.....

ನನ್ನ ಮನಸ್ಸಲ್ಲಿ ಸಹ ಈ ಕುರಿತು ಜಿಜ್ಞಾಸೆ ಇದ್ದೆ ಇತ್ತು . ಆದರೂ ಸಹ ಭಾರತೀಯ ಸಂಸ್ಕೃತಿಯಲ್ಲಿ ಯಾವುದೇ ಆಚರಣೆ ಅರ್ಥವಿಲ್ಲದಿಲ್ಲ ಅನ್ನೋ ವಿಶ್ವಾಸ ನನ್ನದು... ಅದೇ ಎಲ್ಲಾ ಶಾಸ್ತ್ರಗಳನ್ನು ತಪ್ಪದೆ ಪಾಲಿಸಿದ್ದರ ಗುಟ್ಟು. ಇಷ್ಟೆಲ್ಲಾ ಪ್ರಶ್ನೆಗಳ ಮಧ್ಯೆ ಇದಕ್ಕೊಂದು ಸಮಾಧಾನಕರ ಅರ್ಥ ಕಂಡಿದ್ದು ಇತ್ತೀಚೆಗಷ್ಟೇ ದೆಹಲಿಯ ನೆಹರು ತಾರಾಲಯ (Planetarium)ವೀಕ್ಷಣೆ ಮಾಡಿದಾಗ.

ಪುರಾಣಗಳಲ್ಲಿ ಉಲ್ಲೇಖಿಸಿದಂತೆ ನೋಡುವುದಾದರೆ ಅರುಂಧತಿ ಸಪ್ತಋಷಿಗಳಲ್ಲಿ ಒಬ್ಬರಾದ ವಸಿಷ್ಠರ ಪತ್ನಿ. ಆಕೆ ತನ್ನ ಪಾತಿವ್ರತ್ಯಕ್ಕೆ ಹೆಸರಾದವಳು.ವಸಿಷ್ಠರೊಡನೆ ಅವಳದ್ದು ಆದರ್ಶ ದಾಂಪತ್ಯ. ಅವರ ಆದರ್ಶವನ್ನು ಪಾಲಿಸಿ ಜೀವನಪಯಣವನ್ನು ಮುನ್ನಡೆಸಿ ಎಂದು ನವ ದಂಪತಿಗೆ ತಿಳಿಸಿ ಕೊಡುವ ಒಂದು ಆಚರಣೆ ಅಷ್ಟೇ. ಅದರ ಉದ್ದೇಶ ಬಹುಶಃ ಅವರೀರ್ವರಲ್ಲಿ ಮುಂದಿನ ಬಾಳ ಪಯಣ ಒಟ್ಟಿಗೆ ಸಾಗಿಸುವ ಬಗ್ಗೆ ಮಾನಸಿಕ ತಯಾರಿ ಮಾಡಿಸುವುದೆ ಇದ್ದಿರಬಹುದು.

ನಂಬಿದವರಿಗೆ ಪೌರಾಣಿಕ ಕಥೆಯೂ ಸತ್ಯವೇ ಎಂದು ತೋರುತ್ತದೆ. ಆದರೆ ಇಂದಿನ ಪೀಳಿಗೆ ಅಷ್ಟು ಸುಲಭವಾಗಿ ಒಪ್ಪದೇ ಗೊಡ್ಡು ಸಂಪ್ರದಾಯ ಎಂದು ಮೂಗುಮುರಿಯುತ್ತೆ ಅಥವ ಆಚರಣೆ ಮಾಡುವವರು ಅವರಿಗೆ ಸರಿಯಾದ ರೀತಿಯಲ್ಲಿ ಅರ್ಥ ಮಾಡಿಸುವಲ್ಲಿ ವಿಫಲವಾಗಿರಬಹುದೇನೊ?? ಆದರೆ ಇಲ್ಲಿ ನಾವು ಖಗೋಳಶಾಸ್ತ್ರವೂ (Astronomy) ಸಹ ಈ ಎರಡು ನಕ್ಷತ್ರಗಳ ವಿಶೇಷತೆ ಯನ್ನು ಕಂಡುಕೊಂಡಿದೆ ಎನ್ನುವುದನ್ನು ಗಮನಿಸಬೇಕು. ಖಗೋಳ ಶಾಸ್ತ್ರ ಈ ಆಚರಣೆಯ ಸಾಂಕೇತಿಕತೆಯನ್ನು ಪುಷ್ಟೀಕರಿಸುತ್ತದೆ. ಆ ಕಾರಣಕ್ಕಾಗಿಯೇ ಪತಿ ಪತ್ನಿಯರ ಸಂಬಂಧವನ್ನು ಅರುಂಧತಿ ವಸಿಷ್ಠ ನಕ್ಷತ್ರಕ್ಕೆ ಹೋಲಿಸುವುದು ಸೂಕ್ತವೆ ಆಗಿದೆ.

ಹಾಗಾಗಿ ಪೌರಾಣಿಕ ಐತಿಹ್ಯವನ್ನು ಅಲ್ಲಗಳೆದರೂ ಖಗೋಳ ಶಾಸ್ತ್ರದ ಪ್ರಕಾರ ಈ ಸಾಂಕೇತಿಕ ಆಚರಣೆಯನ್ನು ನಾವು ಒಪ್ಪಿಕೊಳ್ಳಲೇ ಬೇಕಾಗುತ್ತದೆ.

ನಭೋ ಮಂಡಲದ ಉತ್ತರ ದಿಕ್ಕಿನಲ್ಲಿ ಸಪ್ತಋಷಿ ನಕ್ಷತ್ರ ಸಮೂಹ ಕಾಣುವುದಷ್ಟೆ. ಅದರಲ್ಲಿ ಕಾಣುವ ವಸಿಷ್ಠ (Mizar-astronomical name) ಗುರುತಿಸಿದಾಗ ಅದರ ಜೊತೆಯಲ್ಲಿ ಅರುಂಧತಿ (Alcor-astronomical name) ಒಂದು ಸಣ್ಣ ಚುಕ್ಕಿಯಂತೆ (dot) ಗೋಚರಿಸುತ್ತದೆ. ಇದನ್ನು ಅವಳಿ ನಕ್ಷತ್ರಗಳು ಅಂತ ಹೇಳಬಹುದು (binary ಅಥವಾ twin stars) ಈ ರೀತಿಯ ಅವಳಿ ನಕ್ಷತ್ರಗಳು ನಭದಲ್ಲಿ ಅನೇಕ ಕಡೆ ಕಂಡು ಬರುತ್ತವೆ. ಅವುಗಳಲ್ಲಿ ಒಂದು ಸ್ಥಾಯಿ ಆಗಿದ್ದರೆ ಇನ್ನೊಂದು ಅದರ ಸುತ್ತಲೂ ಚಲಿಸುತ್ತಿರುತ್ತದೆ. ಆದರೆ ವಶಿಷ್ಠ-ಅರುಂಧತಿ ಅವಳಿ ನಕ್ಷತ್ರಗಳು ಯಾವತ್ತೂ ಒಟ್ಟಿಗೆ ಚಲಿಸುತ್ತವೆ. ಯಾವುದೂ ಮೇಲಲ್ಲ ಕೀಳಲ್ಲ...ಯಾರು ಹೆಚ್ಚಲ್ಲ ಕಡಿಮೆ ಅಲ್ಲ...ಯಾರು ಹಿಂದೆ ಅಲ್ಲ ಮುಂದೆಯೂ ಅಲ್ಲ...ಪತಿ ಪತ್ನಿಯರು ಒಂದೇ ಬಂಡಿಯ ಎರಡು ಚಕ್ರ ಇದ್ದಂತೆ. ಈ ಅವಳಿ ನಕ್ಷತ್ರಗಳ ಚಲನೆಯನ್ನೆ ದಾಂಪತ್ಯದಲ್ಲಿ ಅಳವಡಿಸಿ ಕೊಳ್ಳಲು ಸಾಂಕೇತಿಕವಾಗಿ ಪ್ರಸ್ತಾಪಿಸಿರುವುದು. ಇದನ್ನು ಅರ್ಥ ಮಾಡಿಕೊಂಡು ಶಾಸ್ತ್ರವನ್ನು ಅರ್ಥಪೂರ್ಣ ವಾಗಿ ಆಚರಿಸಿದಲ್ಲಿ ನವ ವಧು-ವರರಿಗೆ ಹೊಸ ಸಂಬಂಧದ ಅರಿವು ಮೂಡಬಹುದು. ಇಲ್ಲಿ ಬೇಕಾಗಿರುವುದು ಪರಸ್ಪರ ಪ್ರೀತಿ ಹೊಂದಾಣಿಕೆ....ನಂಬಿಕೆ....ಅದಿಲ್ಲದೆ ಹೋದರೆ ಎಲ್ಲವೂ ಢಂಬಾಚಾರವೇ ಸರಿ.ಈ ಆಚರಣೆಯನ್ನು ಅಲ್ಲಗಳೆಯುವವರು ಅರುಂಧತಿ – ವಸಿಷ್ಠರ ಅವಳಿ ನಕ್ಷತ್ರಗಳ ಚಲನ ನಿಯಮವನ್ನು telescope ಮುಖಾಂತರ ನೋಡಬಹುದು. ನಾನೂ ಸಹ ಅನುಮೋದಿಸಿದ್ದು ತಾರಾಲಯ (Planetarium) ದಲ್ಲಿ ನೋಡಿದಮೇಲಷ್ಟೆ. ಆದರೆ ಯುಗಗಳ ಮೊದಲೇ ನಮ್ಮ ಖಗೋಳ ಶಾಸ್ತ್ರಜ್ಞರು ಕಂಡುಹಿಡಿದ ನಕ್ಷತ್ರಗಳನ್ನು ಅವುಗಳ ಚಲನ ನಿಯಮಗಳನ್ನು ತಿಳಿದು ಕೊಳ್ಳಲು ನಮಗೆ ಇಂದು telescope ಬೇಕಾಗಿರೋದು ಎಂಥ ವಿಪರ್ಯಾಸ !!

ಇಲ್ಲಿ ಇನ್ನೊಂದು ಮುಖ್ಯ ಅಂಶವನ್ನು ಪ್ರಸ್ತಾಪಿಸಲೇ ಬೇಕು . ಶಾಸ್ತ್ರಗಳನ್ನು ಮುಗಿಸುವ ತರಾತುರಿಯಲ್ಲಿ ಸುಡು ಬಿಸಿಲಿನಲ್ಲಿ ಅರುಂಧತಿ ನಕ್ಷತ್ರ ತೋರಿಸುವುದು ಬಿಟ್ಟು ಆಗಸದಲ್ಲಿ ನಕ್ಷತ್ರಗಳು ಮಿನುಗುವ ವೇಳೆಯಲ್ಲಿ ತೋರಿಸಿದರೆ ಈ ಆಚರಣೆ ಅರ್ಥ ಪೂರ್ಣ ಎನಿಸಿಕೊಳ್ಳುತ್ತದೆ ...ಹಾಗೆಯೇ ಶಾಸ್ತ್ರಗಳ ಉದ್ದೇಶವೂ ಸಫಲ ಗೊಳ್ಳಬಹುದೇನೋ??■

***ಶ್ರೀಮತಿ ವೈಜಯಂತಿ ಗಿರೀಶ್***
ದೆಹಲಿ ಕನ್ನಡತಿ

**ಅಕವಿತೆ**

## ಇಲ್ಲ!

ಅಂದು ಎಂದೋ ನಾನು ಹುಟ್ಟಿದ ದಿನ.
ಅಂದು ಅಪ್ಪ, ಅಮ್ಮ ಅಜ್ಜಿ, ದೊಡ್ಡಪ್ಪ
ಅವರಿವರು ಎಲ್ಲಾ ಇದ್ದ ದಿನ.
ನಾನು ಏಕೆ ಇದ್ದೀನಿ ಎಂಬ ಪ್ರಶ್ನೆ ಬೇಕೇ ಇಲ್ಲ
ಏಕೆಂದರೆ ವೃತ್ತಿ ಪ್ರವೃತ್ತಿಯ ಪರಿಸ್ಥಿತಿಗೆ
ಹೊಂದುಕೊಂಡ ನನಗೆ ಯಾಕಿರಬೇಕು ಎಂಬ ಪ್ರಶ್ನೆ ಬೇಕೇ ಇಲ್ಲ.
ಇಂದು ನನಗೆ ಅಂದಿಲ್ಲ, ಹಿಂದಿಲ್ಲ, ನೆನ್ನೆಯಿಲ್ಲ, ನಾಳೆಯಿಲ್ಲ,
ಮೊನ್ನೆ ಇಲ್ಲ, ನಾಡಿದ್ದು ಇಲ್ಲ-ಕಂಡಿಲ್ಲ ಕೇಳಿಲ್ಲ
ನಾನಿದ್ದೇನೆ ಎಂಬ ಪ್ರಶ್ನೆ ಬೇಕೇ ಇಲ್ಲ.
ಹೇಳಿಲ್ಲ, ಕೇಳಿಲ್ಲ ಏನೆಲ್ಲ ಮಾಡಿಲ್ಲ, ಬೇಡಿಲ್ಲ ಸಾಕು ಬೇಕಿಲ್ಲ
ಅವರಿದ್ದಾರೆ, ಇವರಿದ್ದಾರೆ, ಗೆಳೆಯರು ಗೆಳತಿಯರು ಎಲ್ಲರೂ ಇದ್ದಾರೆ
ಈ ಜೀವ ಬೇಕು ಬೇಡವೆನ್ನುವ ಜೀವ ಬೇಕಿಲ್ಲ.
ಅಂದು ಬೇಕೆನಿಸಿದ್ದೆಲ್ಲವೂ ಇಂದು ಬೇಕಿಲ್ಲ.
ಹಳೆಯದೆಲ್ಲವನೆತ್ತಿ ಎಸೆದು ಹೊಸದಿರಲಿ ಎನ್ನುವ
ಬಯಕೆ ಇಲ್ಲವೇ ಇಲ್ಲ.
ಹಿತಮಿತಕ್ಕೆ ಕೊರತೆ ಇಲ್ಲ,
ವಿಶಾದಕ್ಕೆ ಎಡೆಯಿಲ್ಲ
ಜೀವನದ ಸಾಧ್ಯತೆಗಳೆಲ್ಲವನೂ ವಿಶ್ವಾಸದಿಂದ
ಸಾಗಿಸಿದ ಈ ಜೀವಕ್ಕೆ, ಶರೀರಕ್ಕೆ ಇನ್ನೇನು ಬೇಕು
ದೇವ ನೀ ಬಳಿಯಿರುವ ಎಂಬುದೇ ಸಾಕೆನಗೆ
ಅದಕ್ಕಿಂತ ಸೌಭಾಗ್ಯ ಯಾವುದೆನಗೆ
ಸಾಕಿನ್ನು ಈ ಜೀವ-ನಿನ್ನ ಬಳಿ ಬರಲಾಸೆ
ಇಂದು ನಸುನಗುತಿರುವ ನನಗೆ ಮುಂದೆಂದೂ
ನಿನ್ನ ಬಳಿ ಇರುವ ಆಸೆ ದೇವಾ!!

***ಡಾ. ಅಹಲ್ಯಾಚಿಂತಾಮಣಿ***

## ತಿದ್ದುಪಡಿ

ಕಳೆದ ಆಗಸ್ಟ್ ಸಂಚಿಕೆ ಪುಟ ಸಂಖ್ಯೆ 8ರಲ್ಲಿ ಶ್ರೀ ವೈಜನಾಥ್ ಗಿರೀಶ್ ಎಂದು ತಪ್ಪಾಗಿ ನಮೂದಿಸಲಾಗಿದ್ದ ಹೆಸರನ್ನು ಶ್ರೀಮತಿ ವೈಜಯಂತಿ ಗಿರೀಶ್ ಎಂದು ತಿದ್ದುಪಡಿ ಮಾಡಲಾಗಿದೆ.
ಆರೋಗ್ಯ ಮೇಳದ ರಕ್ತದಾನ ಶಿಬಿರದಲ್ಲಿ ರಕ್ತದಾನ ಮಾಡಿದ ಶ್ರೀ ವೈಜಯಂತಿ ಗಿರೀಶ್ ಅವರಿಗೆ ಧನ್ಯವಾದಗಳು.
ಪುಟ 25 ರಲ್ಲಿ ದಿ. ಶ್ರೀ ಶಿವಾನಂದ ಹೆಬ್ಬಾರ್ ಅವರು ಕೆನರಾ ಬ್ಯಾಂಕಿನಲ್ಲಿ ಹಿರಿಯ ಅಧಿಕಾರಿಯಾಗಿದ್ದರು ಎಂದು ತಪ್ಪಾಗಿ ಮುದ್ರಿತಗೊಂಡಿದೆ. ಇದನ್ನು ಕಾರ್ಪೋರೇಷನ್ ಬ್ಯಾಂಕಿನ ಹಿರಿಯ ಅಧಿಕಾರಿ ಎಂದು ತಿದ್ದುಪಡಿ ಮಾಡಲಾಗಿದೆ.

***ಸಂಪಾದಕರು***

### ಸುಪ್ರಸಿದ್ಧ ಹಿರಿಯ ಕನ್ನಡ ಚಲನಚಿತ್ರ ನಟ ಶ್ರೀ ದೊಡ್ಡಣ್ಣನವರೊಂದಿಗೆ

# ದೆಹಲಿ ಕರ್ನಾಟಕ ಸಂಘದಲ್ಲಿ ಸಂವಾದ ಮತ್ತು ಅಭಿನಂದನಾ ಕಾರ್ಯಕ್ರಮ




ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಕೊಠಡಿಯಲ್ಲಿ ಆಗಸ್ಟ್ 29, 2023ರ ಸಂಜೆ, ಕನ್ನಡ ಚಲನಚಿತ್ರರಂಗದ ಜನಪ್ರಿಯ ಹಿರಿಯ ನಟರಾದ ಶ್ರೀ ದೊಡ್ಡಣ್ಣನವರೊಂದಿಗೆ ಸಂವಾದವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ವಹಿಸಿದ್ದರು. ಈ ಸಂದರ್ಭ ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ನವೀನ್ ಎಸ್. ಕೊಟ್ಟಿಗೆ, ಹಿರಿಯ ಸಾಹಿತಿ,ಖ್ಯಾತ ಕವಿ ಡಾ. ಎಚ್.ಎಸ್. ಶಿವಪ್ರಕಾಶ್, ಶ್ರೀ ವೇದವ್ಯಾಸ್, ಶ್ರೀ ರೇವಣ್ಣ ಸಿದ್ದಯ್ಯ ಮತ್ತು ಕನ್ನಡವೇ ಸತ್ಯ ರಂಗಣ್ಣ ಅವರುಗಳು ಉಪಸ್ಥಿತರಿದ್ದರು. ಸಂಘದ ಉಪಾಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್ ಅವರು ಅತಿಥಿಗಳನ್ನು ಮತ್ತು ನೆರೆದಿದ್ದವರನ್ನು ಆತ್ಮೀಯವಾಗಿ ಸ್ವಾಗತಿಸಿ ಶ್ರೀ ದೊಡ್ಡಣ್ಣನವರ ಜೀವನದ ಕಿರು ಪರಿಚಯ ಮಾಡಿಕೊಟ್ಟರು. ಇದೇ ವೇಳೆ ಶ್ರೀ ದೊಡ್ಡಣ್ಣನವರು ಅಭಿನಯಿಸಿದ ಕೆಲವು ಚಲನಚಿತ್ರಗಳ ಹಾಸ್ಯಮಯ ಸಂದರ್ಭಗಳ ಕಿರು ತುಣುಕುಗಳನ್ನು ಪ್ರದರ್ಶಿಸಲಾಯಿತು.

ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಮಾತನಾಡಿ ಸುಮಾರು 1000ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ವಿಭಿನ್ನ ಪಾತ್ರಗಳಲ್ಲಿ ಖಳ ನಾಯಕನಾಗಿ, ಪೋಲಿಸ್ ಆಗಿ, ಪೋಷಕ ನಟ ಹಾಗೂ ಹಾಸ್ಯ ಪಾತ್ರಗಳಲ್ಲಿ ನಟಿಸಿರುವ ಜನಪ್ರಿಯ ಹಿರಿಯ ನಟರಾದ ಶ್ರೀ ದೊಡ್ಡಣ್ಣನವರು ನಮ್ಮ ಸಂಘದ ಅಮೃತ ಕಾಲದಲ್ಲಿ ಇಲ್ಲಿಗೆ ಆಗಮಿಸಿರುವುದು ನಮ್ಮೆಲ್ಲರ ಸೌಭಾಗ್ಯ. ಅವರು ತಾವು ಸೇವೆ ಸಲ್ಲಿಸಿದ ಭದ್ರಾವತಿಯ ವಿ.ಐ.ಎಸ್.ಎಲ್. ಸಂಸ್ಥೆಯ ನವೆಂಬರ್ ತಿಂಗಳಿನಲ್ಲಿ ನಡೆಯುವ ಶತಮಾನೋತ್ಸವ ಸಮಾರಂಭವನ್ನು ಪ್ರಧಾನಮಂತ್ರಿಯನ್ನು ಆಹ್ವಾನಿಸಿ ಆಯೋಜಿಸುತ್ತಿರುವುದು ಹೆಮ್ಮೆಯ ವಿಷಯ. ಆ ಸಮಾರಂಭ ಯಶಸ್ವಿಯಾಗಲಿ, ಈ ವರ್ಷ ತಮ್ಮ




75 ವರ್ಷಕ್ಕೆ ಕಾಲಿಡುತ್ತಿರುವ ಅವರಿಗೆ ನಮ್ಮ ಸಂಘದ ಪರವಾಗಿ, ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶುಭಾಶಯಗಳನ್ನು ತಿಳಿಸುತ್ತಾ ಮುಂಬರುವ ದಿನಗಳಲ್ಲಿ ಅವರು ನಮ್ಮ ಸಂಘದಲ್ಲಿ ಒಂದು ಉತ್ತಮ ನಾಟಕ ಪ್ರದರ್ಶನ ಮತ್ತು ಸಭಾ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆಗಮಿಸಬೇಕೆಂದು ಕೇಳಿಕೊಂಡರು. ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಪರವಾಗಿ ಶ್ರೀ ದೊಡ್ಡಣ್ಣನವರನ್ನು ಗೌರವಿಸಿ ಅಭಿನಂದಿಸಲಾಯಿತು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಶ್ರೀ ದೊಡ್ಡಣ್ಣನವರು ದೂರದ ದೆಹಲಿಯಲ್ಲಿ ಇಷ್ಟೊಂದು ಜನ ಕನ್ನಡಿಗರನ್ನು ನೋಡಲು ತಮಗೆ ಸಿಕ್ಕ ಅವಕಾಶಕ್ಕೆ ಸಂಘದ ಅಧ್ಯಕ್ಷ ಶ್ರೀ ನಾಗರಾಜರಿಗೆ ಮತ್ತು ತಮ್ಮನ್ನು ಗೌರವಿಸಿದ ಸಂಘದ ಎಲ್ಲಾ ಪದಾಧಿಕಾರಿಗಳಿಗೆ ಧನ್ಯವಾದಗಳನ್ನು ತಿಳಿಸಿದರು. ಮಹಿಳೆಯರಿಗೆ ಕಿವಿ ಮಾತನ್ನು ಹೇಳುತ್ತಾ ಮಕ್ಕಳಿಗೆ ಕನ್ನಡ ಕಲಿಸಿರಿ, ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದಿ ಮತ್ತು ಮಕ್ಕಳಿಗೆ ಓದಲು ಪ್ರೇರೇಪಿಸಿ, ಕನ್ನಡ ಬಹಳ ಸುಂದರ ಭಾಷೆ, ಕನ್ನಡಿಗರು ಸುಸಂಸ್ಕೃತರು, ಬಹಳ ಕ್ಷಮಾಶೀಲರು, ಕನ್ನಡಿಗರೆಂದರೆ ಹೆಮ್ಮೆಪಡುವ ವಿಷಯ. ವರ ನಟ ಡಾ. ರಾಜಕುಮಾರ್‌ರವರನ್ನು ನೆನೆಸುತ್ತಾ ಅವರೊಬ್ಬ ಬಹಳ ಸರಳ ವ್ಯಕ್ತಿ, ಮೇರು ನಟ ಎಂದು ಹೇಳುತ್ತಾ ಯಾವ ಮೆಟ್ಟಿಲನ್ನು ಹತ್ತಿ ಬಂದಿದ್ದೇವೆಯೋ ಅವನ್ನು ನಾವು ನೋಡ್ತಾ ಇರಬೇಕು ಎನ್ನುವ ಅವರ ಮಾತನ್ನು ನೆನಪಿಸಿಕೊಂಡರು ಹಾಗು ಡಾ ವಿಷ್ಣುವರ್ಧನ್, ಶಂಕರ್‌ನಾಗ್, ಅಂಬರೀಷರ ಜೊತೆಯ ಚಿತ್ರರಂಗದಲ್ಲಿನ ಒಡನಾಟಗಳನ್ನು ಸ್ಮರಿಸಿಕೊಂಡರು. ಇನ್ನೊಂದು ಜನ್ಮವೇನಾದರೂ ಇದ್ದರೆ ಮತ್ತೆ ಕನ್ನಡಿಗನಾಗಿ ಕರ್ನಾಟಕದಲ್ಲಿಯೇ ಹುಟ್ಟಬೇಕೆಂಬ ಇಂಗಿತವನ್ನು ಹಾಗೂ ದೆಹಲಿ ಕನ್ನಡಿಗರೊಂದಿಗೆ ಭೇಟಿ ಮಾಡುವ ಅವಕಾಶ ತಮಗೆ ಮತ್ತೆ ಸಿಗಲೆಂದು ಆಶಿಸಿದರು.ಡಾ. ರಾಜಕುಮಾರ್ ಮತ್ತು ವಿಷ್ಣುವರ್ಧನ್ ಅವರಂತಹ ಮೇರು ನಟರಿಂದ ಕಲ್ತಿದ್ದು ಬಹಳಷ್ಟು ಇದೆ. ಚಿಕ್ಕ ವಯಸ್ಸಿನಲ್ಲಿ ನಮ್ಮನ್ನೆಲ್ಲ ಬಿಟ್ಟು ಅಗಲಿದ ದಿ.



ಶಂಕರ್ ನಾಗ್ ಅವರ ವ್ಯಕ್ತಿತ್ವ ಬಹಳ ಸರಳ ಮತ್ತು ಮೆಚ್ಚುವಂತದ್ದು. ಕನ್ನಡ ಚಿತ್ರರಂಗದಲ್ಲಿ ಒಬ್ಬರಿಗಿಂತ ಒಬ್ಬರು ಮೇರು ವ್ಯಕ್ತಿತ್ವವನ್ನು ಹೊಂದಿದಂತಹ ನಟರಿದ್ದಾರೆ ಹೃದಯ ವೈಶಾಲ್ಯದಲ್ಲಿ ನಾನು ಅಂಬರೀಶ್ ಅವರನ್ನು ಬಹಳ ಪ್ರಾಮಾಣಿಕ ಸ್ನೇಹಿತನೆಂದು ನಂಬುತ್ತೇನೆ. ಬಹಳ ಮುಂಗೋಪಿಗಳಾಗಿದ್ದರೂ ಮೃದು ಮನಸ್ಸಿನವರಾಗಿದ್ದರು, ಜನರಿಗೆ ಬಹಳ ಸಹಾಯ ಮಾಡುವ ಉದಾತ್ತ ಗುಣಗಳನ್ನು ಹೊಂದಿದ್ದರು. ದೊಡ್ಡ ಸ್ಥಾನಕ್ಕೆ ನಾವು ಹೋದ ಬಳಿಕ ನಮ್ಮ ಸ್ವಾರ್ಥಕ್ಕಾಗಿ ನಾವು ಏನು ಬೇಕಾದರೂ ಮಾಡಿಕೊಳ್ಳಬಹುದು, ಆದರೆ ಸಮಾಜಕ್ಕೆ, ನಮ್ಮ ಮಕ್ಕಳಿಗೆ ನಾವು ಒಳ್ಳೆಯ ಸೇವೆ ಮತ್ತು ಸಂಸ್ಕಾರವನ್ನು ನೀಡುವ ಅಗತ್ಯವಿರುತ್ತದೆ. ನಾವೆಲ್ಲರೂ ಒಳ್ಳೆಯ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು, ದಿನನಿತ್ಯ ಜೀವನದ ಲವಲುವಿಕೆಗಾಗಿ ನಡಿಗೆ ವ್ಯಾಯಾಮ ಅವಶ್ಯಕವಾಗಿದೆ. ಪುರಾಣ ಕಾಲಗಳಿಂದಲೂ ಕೂಡ ನಮ್ಮ ಸಮಾಜದಲ್ಲಿ ಕುಟುಂಬದಲ್ಲಿ ಹೆಣ್ಣಿಗೆ ಬಹುದೊಡ್ಡ ಜವಾಬ್ದಾರಿ ಇದೆ. ಮನೆಗೆ ಮತ್ತು ಸೇರಿದ ಸಂಬಂಧಿಕರ ಮನೆಗೆ ನಂಟು ಬೆಳೆಸುವ ಮಹಾನ್ ತಾಯಿ ಹೆಣ್ಣು. ಎಲ್ಲಾ ಆಯಾಮಗಳನ್ನು ಸಾಮರಸ್ಯದಿಂದ ಎಳೆದುಕೊಂಡು ಹೋಗುವ ಮಹಾನ್ ಪ್ರತಿಭೆಯನ್ನು ಹೆಣ್ಣು ಹೊಂದಿರುತ್ತಾಳೆ. ಇಂತಹ ಅರ್ಥಪೂರ್ಣವಾದ ನೆಮ್ಮದಿಯುತವಾದ ಜೀವನವನ್ನು ನಾವು ಸಾಧಿಸಬೇಕೆಂದು ಹಲವಾರು ನಿದರ್ಶನಗಳ ಮೂಲಕ ಬದುಕಿನ ಕಲೆಯನ್ನು ಸಂತಸದ ಕಲೆಯನ್ನು ಖ್ಯಾತ ನಟ ದೊಡ್ಡಣ್ಣ ಅವರು ದೆಹಲಿ ಕನ್ನಡಿಗರಿಗೆ ಉಣಬಡಿಸಿದರು. ಶ್ರೀಮತಿ ಶೋಭ ನಾಗರಾಜ್ ಮತ್ತು ಶ್ರೀ ಸಿ.ಎಂ. ನಾಗರಾಜ ರವರ ಅತಿಥಿ ಸತ್ಕಾರವನ್ನು ತುಂಬು ಕಂಠದಿಂದ ಹೊಗಳಿದರು.

ನೆರೆದಿದ್ದ ದೆಹಲಿ ಕನ್ನಡಿಗರೊಂದಿಗೆ ಸಂವಾದ ನಡೆಸಿ ಅವರ ಪ್ರಶ್ನೆಗಳಿಗೆ ಸಮರ್ಪಕವಾಗಿ ಹಾಸ್ಯಮಯವಾಗಿ ದೊಡ್ಡಣ್ಣ ಉತ್ತರಿಸಿದರು. ಇದೇ ಸಂದರ್ಭ ಕೇಂದ್ರ ಲಲಿತಕಲಾ ಅಕಾಡೆಮಿಯಿಂದ ಚಿತ್ರಕಲೆಗಾಗಿ ಪ್ರಶಸ್ತಿ ಪುರಸ್ಕೃತರಾದ ಹುಬ್ಬಳ್ಳಿಯ ಚಿತ್ರಕಲೆ ಪ್ರವೀಣ ಶ್ರೀ ಕಿರಣ್ ಶೇರ್ ಖಾನೆಯವರನ್ನು ಸಂಘದ ಪರವಾಗಿ ಶ್ರೀ ದೊಡ್ಡಣ್ಣನವರ ಸಮ್ಮುಖದಲ್ಲಿ ಗೌರವಿಸಿ ಸನ್ಮಾನಿಸಲಾಯಿತು.ಅವರ ಕಿರು ಪರಿಚಯವನ್ನು ಸಂಘದ ಜಂಟಿ ಕಾರ್ಯದರ್ಶಿ ಶ್ರೀಮತಿ ಸುಮಿತಾ ಮುರಗೋಡ ಮಾಡಿಕೊಟ್ಟರು. ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್, ಪದಾಧಿಕಾರಿಗಳು, ಹಿರಿಯ ದೆಹಲಿ ಕನ್ನಡಿಗರು ಸಂಘದ ಸದಸ್ಯರು, ಅಪಾರ ಸಂಖ್ಯೆಯಲ್ಲಿ ದೆಹಲಿಯ ಮಹಿಳೆಯರು, ಮಕ್ಕಳು ಮತ್ತು ಹೊರನಾಡ ಕನ್ನಡಿಗರು ಕಾರ್ಯಕ್ರಮದಲ್ಲಿ ಭಾಗಿಯಾಗಿ ದೊಡ್ಡಣ್ಣನವರನ್ನು ಪ್ರತ್ಯಕ್ಷ ನೋಡಿ ಹರ್ಷಪಟ್ಟರು. ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ, ಶ್ರೀ ದೊಡ್ಡಣ್ಣನವರಿಗೆ ಕೃತಜ್ಞತೆ ಸಲ್ಲಿಸುತ್ತಾ, ಆಗಮಿಸಿದವರೆಲ್ಲರಿಗೂ ವಂದನೆ ಅರ್ಪಿಸಿದರು.■

***ಅಭಿಮತ ವರದಿ***

## ಭಿವಾಡಿ ಕನ್ನಡ ಸಂಘದ ವತಿಯಿಂದ ಯಶಸ್ವಿಯಾಗಿ ನೆರವೇರಿದ

# ಶ್ರೀ ಸತ್ಯ ನಾರಾಯಣ ಪೂಜೆ





ಪ್ರತಿ ವರ್ಷದಂತೆ ಈ ವರ್ಷವೂ ಪುರುಷೋತ್ತಮ–ಅಧಿಕ ಮಾಸದಲ್ಲಿ ಶ್ರೀ ಸತ್ಯನಾರಾಯಣ ಪೂಜೆಯನ್ನು ಮಾಡಿಸಬೇಕೆಂಬ ನಮ್ಮ ಮನಸ್ಸಿನ ಇಚ್ಛೆ, ಸ್ವಾಮಿ ನಾರಾಯಣನ ಆಶೀರ್ವಾದದಿಂದ ಭಿವಾಡಿಯ ಟ್ರೆಹಾನ್ ನ ಹಿಲ್ ವ್ಯೂ ಗಾರ್ಡನ್ ನ ಸಭಾಂಗಣದಲ್ಲಿ ಈ ಆಗಸ್ಟ್ 13ರ ರವಿವಾರದಂದು ಸಾಂಗವಾಗಿ ಈಡೇರಿತು.

ದೆಹಲಿಯಿಂದ ಬಂದ ಅರ್ಚಕರು ಅಚ್ಚುಕಟ್ಟಾಗಿ ಪೂಜೆಯನ್ನು ಮಾಡಿಸಿದರು. ಪೂಜೆಗಾಗಿ ನಮ್ಮ ಭಿವಾಡಿ ಕನ್ನಡ ಸಂಘದ ವ್ಯವಸ್ಥಾಪಕ ಮಂಡಳಿಯು ಬೆಳಗ್ಗಿನಿಂದಲೇ ಸಿದ್ಧತೆಗಾಗಿ ತೊಡಗಿಸಿಕೊಂಡಿದ್ದು ಸುಂದರವಾದ ವೇದಿಕೆಯನ್ನು ನಿರ್ಮಿಸಿ, ಶ್ರೀ ಸತ್ಯನಾರಾಯಣ ಸ್ವಾಮಿಯ ಫೋಟೋವನ್ನು, ಸುಗಂಧಿತ ಪುಷ್ಪಗಳಿಂದ ಸುಂದರವಾಗಿ ಅಲಂಕರಿಸಿದ್ದರು.

11 ಗಂಟೆಯ ಸುಮಾರಿಗೆ ಆರಂಭವಾದ ಸಾಮೂಹಿಕ ಪೂಜೆ, ಪ್ರಜ್ವಲಿಸುತ್ತಿದ್ದ ದೀಪಗಳ ಹಾಗೂ ಮಂತ್ರಘೋಷಗಳ ಜೊತೆ ಭಿವಾಡಿ, ಗುರುಗ್ರಾಮ ಮತ್ತು ದೆಹಲಿಯಿಂದ ಆಗಮಿಸಿದ್ದ ಸುಮಾರು 80ರಷ್ಟು ಭಕ್ತಾದಿಗಳ ಸಮ್ಮುಖದಲ್ಲಿ ಮಧ್ಯಾಹ್ನ 1.30 ವರೆಗೆ ನಡೆದಿತ್ತು. ನೆರೆದಿದ್ದ ಭಕ್ತಾದಿಗಳೆಲ್ಲರೂ ಭಕ್ತಿ ಭಾವದಿಂದ ಮಂಗಳಾರತಿಯಲ್ಲಿ ಭಾಗವಹಿಸಿ ಜೊತೆಜೊತೆಗೆ ಶ್ರೀ ರಾಮರಕ್ಷಾ ಸ್ತೋತ್ರವನ್ನೂ ಪಠಿಸಿದರು. ಭಿವಾಡಿ ಕನ್ನಡ ಕಲಿಕಾ ಕೇಂದ್ರದ ಮಕ್ಕಳೂ ಸಹ ಐದಾರು ದೇವರ ನಾಮ ಸ್ಮರಣೆಯ ಭಕ್ತಿ ಗೀತೆಗಳನ್ನು ಹಾಡಿದ್ದರು.

ಎಲ್ಲರಿಗೂ ಸ್ವಾದಿಷ್ಟ ಊಟದ ಸಿದ್ಧತೆಯನ್ನು ಅಷ್ಟರಲ್ಲೇ ಮಾಡಲಾಗಿತ್ತು. ನೆರೆದಿದ್ದ ಎಲ್ಲಾ ಮಹಿಳೆಯರು ಕೂಡಿ ದೇವರ ಹಾಡುಗಳನ್ನು ಹೇಳುತ್ತಾ ಊಟ ಮಾಡುತ್ತಿರುವವರಿಗೆ ಆನಂದವನ್ನು ನೀಡಿದ್ದರು. ಹಾಜರಿದ್ದ ಎಲ್ಲಾ ಮುತ್ತೈದೆಯರಿಗೆ ಹೂವು, ಖಣ ಹಾಗೂ ಕುಂಕುಮವನ್ನು ನೀಡಲಾಗಿತ್ತು. ಎಲ್ಲರೂ ಶ್ರೀ ಸತ್ಯನಾರಾಯಣ ಸ್ವಾಮಿಯ ಅನುಗ್ರಹ ಪಡೆದು, ಪ್ರಸಾದ ಸ್ವೀಕರಿಸಿ, ಪಾಯಸ, ಮೃಷ್ಟಾನ್ನ ಭೋಜನವನ್ನು ಸವಿದು ತಮ್ಮ ಮನೆಗಳಿಗೆ ತೆರಳಿದರು. ಒಂದು ಉತ್ತಮವಾದ ಪೂಜಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಸಾರ್ಥಕತೆಯ ಭಾವನೆ ನಮ್ಮ ಭಿವಾಡಿ ಕನ್ನಡ ಸಂಘದ ಎಲ್ಲ ಪದಾಧಿಕಾರಿಗಳು ಮತ್ತು ಸದಸ್ಯರಲ್ಲಿ ಮೂಡಿತ್ತು.ಶ್ರೀ ಸತ್ಯನಾರಾಯಣನ ಕೃಪೆ, ಸಮಸ್ತ ದೆಹಲಿ ಎನ್‌ಸಿಆರ್ ನಲ್ಲಿರುವ ನಮ್ಮೆಲ್ಲಾ ಹೊರನಾಡ ಕನ್ನಡಿಗರ ಮೇಲೆ ಸದಾ ಇರಲಿ ಎಂದು ಬೇಡಿಕೊಳ್ಳುತ್ತೇನೆ.■

***ಶ್ರೀಮತಿ ವೀಣಾ ದೇಸಾಯಿ***

ಉಪಾಧ್ಯಕ್ಷೆ. ಭಿವಾಡಿ ಕನ್ನಡ ಸಂಘ ಸೊಸೈಟಿ

## ಗುರುಗ್ರಾಮದಲ್ಲಿ ವಿಜೃಂಭಣೆಯಿಂದ ಆಯೋಜನೆಗೊಂಡ

# ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ





ಹರಿಯಾಣ ರಾಜ್ಯದ ಗುರುಗಾಂವ್ ನಗರದಲ್ಲಿ ಗುರುಗಾಂವ್ ಕನ್ನಡ ಸಂಘದ ವತಿಯಿಂದ 19 ನೇಯ ವರ್ಷದ ಸಾಮೂಹಿಕ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆಯನ್ನು ನಗರದ ಸೆಕ್ಟರ್ 04 ನಲ್ಲಿರುವ ವೈಶ್ಯ ಸಮಾಜ ಧರ್ಮಶಾಲಾದಲ್ಲಿ ದಿನಾಂಕ ಆಗಸ್ಟ್ 20, 2023, ಭಾನುವಾರದಂದು ಆಯೋಜಿಸಲಾಗಿತ್ತು. ಶ್ರೀ ಸತ್ಯನಾರಾಯಣ ಪೂಜೆಯನ್ನು ಗುರುಗಾಂವ್ ಕನ್ನಡ ಸಂಘವು ಗುರು-ಹಿರಿಯರ ಮಾರ್ಗದರ್ಶನದಲ್ಲಿ ನಿರಂತರವಾಗಿ ಕಳೆದ 19 ವರ್ಷಗಳಿಂದ ಭಕ್ತಿ ಭಾವ, ಶ್ರದ್ಧೆಯಿಂದ ಆಚರಿಸಿಕೊಂಡು ಬರುತ್ತಿದೆ. 2004 ರಲ್ಲಿ 100 ಜನರ ಮಧ್ಯದಲ್ಲಿ ಶುರುವಾದ ಈ ಸತ್ಯನಾರಾಯಣ ಸ್ವಾಮಿ ಪೂಜೆಯು ಯಾವ ರೀತಿ ಇಲ್ಲಿನ ಎಲ್ಲಾ ಕನ್ನಡಿಗರನ್ನು ಒಂದುಗೂಡಿಸಿ ಆಚರಿಸಲಾಗುತ್ತಿತ್ತೋ, ಅದೇ ರೀತಿ, ಪ್ರೀತಿ ಶ್ರದ್ಧೆ ಭಕ್ತಿಮಯ ವಾತಾವರಣದಲ್ಲಿ ಇಂದಿನ ವರ್ಷಗಳಲ್ಲಿ ಸುಮಾರು 400 ರಿಂದ 500 ಕನ್ನಡಿಗರ ಮಧ್ಯದಲ್ಲಿ ಆಚರಣೆ ಮಾಡಲಾಗುತ್ತಿದೆ. ಈ ಬಾರಿಯೂ ಸಹಾ ನಡೆದ ಇಂದಿನ ಪೂಜೆಯಲ್ಲಿ ದೆಹಲಿ, ಭಿವಾಡಿ, ಫರಿದಾಬಾದ್ ಮತ್ತು ನೋಯಿಡಾ ನಗರಗಳಿಂದ ಗುರುಗಾಂವ್ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ಭಕ್ತಾದಿಗಳು ಆಗಮಿಸಿದ್ದರು.

ರವಿವಾರ ಬೆಳಗ್ಗೆ 10:30 ಕ್ಕೆ ಶ್ರೀ ವಿನಯ್ ಭಟ್ ಅವರ ಪೌರೋಹಿತ್ಯದಲ್ಲಿ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆಯು ಶ್ರೀಮತಿ ಮತ್ತು ಶ್ರೀ ಸಾಯಿಪ್ರಸಾದ್ ಹೇರಂಜಾಲ್ ದಂಪತಿಗಳು ಪೂಜಾ ಕೈಂಕರ್ಯಗಳಲ್ಲಿ ಭಾಗಿಯಾಗುವುದರ ಮೂಲಕ ಶುರುವಾಯಿತು. ಪುರೋಹಿತ ಶ್ರೀ ವಿನಯ್ ಭಟ್ ಅವರು ಸಂಸ್ಕೃತದಲ್ಲಿ ಮಂತ್ರಗಳನ್ನು ಪಠಿಸುತ್ತಾ ಮತ್ತು ಕನ್ನಡದಲ್ಲಿ ಶ್ರೀ ಸತ್ಯನಾರಾಯಣ ವ್ರತ ಕಲ್ಪಿತ ಪೂಜೆ, ಶ್ರೀ ಸತ್ಯನಾರಾಯಣ ಸ್ವಾಮಿಯ ವ್ರತ ಕಥೆ, ನೈವೇದ್ಯ ಸಮರ್ಪಣೆ ಮತ್ತು ಮಹಾ ಮಂಗಳಾರತಿ ಪೂಜಾ ವಿಧಿಗಳನ್ನು ನೆರವೇರಿಸಿದರು. ಶ್ರೀ ಸ್ವಾಮಿಯ ಪೂಜೆಯು ಅಪರಾಹ್ನ 01 ಗಂಟೆಗೆ ಮುಕ್ತಾಯವಾಯಿತು.

ಈ ಮಧ್ಯೆ, ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಕೃಷ್ಣಪ್ಪ ಎಂ. ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಚಂದ್ರಶೇಖರ ಜೋಳದರಾಶಿ ಹಾಗು ಶ್ರೀ ಸಾಬು ದರ್ಗಾ ಅವರು ಪೂಜಾ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಆಗಮಿಸಿದ್ದ ಗುರುಗಾಂವ್ ಸಮಾಜ ಸೇವಿ, ಪರಿಸರ ಪ್ರೇಮಿಯಾಗಿರುವ ಶ್ರೀ ನವಿನ್ ಗೋಯಲ್ ಅವರಿಗೆ ಶಾಲು ಹೊದಿಸಿ, ಹೂ ಗೂಚ್ಛ ಮತ್ತು ಸ್ಮರಣಿಕೆ ನೀಡುವ ಮೂಲಕ ಗೌರವಿಸಿ ಸನ್ಮಾನಿದರು. ಶ್ರೀ ನವೀನ್ ಗೋಯಲ್ ಅವರು ಮಾತನಾಡಿ ಭಾರತ ದೇಶ ಬಹು ಸಂಸ್ಕೃತಿಯ ದೇಶ ಇಲ್ಲಿ ಸಂಸ್ಕೃತಿ ವಿನಿಮಯ ಆಗುವುದರಿಂದ ಒಬ್ಬರಿಗೊಬ್ಬರು ಹತ್ತಿರವಾಗುತ್ತಾರೆ. ಹೀರೋ, ಹೊಂಡ, ಮಾರುತಿ ಸುಜುಕಿ ಕಂಪೆನಿಗಳಲ್ಲಿ ನೌಕರಿ ನಿಮಿತ್ತ ಇತರ ರಾಜ್ಯಗಳಿಂದ ಸಾವಿರಾರು ಜನರು, ವಿಶೇಷವಾಗಿ ಹೆಚ್ಚು ಹೆಚ್ಚು ಕನ್ನಡಿಗರು ಗುರುಗಾಂವ್‌ಗೆ ಬಂದು ತಮ್ಮ ಸಂಸ್ಕೃತಿಯ ಜೊತೆ ಜೊತೆಗೆ ಇಲ್ಲಿನ ಸಂಸ್ಕೃತಿಯೊಂದಿಗೆ ಹೊಂದಿಕೊಂಡು ಆರ್ಥಿಕವಾಗಿ ಹರಿಯಾಣ ರಾಜ್ಯವನ್ನು ಸದೃಢವಾಗಿ ಮುನ್ನಡೆಯಲು ಸಹಯೋಗ, ಕೊಡುಗೆ ನೀಡುತ್ತಿದ್ದಾರೆ ಎಂದು ಹೇಳಿದರು. ಪೂಜೆಯ ನಂತರ ಪ್ರಸಾದ ವಿನಿಯೋಗ ಮತ್ತು ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಿತು. ಸುಮಾರು 400 ಕನ್ನಡಿಗರು ಒಂದೇ ಹಾಲಿನಲ್ಲಿ ಒಟ್ಟಿಗೆ ಕುಳಿತುಕೊಂಡು ಊಟ ಮಾಡಿದ್ದನ್ನು ನೋಡಿದಾಗ ಕರುನಾಡಿನ ಹಬ್ಬದ ವಾತಾವರಣವನ್ನು ನೆನಪಿಸುತ್ತಿತ್ತು.

ಈ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆಯ ಅನ್ನ ಸಂತರ್ಪಣೆ ಕಾರ್ಯದ ಖರ್ಚನ್ನು ಶ್ರೀಮತಿ ಮತ್ತು ಶ್ರೀ ಸಾಯಿಪ್ರಸಾದ್ ಹೇರಂಜಾಲ್ ದಂಪತಿಗಳು ವಹಿಸಿಕೊಂಡಿದ್ದರು. ಅವರಿಗೆ ಹಾಗು ಪೂಜೆಯ ಇನ್ನಿತರ ಕಾರ್ಯಗಳಿಗೆ ಉದಾರ ಮನಸ್ಸಿನಿಂದ ಎಲೆ ಮರೆಕಾಯಿಯಂತೆ ಆರ್ಥಿಕ ಸಹಾಯ ಮಾಡಿದ ಎಲ್ಲಾ ದಾನಿಗಳಿಗೆ ಹೃದಯ ಪೂರ್ವಕ ಧನ್ಯವಾದಗಳು.

ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಪತ್ನಿ ಸಮೇತ ಭಾಗವಹಿಸಿದ್ದರು. ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಹಾಗು ಕಾರ್ಯಕಾರಿ ಸಮಿತಿಯ ಸದಸ್ಯರು ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಶ್ರೀ ಬಿ.ಕೆ. ಬಸವರಾಜ ಹಾಗು ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿಯ ಸದಸ್ಯರು, ಭಿವಾಡಿ ಕನ್ನಡ ಸಂಘ ಸೊಸೈಟಿಯಿಂದ ಶ್ರೀ ಗೋಪಾಲ ಕೃಷ್ಣ ಭಟ್, ಮತ್ತು ಸದಸ್ಯರು ಈ ಗುರುಗಾಂವ್ ಕನ್ನಡ ಸಂಘದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆಯಲ್ಲಿ ತಾವೆಲ್ಲರೂ ಪಾಲ್ಗೊಂಡಿದ್ದು ನಮಗೆಲ್ಲರಿಗೂ ತುಂಬಾ ಸಂತೋಷ ತಂದಿದೆ ಮತ್ತು ಸಮಯ ನೀಡಿ ಪೂಜೆಗೆ ಬಂದಿದ್ದ ತಮಗೆಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು.

ಅಂದು ಹಿರಿಯರು ಬಿತ್ತಿದ ಗುರುಗಾಂವ್ ಕನ್ನಡ ಸಂಘದ ಬೀಜ ಸಸಿಯಾಗಿ ಹುಟ್ಟಿ, ಗಿಡವಾಗಿ ಬೆಳೆದು ಈಗ ಮರವಾಗಿ ನಿಂತಿದೆ. ಆ ಮರದ ನೆರಳು ಎಲ್ಲರಿಗೂ ಸಿಗುವಂತೆ ಉತ್ತಮ ಕೆಲಸಗಳನ್ನು ಮಾಡುತ್ತಿರುವ ಸಂಘದ ಅಧ್ಯಕ್ಷರಾದ ಕೃಷ್ಣಪ್ಪ ಎಂ., ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಜೋಳದರಾಶಿ, ಖಜಾಂಚಿ ಮರಿಬಸಪ್ಪ ಮೂಲಂಗಿ ಮತ್ತು ಇವರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಕೈ ಜೋಡಿಸಿ ಕೆಲಸ ಮಾಡುವ ಉಪಾಧ್ಯಕ್ಷ ರಾಜಕುಮಾರ ನಿಲೂರು, ಜಂಟಿ ಕಾರ್ಯದರ್ಶಿ ಲಕ್ಷ್ಮಣ ಕಟ್ಟಿಮನಿ ಮತ್ತು ಅತಿಥಿಗಳನ್ನು, ಮಹಿಳೆಯರನ್ನು ಪ್ರತಿಯೊಂದು ಕಾರ್ಯಕ್ರಮಗಳಿಗೆ ನಗು ನಗುತ್ತಾ ಸ್ವಾಗತಿಸುವ ಉಪಾಧ್ಯಕ್ಷೆ ಶ್ರೀಮತಿ ಮಾಲ ರಮೇಶ್, ಶ್ರೀಮತಿ ಸುನಂದಾ ದರ್ಗಾ, ಶ್ರೀಮತಿ ಭಾರತಿ ತಿಮ್ಮಪ್ಪ ಇವರ ಕೊಡುಗೆ ಅಭಿನಂದನಾರ್ಹ.

ಹಾಗೇನೇ, ನಮ್ಮ ಅಡುಗೆ ತಂಡದ ಬೆನ್ನೆಲುಬಾಗಿರುವ ಶ್ರೀಯುತರಾದ ಗೋಪಾಲ ತಲ್ವಾರ್, ರಾಜಶೇಖರ ಪಾಟೀಲ, ರಾಜೇಂದ್ರ ಐನಾಪೂರೆ, ಮಂಟಪದ ಅಲಂಕಾರ ಪೂಜೆಯ ಎಲ್ಲಾ ಸಾಮಾಗ್ರಿಗಳನ್ನು ಪೂರೈಸುವ ಶರಣಬಸಪ್ಪ ಹಂಗರಗಿ, ಚಂದ್ರಶೇಖರ ಕೆ. ಸಭಾಂಗಣವನ್ನು ಅಲಂಕಾರಿಸುವ ಗಿರೀಶ್ ಕುಲಕರ್ಣಿ, ರಾಘವೇಂದ್ರ ಎಸ್.ಎಲ್., ಅಪ್ಪಾಸಾಹೇಬ್ ಗೋಟೆ, ಸಿದ್ದಲಿಂಗಪ್ಪ ಸಾಹುಕಾರ್ ಸೇರಿದಂತೆ ಎಲ್ಲಾ ಸದಸ್ಯರು ನಮ್ಮ ಸಂಘದ ಆಧಾರ ಸ್ಥಂಭಗಳಿದ್ದ ಹಾಗೆ. ವಹಿಸಿಕೊಂಡ ತಮ್ಮ ತಮ್ಮ ಜವಾಬ್ದಾರಿಗಳನ್ನು ಅತ್ಯಂತ ಸಮರ್ಪಕವಾಗಿ ನಿಭಾಯಿಸಿ ಪೂಜಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಇವರೆಲ್ಲರಿಗೂ ಕೃತಜ್ಞತೆಗಳು.

ನಮ್ಮ ಗುರುಗಾಂವ್ ಕನ್ನಡ ಸಂಘವು ಸುದೀರ್ಘವಾಗಿ ಬೆಳೆದು ಬರಲು ಕಾರಣರಾದ ಅನೇಕ ಹಿರಿಯ ಸದಸ್ಯರಲ್ಲಿ ಶ್ರೀ ಡಿ.ವಿ.ಎಸ್. ಮೂರ್ತಿ, ಶ್ರೀ ವಸಂತರಾವ್, ಶ್ರೀ ಪ್ರಸನ್ನ ಬಂಟ್ವಾಳ್, ಶ್ರೀ ಸಾಯಿಪ್ರಸಾದ್, ಶ್ರೀ ರವಿ ಆಚಾರ್ಯ, ಶ್ರೀ ನಾಗಭೂಷಣ್ ಇವರೆಲ್ಲರೂ ಸಹ ಸದಾ ನಮ್ಮೊಂದಿಗೆ ಬೆನ್ನೆಲುಬಾಗಿ ನಿಂತು ಸೂಕ್ತ ಸಲಹೆ ಮಾರ್ಗದರ್ಶನ ನೀಡುತ್ತಾ ಬರುತ್ತಿದ್ದಾರೆ. ಈ ಎಲ್ಲಾ ಹಿರಿಯರಿಗೂ ಗೌರವಪೂರ್ವಕ ಧನ್ಯವಾದಗಳು. ನಮ್ಮ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆಗೆ ಬಂದು ಭಗವಂತನ ಅನುಗ್ರಹ ಪಡೆದ ಸಮಸ್ತ ದೆಹಲಿ, ಎನ್‌ಸಿಆರ್ ಕನ್ನಡಿಗರಿಗೆ ವಂದನೆಗಳು.■

***ಶ್ರೀ ಚಂದ್ರಶೇಖರ ಜೋಳದರಾಶಿ ಮತ್ತು***
***ಶ್ರೀ ಜಿ.ಆರ್. ತಿಮ್ಮಪ್ಪ***
ಗುರುಗಾಂವ್ ಕನ್ನಡ ಸಂಘ

# ಸಂಘದ ಅಮೃತ ಮಹೋತ್ಸವ ಕಾರ್ಯ ಕಾಲದಲ್ಲಿ ವಾರ್ಷಿಕ ಒಳಾಂಗಣ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಆಯೋಜನೆ

ರಾಷ್ಟ್ರ ರಾಜಧಾನಿಯಲ್ಲಿ ನಾಡು, ನುಡಿ, ಭಾಷೆ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸೇವೆ ಸಲ್ಲಿಸುತ್ತಾ, ಅಮೃತ ಮಹೋತ್ಸವ ಆಚರಿಸಿಕೊಂಡಿರುವ ದೆಹಲಿ ಕರ್ನಾಟಕ ಸಂಘ ವಿಭಿನ್ನ ಸಾಂಸ್ಕೃತಿಕ ಕಾರ್ಯಕ್ರಮ ಮಾಡುವ ಮೂಲಕ ವಿಶ್ವದಲ್ಲಿ ಮನೆಮಾತಾಗಿದೆ. ಜೊತೆಗೆ ದೆಹಲಿ ಕರ್ನಾಟಕ ಸಂಘವು ಸಂಘದ ಸದಸ್ಯರುಗಳಿಗೆ ಕ್ರೀಡೆ ಹಾಗೂ ಆಟೋಟ ಸ್ಪರ್ಧೆಗಳಿಗೆ ಹೆಚ್ಚು ಒತ್ತು ನೀಡುತ್ತಾ ಕಾರ್ಯ ನಿರ್ವಹಿಸುತ್ತಿದೆ. ದಿನಾಂಕ 06.08.2023ರ ಭಾನುವಾರ ಸಂಘದ ಆವರಣದಲ್ಲಿ ಒಳಾಂಗಣ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ಹಿರಿಯ ಐಪಿಎಸ್ ಅಧಿಕಾರಿ ಶ್ರೀ ಎನ್. ರಾಜಶೇಖರ್, ಅವರು ಉದ್ಘಾಟನೆ ಮಾಡುವ ಮೂಲಕ ಕ್ರೀಡಾ ಸ್ಪರ್ಧೆಗಳಿಗೆ ಚಾಲನೆ ನೀಡಿದರು. ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್, ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರುಗಳು ಉಪಸ್ಥಿತರಿದ್ದರು. ಒಳಾಂಗಣ ಕ್ರೀಡೆಗಳಾದ ಕೇರಂ (ಸಿಂಗಲ್ಸ್ ಮತ್ತು ಡಬಲ್ಸ್, ಪುರುಷರು ಮತ್ತು ಮಹಿಳೆಯರು) ಸ್ಪರ್ಧೆಯಲ್ಲಿ ಸುಮಾರು 50ಕ್ಕೂ ಹೆಚ್ಚು ಸ್ಪರ್ಧಾಳುಗಳು ಭಾಗವಹಿಸಿದ್ದರು. ಚೆಸ್ ಸ್ಪರ್ಧೆಯಲ್ಲಿ 40 ಸ್ಪರ್ಧಾಳುಗಳು ಪಾಲ್ಗೊಂಡಿದ್ದರು. ಈ ಚೆಸ್ ಸ್ಪರ್ಧೆಯಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಹಿರಿಯ ಐಪಿಎಸ್ ಅಧಿಕಾರಿ ಶ್ರೀ ರಾಜಶೇಖರ್ ಅವರೂ ಸಹ ಸ್ಪರ್ಧಿಸಿ ಸ್ಪರ್ಧಾಳುಗಳಿಗೆ ಸ್ಫೂರ್ತಿ ತುಂಬಿದರು.

ನಾನಾ ಸಾಂಸ್ಕೃತಿಕ ಸ್ಪರ್ಧೆಗಳನ್ನು ಸಂಘದ ಸಭಾಂಗಣದಲ್ಲಿ ಆಯೋಜನೆ ಮಾಡಲಾಗಿತ್ತು. ಭಾವಗೀತೆ, ಭಕ್ತಿಗೀತೆ, ಜಾನಪದ ಗೀತೆಗಳನ್ನು ಒಳಗೊಂಡ ಸ್ಪರ್ಧೆಗಳಲ್ಲಿ ಸುಮಾರು 60 ಸ್ಪರ್ಧಿಗಳು ಭಾಗವಹಿಸಿದ್ದು, ಕನ್ನಡ ರೈಮ್ಸ್ ಸ್ಪರ್ಧೆಯಲ್ಲಿ ಸುಮಾರು 25 ಪುಟಾಣಿಗಳು ಭಾಗವಹಿಸಿದ್ದು ಪ್ರೇಕ್ಷಕರ ಮನಸೆಳೆಯಿತು. ಆಶುಭಾಷಣ ಸ್ಪರ್ಧೆಯಲ್ಲಿ 15 ಮಕ್ಕಳು, ಛದ್ಮವೇಷ ಸ್ಪರ್ಧೆಯಲ್ಲಿ 6 ವರ್ಷಕ್ಕಿಂತ ಕೆಳಗಿನ ಮಕ್ಕಳ ಪೈಕಿ 6 ಮಕ್ಕಳು, ಸ್ಮರಣಶಕ್ತಿ ಸ್ಪರ್ಧೆಯಲ್ಲಿ 40 ಮಕ್ಕಳು ಭಾಗವಹಿಸಿ ನೆರೆದಿದ್ದ ಪ್ರೇಕ್ಷಕರ ಗಮನ ಸೆಳೆದರು. ರಂಗೋಲಿ, ಡ್ರಾಯಿಂಗ್ ಪೇಂಟಿಂಗ್, ಕ್ಲಾಸಿಕಲ್ ಡಾನ್ಸ್ ಸ್ಪರ್ಧೆಗಳನ್ನು ಸಹ ನಡೆಸಲಾಯಿತು. ಎಲ್ಲಾ ವಿಭಾಗದ ಸ್ಪರ್ಧೆಗಳಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಸಂಘದ ಸದಸ್ಯರು ಮತ್ತು ಸದಸ್ಯರ ಮಕ್ಕಳು ಭಾಗವಹಿಸಿ ಕ್ರೀಡಾ ಸ್ಫೂರ್ತಿಯನ್ನು ಮೆರೆದರು. ಕ್ರೀಡಾ ಸಮಿತಿಯ ಅಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್, ಸಂಚಾಲಕ ಶ್ರೀ ಸಂತೋಷ ಜೆ ಮತ್ತು ಸಾಂಸ್ಕೃತಿಕ ಸಮಿತಿ ಸಂಚಾಲಕರಾದ ಶ್ರೀಮತಿ ಪೂಜಾ ರಾವ್, ಸಂಘದ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರುಗಳ ಉಪಸ್ಥಿತಿ ಹಾಗೂ ಸಹಕಾರದೊಂದಿಗೆ ಈ ಎಲ್ಲಾ ಸ್ಪರ್ಧೆಗಳು ಅಚ್ಚುಕಟ್ಟಾಗಿ ನೆರವೇರಿದವು. ಸಂಘದ ಸದಸ್ಯರು, ಮಹಿಳೆಯರು ಮತ್ತು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಅತ್ಯಂತ ಉತ್ಸಾಹ ಮತ್ತು ಆಸಕ್ತಿಯಿಂದ ನಾನಾ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ವಿವಿಧ ಸ್ಪರ್ಧೆಗಳ ವಿಜೇತರ ಪಟ್ಟಿಯನ್ನು ಮುಂದಿನ ತಿಂಗಳ ಅಭಿಮತದಲ್ಲಿ ಪ್ರಕಟಿಸಲಾಗುವುದು.■

***ಶ್ರೀಮತಿ ಪೂಜಾ ರಾವ್ ಮತ್ತು***
***ಶ್ರೀ ಸಂತೋಷ ಜೆ***

















# ತಿಂಗಳಿನಿಂದ ಮಂಗಳನತ್ತ ಸೂರ್ಯ, ಶುಕ್ರನೆಡೆಗೆ ಇಸ್ರೋ ಚಿತ್ತ

ನಾವು ಎಂಟನೇ ತರಗತಿ ಓದುತ್ತಿದ್ದಾಗ ತಿಂಗಳಿನಿಂದ ಮಂಗಳನತ್ತ ಕನ್ನಡ ಪಾಠದಲ್ಲಿ ಅಮೇರಿಕ ಹಾಗೂ ರಷ್ಯ ಬಾಹ್ಯಾಕಾಶ ಪ್ರಯತ್ನಗಳನ್ನೇ ಮನುಕುಲದ ಪ್ರಯತ್ನ ಎಂದು ಸವಿವರವಾಗಿ ಓದಿದ್ದೇವೆ. ಆದರೆ ಇಂದು ನಮ್ಮ ಬಾಹ್ಯಾಕಾಶ ಸಂಶೋಧನಾ ಪ್ರಯತ್ನವನ್ನು ಓದುವ ಕಾಲ ಬಂದಿದೆ. ಕಾರಣ ನಮ್ಮ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ಚಂದ್ರನ ದಕ್ಷಿಣ ಧ್ರುವದಲ್ಲಿ ವಿಕ್ರಂ ಲ್ಯಾಂಡರ್‌ನ್ನು ತನ್ನ ಎರಡನೇ ಪ್ರಯತ್ನವಾದ ಚಂದ್ರಯಾನ-3 ರಲ್ಲಿ ಯಶಸ್ವಿಯಾಗಿ ಇಳಿಸಿ ವಿಶ್ವದಲ್ಲಿ ಚಂದ್ರನ ನೆಲ ಸ್ಪರ್ಶಿಸಿದ ನಾಲ್ಕನೇ ಹಾಗೂ ಚಂದ್ರನ ದಕ್ಷಿಣ ಧೃವದ ಮೇಲಿಳಿದ ಸಾಧನೆ ಮಾಡಿದ ಮೊದಲ ರಾಷ್ಟ್ರವಾಗಿ ಮಿಂಚಿದ್ದಕ್ಕೆ. ಚಂದ್ರನ ಮೇಲ್ಮೈಯಲ್ಲಿ ಇಳಿದ ಸ್ಥಳಕ್ಕೆ ಶಿವಶಕ್ತಿ ಬಿಂದು ಎಂದು ಹೆಸರಿಡಲಾಗಿದೆ.

ವಿಶ್ವದ ಇತರ ರಾಷ್ಟ್ರಗಳು ಆರಂಭಿಸಿದ ಬಾಹ್ಯಾಕಾಶ ಬೇಟೆಯ ಸರಿ ಸುಮಾರು ಕಾಲು ಶತಮಾನದ ನಂತರ ಭಾರತದ ಮೊದಲ ಕೃತಕ ಉಪಗ್ರಹ ಆರ್ಯಭಟ ವಿದೇಶಿ ನೆಲದಿಂದ ಅಂತರಿಕ್ಷಕ್ಕೆ ಹಾರಿಸಿದ್ದು 1975 ರಲ್ಲಿ ಎಂಬುದು ಗಮನಾರ್ಹ. 1979 ರಲ್ಲಿ ಭಾಸ್ಕರ ಉಪಗ್ರಹ ವಿದೇಶಿ ನೆಲದಿಂದ ಉಡಾಯಿಸಿದ ಇಸ್ರೋ 1980 ರಲ್ಲಿ ರೋಹಿಣಿ ಕೃತಕ ಉಪಗ್ರಹವನ್ನು ಸ್ವದೇಶದಲ್ಲಿ ಶ್ರೀಹರಿಕೋಟದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಉಡಾವಣಾ ಸಂಕೀರ್ಣದಿಂದ ಹಾರಿಬಿಡಲಾದ ಮೊದಲ ಉಪಗ್ರಹವಾಯಿತು. ಅಂದಿನಿಂದ ಇಂದಿನವರೆಗೆ 132 ಕೃತಕ ಉಪಗ್ರಹಗಳನ್ನು ಇಸ್ರೋ ತಯಾರಿಸಿ ಅಂತರಿಕ್ಷಕ್ಕೆ ಹಾರಿಸಿದೆ.132ರಲ್ಲಿ ಸುಮಾರು 33 ಕೃತಕ ಉಪಗ್ರಹಗಳನ್ನು ವಿದೇಶಿ ನೆಲದಿಂದ ಬಾಹ್ಯಾಕಾಶಕ್ಕೆ ಇಸ್ರೋ ಕಳುಹಿಸಿದೆ. ಇವುಗಳಲ್ಲಿ ಸಂಪರ್ಕ, ದೂರ ಸಂವೇದಿ, ನೆಲ ಪರಿಶೋಧನೆ, ಶಿಕ್ಷಣ, ಹೀಗೆ ಇತ್ಯಾದಿ ಉಪಯೋಗಗಳಿಗಾಗಿ ಈ ಕೃತಕ ಉಪಗ್ರಹಗಳ ಬಳಕೆಯಾಗಿದೆ. ಇವಲ್ಲದೇ ಇಸ್ರೋ ಸಂಸ್ಥೆ ಇತರ ದೇಶಗಳ ಹಾಗೂ ವಿದ್ಯಾರ್ಥಿಗಳು, ಅಧ್ಯಾಪಕರುಗಳು ಮತ್ತು ಸ್ವಯಂ ಪ್ರವೃತ್ತ ವಿಜ್ಞಾನಿಗಳು ತಯಾರಿಸಿರುವ ಖಾಸಗಿಯಾಗಿ ಉಪಗ್ರಹಗಳನ್ನು ತನ್ನ ವಾಹಕದಲ್ಲಿ ಬಾಹ್ಯಾಕಾಶಕ್ಕೆ ಉಡಾಯಿಸಿದೆ. ಬಹಳಷ್ಟು ಉಪಗ್ರಹಗಳು ತಮ್ಮ ಜೀವಿತಾವಧಿಯನ್ನು ದಾಟಿಕೊಂಡು ಸೇವೆ ನೀಡುತ್ತ ಸಾಗಿದರೆ, ಕೆಲವು ಕೃತಕ ಉಪಗ್ರಹಗಳು ತಮ್ಮ ಉಡಾವಣೆ ದಿನದಿಂದಲೇ ತೊಂದರೆಗೀಡಾಗಿ ಸೇವೆಯ ಅವಕಾಶ ಹಾಗೂ ಇಸ್ರೋ ಸಮಯವನ್ನು ಹಾಳುಮಾಡಿವೆ. ಕೃತಕ ಉಪಗ್ರಹಗಳಲ್ಲದೇ ಉಪಗ್ರಹ ಉಡಾವಣ ವಾಹಕಗಳನ್ನು ಇಸ್ರೋ ವಿಜ್ಞಾನಿಗಳು ಅಭಿವೃದ್ಧಿ ಪಡಿಸಿದ್ದಾರೆ. ಆದರೆ ಇದರಲ್ಲಿ ಸ್ವಾವಲಂಬನೆ ತರಲೂ ಇಸ್ರೋ ವಿಜ್ಞಾನಿಗಳ ಅವಿರತ ಶ್ರಮ ಅಪಾರ. ಉಪಗ್ರಹ ಉಡಾವಣೆ ನೌಕೆ ಹಾಗೂ ಮಾರಕಾಸ್ತ್ರಗಳ ಕ್ಷಿಪಣಿಯ ಉಡಾವಣಾ ತಂತ್ರಜ್ಞಾನ ಒಂದೇ. ಭೇದ ಭಾವದಿಂದ ತುಂಬಿದ ಅಂತರ ಖಂಡದ ಕ್ಷಿಪಣಿ ತಡೆ ಒಪ್ಪಂದಕ್ಕೆ ಭಾರತ ತನ್ನ ಭದ್ರತಾ ಅಗತ್ಯಕ್ಕಾಗಿ ಸಹಿ ಹಾಕಿರಲಿಲ್ಲ. ಇದರಿಂದ ಅಂತರರಾಷ್ಟ್ರೀಯ ವಿಜ್ಞಾನಿಗಳ ಸಮುದಾಯದಲ್ಲಿ ಇತರರ ಸಹಾಯವಿಲ್ಲದೇ, ಏಕಾಂಗಿಗಳಾದ ಇಸ್ರೋ ವಿಜ್ಞಾನಿಗಳು, ಜೊತೆಗೆ ನಮ್ಮ ದೇಶದಲ್ಲಿ ಖಾಸಗಿಯವರು ಬಾಹ್ಯಾಕಾಶ ಕ್ಷೇತ್ರದಲ್ಲಿ ಪಾಲ್ಗೊಳ್ಳುವಿಕೆಗೆ ಅವಕಾಶವಿಲ್ಲದೇ, ಹಣಕಾಸಿನ ಕೊರತೆ, ಇತ್ಯಾದಿಗಳ ಕಾರಣಗಳಿದ್ದರೂ ಪ್ರತ್ಯೇಕವಾಗಿ ನಿಂತು ಮಾಡುತ್ತಿರುವ ಸಾಧನೆ ಅಪ್ರತಿಮ ಆದರೆ ಯಶಸ್ಸಿಗೆ ಹಿಡಿಯುತ್ತಿರುವ ಸಮಯ ಅಗಾಧ. ಈಗ ಭಾರತ ಸರ್ಕಾರ ಇಸ್ರೋ ಸಂಸ್ಥೆಯ ಹಣಕಾಸಿನ ಅಗತ್ಯಗಳಿಗೆ ಪೂರ್ಣ ನೆರವು, ರಾಜತಾಂತ್ರಿಕ ಸಂಧಾನಗಳಿಂದ ಇಸ್ರೋ ಏಕಾಂಗಿತನ ಹೋಗಲಾಡಿಸಿದ್ದು ಜೊತೆಗೆ ಅಗತ್ಯವಾದ ಶಾಸನಾತ್ಮಕ ಹಾಗೂ ಆಡಳಿತಾತ್ಮಕ ತಡೆಗಳನ್ನು ನಿವಾರಿಸಿ ಖಾಸಗಿಯವರ ಪಾಲ್ಗೊಳ್ಳುವಿಕೆ ಆರಂಭವಾದ ಮೇಲೆ ಈಗ ಇಸ್ರೋ ಸಂಸ್ಥೆಯ ಕಾರ್ಯಗಳು ವೇಗವನ್ನು ಪಡೆದುಕೊಂಡಿವೆ.


ಆದಿತ್ಯ ಎಲ್1 ಉಡಾವಣೆ ಮುಂಚೆ ಮತ್ತು ನಂತರ


ವಿಕ್ರಂ ಲ್ಯಾಂಡರ್ ಮತ್ತು ಪ್ರಗ್ಯಾನ್ ರೋವರ್

2008ರ ಚಂದ್ರಯಾನ-1ರಲ್ಲಿ ಚಂದ್ರನ ಸುತ್ತಲೂ ಸುತ್ತುವ ಆರ್ಬಿಟರ್ ನ್ನು ಯಶಸ್ವಿಯಾಗಿ ಕಳುಹಿಸಿ ಅದರಲ್ಲಿನ ಅತಿ ನೇರಳೆ ಕಿರಣಗಳ ಪರೀಕ್ಷಕ ಯಂತ್ರದ ಸಹಾಯದಿಂದ ಚಂದ್ರನ ಮೇಲೆ ನೀರಿನ ಅಂಶವಿರುವುದನ್ನ ಕಂಡುಹಿಡಿದಿದ್ದು ಇತಿಹಾಸ. ಇದರಿಂದ ಉತ್ತೇಜಿತರಾಗಿ 2013ರ ನವೆಂಬರ್‌ನಲ್ಲಿ ಉಡಾವಣೆಗೊಂಡು 2014ರ ಸೆಪ್ಟೆಂಬರ್‌ನಲ್ಲಿ ಮಂಗಳ ಸುತ್ತುವ ಕಾರ್ಯ ಅಂದರೆ Mars Orbiter Mission (MOM) ಯಶಸ್ವಿಯಾಗಿ ಕೈಗೊಂಡು ಈಗಲೂ ಅದು ತನ್ನ ಕಾರ್ಯ ಮುಂದುವರಿಸುತ್ತಿದೆ.

ಇದೇ ಜೈತ್ರಯಾತ್ರೆಯಲ್ಲಿ ಚಂದ್ರಯಾನ-2 ರ ಕಾರ್ಯಾಚರಣೆ ಹಮ್ಮಿಕೊಂಡು ಅದರಲ್ಲಿ ಆರ್ಬಿಟರ್, ವಿಕ್ರಂ ಲ್ಯಾಂಡರ್ ಮತ್ತು ಪ್ರಗ್ಯಾನ್ (ಪ್ರಜ್ಞಾನ್) ರೋವರ್‌ಗಳನ್ನು ಜೋಡಿಸಿಕೊಳ್ಳುವ ಯೋಜನೆ ತಯಾರಾಗಿ ರಷ್ಯಾದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ರಾಸ್ ಕಾಸ್ ಮಾಸ್) ವಿಕ್ರಂ ಲ್ಯಾಂಡರ್, ಪ್ರಗ್ಯಾನ್ ರೋವರ್ ಒದಗಿಸುವ ಯೋಚನೆಯಿತ್ತು. ಆದರೆ 2015 ರಲ್ಲಿ ರಾಸ್ ಕಾಸ್ ಮಾಸ್ ಲ್ಯಾಂಡರ್ ಮತ್ತು ರೋವರ್ ಗಳನ್ನ ಈ ಯೋಜನೆಗೆ ಒದಗಿಸಲು ತನಗೆ ಸಾಧ್ಯವಿಲ್ಲ ಎಂದಾಗ ಮೇಕ್ ಇನ್ ಇಂಡಿಯಾ ಕಾರ್ಯಕ್ರಮದಡಿಯಲ್ಲಿ ಇಸ್ರೋ ಸಂಪೂರ್ಣ ಸ್ವದೇಶಿಯಾಗಿ ಅಭಿವೃದ್ಧಿ ಪಡಿಸಿತು. ಚಂದ್ರಯಾನ-2, 2019ರಲ್ಲಿ ನಭಕ್ಕೆ ಹಾರಿತು. ಆದರೆ ತಂತ್ರಾಂಶಗಳ ದೋಷದಿಂದಾಗಿ ವಿಕ್ರಂ ಲ್ಯಾಂಡರ್ ಚಂದ್ರನ ಮೇಲ್ಮೈನಲ್ಲಿ ಸುಲಭ ಇಳಿಯುವಿಕೆ (ಸಾಫ್ಟ್ ಲ್ಯಾಂಡಿಂಗ್) ಆಗದೆ ವಿಫಲವಾಗಿ ಚಂದ್ರ ಮೇಲೆ ಅಪ್ಪಳಿಸಿತು. ಚಂದ್ರನ ಮೇಲಿನ ಈ ಸ್ಥಳಕ್ಕೆ ತಿರಂಗ ಬಿಂದು ಎಂದು ಹೆಸರಿಡಲಾಗಿದೆ. ಆದರೆ ಚಂದ್ರಯಾನ-2ರ ಆರ್ಬಿಟರ್ ಯಶಸ್ವಿಯಾಗಿದ್ದು, ಅಂದಿನಿಂದ ಇಂದಿನವರೆಗೂ ಸಮರ್ಪಕವಾಗಿ ಕಾರ್ಯಾಚರಣೆ ಮಾಡುತ್ತಿದೆ.


ಈಗ ಚಂದ್ರಯಾನ-3ರ ಕಾರ್ಯಾಚರಣೆ ಹಮ್ಮಿಕೊಂಡಿದೆ. ಇದರಲ್ಲಿ 2148 ಕೆಜಿ ಪ್ರೊಪಲ್ಷನ್ ಮಾಡ್ಯೂಲ್ ಮತ್ತು 26 ಇರ ತೂಕವಿರುವ ಪ್ರಗ್ಯಾನ್(ಪ್ರಜ್ಞಾನ್) ರೋವರ್ ಹೊತ್ತಿದ್ದ ವಿಕ್ರಂ ಲ್ಯಾಂಡರ್ ಮಾಡ್ಯೂಲ್ ತೂಕ 1750 ಕೆಜಿ ಗಳನ್ನು ಜೋಡಿಸಿಕೊಂಡು 2023ರ ಜುಲೈನಲ್ಲಿ ನಭಕ್ಕೆ ಹಾರಿ ನಿಗದಿಪಡಿಸಿದ ದಿನಾಂಕ 23 ಆಗಸ್ಟ್ 2023 ರಂದು ಯಶಸ್ವಿಯಾಗಿ ಚಂದ್ರನ ಮೇಲೆ ಸುಲಭ ಇಳಿಯುವಿಕೆ ಸಾಧ್ಯವಾಯಿತು. ಪ್ರಯತ್ನಗಳಿಗೆ ಸೋಲಿರಬಹುದು ಆದರೆ ಪ್ರಯತ್ನ ಮಾಡದೆ ಗೆಲುವು ಸಿಗದು ಎಂಬ ಮಾತನ್ನ ಇಸ್ರೋ ಮತ್ತೊಮ್ಮೆ ಸಾಬೀತುಪಡಿಸಿತು.

ವಿಕ್ರಂ ಲ್ಯಾಂಡರ್‌ನಿಂದ ಪ್ರಗ್ಯಾನ್(ಪ್ರಜ್ಞಾನ್) ರೋವರ್ ಕೆಳಗಿಳಿದು ಚಂದ್ರನ ದರ್ಶಿಸುತ್ತಾ ಲ್ಯಾಂಡರ್ ಮತ್ತು ರೋವರ್ ಒಂದನ್ನೊಂದರ ಭಾವಚಿತ್ರ ತೆಗೆದು ಭೂಮಿಯಲ್ಲಿನ ಇಸ್ರೋ ಸಂಸ್ಥೆಗೆ ಕಳುಹಿಸಿದ್ದು ಒಂದು ಭರ್ಜರಿ ಹೆಮ್ಮೆಪಡುವ ವಿಷಯ.

**ಭಾರತದ ಮೊದಲ ಕೃತಕ ಉಪಗ್ರಹ ಆರ್ಯಭಟ**



**ಭಾಸ್ಕರ ಉಪಗ್ರಹದ ಚಿತ್ರ**





**ಶಿವಶಕ್ತಿ ಬಿಂದುವಿನಿಂದ ಪ್ರಗ್ಯಾನ್ ರೋವರ್ ನಡೆದ ಹಾದಿ**

ಅಂದಿನಿಂದ ಇಂದಿನವರೆಗೂ ಪ್ರಗ್ಯಾನ್(ಪ್ರಜ್ಞಾನ್) ರೋವರ್ ಚಂದ್ರನ ಮೈಮೇಲೆ ಸುತ್ತಾಟ ನಡೆಸುತ್ತ, ಚಂದ್ರನ ಕುಳಿಗಳ ತಪ್ಪಿಸಿಕೊಳ್ಳುತ್ತ ಲ್ಯಾಂಡರ್ ನಿಂದ ಸುಮಾರು 100 ಮೀಟರ್ ಪಯಣಿಸಿದ ಸಾಧನೆ ಮಾಡಿದೆ. ಕೃಷ್ಣ ಪಕ್ಷವೆಂದರೆ ಚಂದ್ರನ ರಾತ್ರಿಯ ಸಮಯ ಆದ್ದರಿಂದ ಇಸ್ರೋ ವಿಜ್ಞಾನಿಗಳು ರೋವರ್ ನ್ನು ಸುರಕ್ಷಿತ ಸ್ಥಳದಲ್ಲಿ ನಿಲುಗಡೆ ಮಾಡಿಸಿ ಲ್ಯಾಂಡರ್ ಜೊತೆಗೆ ಅದನ್ನು ನಿದ್ರೆಗೆ ಜಾರಿಸಿದ್ದಾರೆ. ಸೆಪ್ಟೆಂಬರ್ 24 ರ ನಂತರ ಮತ್ತೆ ಇವು ಕಾರ್ಯಾಚರಣೆಯಲ್ಲಿ ತೊಡಗುತ್ತವೆ. ರೋವರ್ ತೆಗೆದುಕೊಂಡು ಹೋಗಿರುವ ಲೇಸರ್ ಇಂಡ್ಯೂಸಡ್ ಬ್ರೇಕ್ ಡೌನ್ ಸ್ಪೆಕ್ಟ್ರೋಸ್ಕೋಪಿ ತಂತ್ರಜ್ಞಾನ ಆಧಾರಿತ ಯಂತ್ರದ ಸಹಾಯದಿಂದ ಚಂದ್ರನ ಮೇಲ್ಮೈ ಕಲ್ಲು ಮಣ್ಣಿನ ಪರೀಕ್ಷೆ ನಡೆಸಿ ಚಂದ್ರನ ಮೇಲ್ಮೈ ಯಾವ ಯಾವ ರಾಸಾಯನಿಕಗಳಿಂದ ಮಾಡಲ್ಪಟ್ಟಿದೆ ಎಂಬುದನ್ನು ಅರಿಯುತ್ತಿದ್ದಾರೆ. ಗಂಧಕದ ಇರುವಿಕೆಯನ್ನು ಈಗ ಪ್ರಗ್ಯಾನ್ ರೋವರ್ ನಿಂದ ಪತ್ತೆ ಹಚ್ಚಿದ್ದಾರೆ. ಲ್ಯಾಂಡರ್ ಹಾಗೂ ರೋವರ್ ಜೀವನ 14 ಭೂಮಿಯ ದಿನಗಳು ಎಂದು ಅಂದಾಜಿಸಲಾಗಿದೆ.

ಮುಂದುವರಿದು, ಶುಕ್ರನತ್ತ ತನ್ನ ಕೃತಕ ಆರ್ಬಿಟರ್ ನ್ನು ಇಸ್ರೋ ಕಳುಹಿಸಲು ಸಕಲ ತಯಾರಿಯಲ್ಲಿ ತೊಡಗಿಸಿಕೊಂಡಿದ್ದು, ಯೋಜನೆಯಂತೆ ಎಲ್ಲ ಸಮಯಕ್ಕೆ ತಯಾರಾದರೆ ಮುಂದಿನ ವರ್ಷದ ಅಂತ್ಯಕ್ಕೆ ಈ ಉಡಾವಣೆ ಆಗಲಿದ್ದು, ಯಶಸ್ವಿಯಾಗಲಿ ಎಂದು ಹಾರೈಸೋಣ.

ಆದಿತ್ಯ L1 ವಾಹಕವನ್ನು ಸೂರ್ಯನ ಸಂಶೋಧನೆಗೆ ಕಳುಹಿಸಲು ಎಲ್ಲಾ ತಯಾರಿ ಮುಗಿದಿದ್ದು ಸೆಪ್ಟೆಂಬರ್ 2 ರಂದು ಯಶಸ್ವಿಯಾಗಿ ನಭಕ್ಕೆ ಹಾರಿ ಸೂರ್ಯನತ್ತ ತನ್ನ ಪ್ರಯಾಣ ಬೆಳೆಸಿದೆ. ಮುಂದೆ ಮಂಗಳನತ್ತ ಎರಡನೇ ಕಾರ್ಯಾಚರಣೆ ಇಸ್ರೋ ವಿಜ್ಞಾನಿಗಳು ನಡೆಸಲಿದ್ದಾರೆ.

**ಚಂದ್ರಯಾನ 2 ಉಡಾವಣೆಯ ಮುಂಚಿನ ಚಿತ್ರ**



ಭಾರತದ ಮೊದಲ ಗಗನ ಯಾತ್ರಿ ರಾಕೇಶ್ ಶರ್ಮಾ ರಷ್ಯ ಗಗನ ಯಾತ್ರಿಕರೊಂದಿಗೆ ಗಗನ ಯಾನ ಮಾಡಿದ್ದರು. ಅಂದಿನ ಪ್ರಧಾನಮಂತ್ರಿಗಳಾದ ಶ್ರೀಮತಿ ಇಂದಿರಾ ಗಾಂಧಿಯವರ ಪ್ರಶ್ನೆ ಮೇಲಿನಿಂದ ಭಾರತ ಹೇಗೆ ಕಾಣಿಸುತ್ತಿದೆ ಎಂದಾಗ ಸಾರೇ ಜಹಾಂ ಸೇ ಅಚ್ಚಾ ಎಂಬ ಅವರ ಉತ್ತರ, ದೇಶದ ಹೃದಯವನ್ನು ಗೆದ್ದಿತ್ತು. ಈಗ ಇಸ್ರೋ ಸ್ವಂತವಾಗಿ ಅಂತರಿಕ್ಷಕ್ಕೆ ಮನುಷ್ಯರನ್ನು ಕಳುಹಿಸುವ ಗಗನಯಾನ ಕಾರ್ಯಕ್ರಮ ಪ್ರಗತಿಯಲ್ಲಿದೆ. ಮೊದಲ ಯತ್ನವಾಗಿ ಭೂಮಿಯಿಂದ ಕಳುಹಿಸಲು ಮೂರು ಜನರ ಅಂತರಿಕ್ಷ ಯಾನಿಗಳ ನೌಕೆಯನ್ನು ಇನ್ನೆರಡು ತಿಂಗಳಲ್ಲಿ ಕಳುಹಿಸಲಿದ್ದಾರೆ.

ಅಮೆರಿಕದ ಬಾಹ್ಯಾಕಾಶ ಯೋಜನೆಯಲ್ಲಿ ಕೆಲಸ ಮಾಡುವ ಭಾರತೀಯ ಸಂಜಾತರಾದ ದಿವಂಗತ ಕಲ್ಪನಾ ಚಾವ್ಲಾ ಹಾಗೂ ಸುನೀತ ವಿಲಿಯಮ್ಸ್‌ರವರು ಕೂಡ ಗಗನಯಾತ್ರಿಗಳಾಗಿದ್ದರು. ಬಾಹ್ಯಾಕಾಶದ ಹೆಚ್ಚಿನ ತಾಂತ್ರಿಕ ವಿವರಗಳನ್ನು ಅನೇಕ ಲೇಖನದಲ್ಲಿ ಈಗಾಗಲೇ ಓದಿದ್ದೀರಿ. ಆದರೆ ಅದಕ್ಕಿಂತ ಮುಖ್ಯವಾಗಿ ಕೆಲವರ ಆಲೋಚನೆಯಾದ ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವು ಚಂದ್ರಯಾನ, ಬಾಹ್ಯಾಕಾಶ ಯೋಜನೆಗಳಿಂದ ಏನು ಪ್ರಯೋಜನ? ಎಂದು. ಅವರೆಲ್ಲ ಅರಿಯಬೇಕಾದ ಪ್ರಮುಖ ವಿಷಯವೇನೆಂದರೆ ಬಾಹ್ಯಾಕಾಶ ಸಂಶೋಧನೆಯಿಂದ ದೇಶಕ್ಕೆ ಆಗುವ ಒಳಿತುಗಳು. ಮೊದಲನೇಯದಾಗಿ ಪ್ರತಿ ಬಾಹ್ಯಾಕಾಶ ಸಂಶೋಧನಾ ಕಾರ್ಯದಲ್ಲಿ ಬೇಕಾಗುವ ಉಪಕರಣಗಳಿಗೆ ನವೀನ ತಂತ್ರಜ್ಞಾನಗಳ ಅವಿಷ್ಕಾರ ಆಗಬೇಕು. ಈ ತಂತ್ರಜ್ಞಾನಗಳು ಬಾಹ್ಯಾಕಾಶ ಯೋಜನೆಯಲ್ಲಿ ಬಳಸಿಕೊಂಡು ನಂತರ ದೇಶೀಯ ಸುರಕ್ಷತೆಗೆ ಬಳಸಿಕೊಳ್ಳಲಾಗುತ್ತದೆ. ನಂತರ ಸಾರ್ವಜನಿಕರ ಅನುಕೂಲಕ್ಕಾಗಿ ಬಳಸಲಾಗುತ್ತದೆ. ಇದರಿಂದ ದೇಶಿಯವಾದ ತಂತ್ರಜ್ಞಾನ ಸಾರ್ವಜನಿಕ ಹಿತಾಸಕ್ತಿಗೆ ಬಳಸುವ ಕೈಗಾರಿಕೆಗೆ ಉಚಿತವಾಗಿ ದೊರೆಯುತ್ತದೆ ಉದ್ಯಮದ ಸ್ಥಾಪನೆಗೆ ಸಹಾಯಕವಾಗುತ್ತದೆ, ಖಾಸಗಿಯವರ ಪಾಲ್ಗೊಳ್ಳುವಿಕೆಯಿಂದ ಮುಕ್ತ ಆಲೋಚನೆಗಳ ಹೊಸ ಸ್ಟಾರ್ಟ್ ಅಪ್ ಗಳಿಗೆ ಅವಕಾಶ ನೀಡುತ್ತದೆ. ಇವೆಲ್ಲವು ಹೊಸ ಕ್ಷೇತ್ರಗಳಲ್ಲಿ ಉದ್ಯೋಗ ಸೃಷ್ಟಿಗೆ ಕಾರಣೀಭೂತವಾಗುತ್ತವೆ. ಜಗತ್ತಿನ ಆಳ ಅಗಲಗಳ ಸಂಶೋಧನೆ ನಮ್ಮ ವಿದ್ಯಾರ್ಥಿಗಳಿಗೆ ವಿಶೇಷ ಕಾರ್ಯಕ್ಷೇತ್ರಗಳಲ್ಲಿ ಓದುವ ಅವಕಾಶಗಳನ್ನು ತೆರೆಯುತ್ತದೆ. ಹಿಂದೆಲ್ಲ ಭೂಮಿಯ ವಿವಿಧ ಪ್ರದೇಶಗಳಿಗೆ ನುಗ್ಗಿ ಅಧಿಕಾರ ಸ್ಥಾಪನೆ ಮಾಡಿ ವಸಾಹತುಶಾಹಿತನದಿಂದ ಆ ಪ್ರದೇಶಗಳ ನೈಸರ್ಗಿಕ ಸಂಪನ್ಮೂಲಗಳ ಬಳಸಿಕೊಳ್ಳುವ ನೀತಿ ಹಳತಾಗಿ ಭೂಮಿಯಿಂದ ಹೊರಗಿನ ಗ್ರಹ/ಉಪಗ್ರಹಗಳನ್ನು ಸಂಪನ್ಮೂಲಕ್ಕಾಗಿ ಬಳಸುವ ಕಾಲ ಹತ್ತಿರವಾಗುತ್ತಿದೆ. ಬಾಹ್ಯಾಕಾಶ ಸಂಶೋಧನೆಯಿಂದ ಸ್ವಯಂ ತಯಾರಿತ ಕೃತಕ ಉಪಗ್ರಹಗಳಿಂದ ಡಿಟಿಎಚ್ ಸಂಪರ್ಕ, ದತ್ತಾಂಶಗಳ ಸಂಪರ್ಕಗಳಿಗೆ ವಿದೇಶಿಯರಿಗೆ ನೀಡುವ ಅಮೂಲ್ಯ ವಿದೇಶಿ ವಿನಿಮಯವನ್ನು ಉಳಿಸಬಹುದು. ಹಾಗೆ ಇತರರ ಕೃತಕ ಉಪಗ್ರಹಗಳ ಉಡಾವಣೆಯಿಂದ ಅದೇ ವಿದೇಶಿ ವಿನಿಮಯ ಗಳಿಸಲೂಬಹುದು. ಹೀಗೆ ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದ ಸಂಶೋಧನಾ ವೆಚ್ಚದ ಕುರಿತು ಒಳಿತಿನ ಮಾತಾಡುತ್ತ ಸಾಗಿದರೆ ಪುಟಗಳೇ ಸಾಕಾಗದು. ಭಾರತ ದೇಶವು ಸ್ವಾತಂತ್ರ್ಯ ಪಡೆದು ಅಮೃತ ಮಹೋತ್ಸವ ಆಚರಿಸಿಕೊಂಡು ಅಮೃತ ಕಾಲದಲ್ಲಿ ಮುನ್ನಡೆಯುತ್ತಿರುವಾಗ ಇಸ್ರೋ ಸಂಸ್ಥೆಯು ತನ್ನ ಪ್ರತಿ ಕಾರ್ಯಾಚರಣೆಯಲ್ಲಿ ಯಶಸ್ಸು ಪಡೆಯುತ್ತಾ ನೂತನ ಕಾರ್ಯಕ್ರಮಗಳ ವೇಗದ ಗತಿ ಹೆಚ್ಚಾಗಲಿ ಎಂಬುದು ಸಾಮಾನ್ಯವಾಗಿ ಎಲ್ಲ ಭಾರತೀಯರ ಅಭಿಲಾಷೆ.■

*ಶ್ರೀ ನ.ಮೂ. ಶ್ರೀರಾಮ್*

**ಭಾರತದಿಂದ ಹಾರಿ ಬಿಡಲಾದ ಮೊದಲ ಉಪಗ್ರಹ ರೋಹಿಣಿ**





**ಪ್ರಗ್ಯಾನ್ ರೋವರ್ ವಿಕ್ರಂ ಲ್ಯಾಂಡರ್‌ನಿಂದ ಇಳಿಯುತ್ತಿರುವ ದೃಶ್ಯಗಳು**

# ಭಾರತದ ಜಿ-20 ಶೃಂಗಸಭೆಯ ಅಧ್ಯಕ್ಷತೆಯು ಪ್ರಜಾಪ್ರಭುತ್ವ ಮೌಲ್ಯಗಳೊಂದಿಗೆ ಅಂತರರಾಷ್ಟ್ರೀಯ ರಾಜತಾಂತ್ರಿಕ ಬಲಾಢ್ಯತೆಯ ಸಾಧನೆಗೆ ಒಂದು ಅತಿದೊಡ್ಡ ವೇದಿಕೆ








ಗ್ರೂಪ್ ಆಫ್ ಟ್ವೆಂಟಿ (G20) ಅಂತರರಾಷ್ಟ್ರೀಯ ಆರ್ಥಿಕ ಸಹಕಾರಕ್ಕಾಗಿ ರೂಪುಗೊಂಡ ಒಂದು ಪ್ರಧಾನ ವೇದಿಕೆಯಾಗಿದೆ. ಎಲ್ಲ ಪ್ರಮುಖ ಅಂತಾರಾಷ್ಟ್ರೀಯ ಆರ್ಥಿಕ ಸಮಸ್ಯೆಗಳ ಮೇಲೆ ಜಾಗತಿಕ ಪರಿಕಲ್ಪನೆಯ ಆಡಳಿತವನ್ನು ರೂಪಿಸುವಲ್ಲಿ ಮತ್ತು ಬಲಪಡಿಸುವಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ. ಹೀಗಾಗಿ ಈ ಎಲ್ಲ ಮೂಲ ಉದ್ದೇಶಗಳೊಂದಿಗೆ G20ಯು ವೇದಿಕೆಯನ್ನು ಸಪ್ಟೆಂಬರ್ 26, 1999 ರಲ್ಲಿ ಏಷ್ಯಾದ ಆರ್ಥಿಕ ಬಿಕ್ಕಟ್ಟಿನ ನಂತರ ಬೇರೆ ಬೇರೆ ಹಣಕಾಸು ಮಂತ್ರಿಗಳು ಮತ್ತು ಸೆಂಟ್ರಲ್ ಬ್ಯಾಂಕ್ ಗವರ್ನರ್‌ಗಳಿಗೆ ಜಾಗತಿಕ ಆರ್ಥಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಚರ್ಚಿಸಲು ವೇದಿಕೆಯಾಗಿ ಸ್ಥಾಪಿಸಲಾಯಿತು. ಈ ವೇದಿಕೆಯ ಸದಸ್ಯರ ರಾಷ್ಟ್ರಗಳು ಜಾಗತಿಕವಾಗಿ GDP ಯ ಸುಮಾರು 85%, ಪಾಲುದಾರಿಕೆಯನ್ನು ಹೊಂದಿದ್ದರೆ, ಜಾಗತಿಕ ವ್ಯಾಪಾರದಲ್ಲಿ 75% ಕ್ಕಿಂತ ಹೆಚ್ಚು ಮತ್ತು ವಿಶ್ವದ ಜನಸಂಖ್ಯೆಯ ಮೂರನೇ ಎರಡರಷ್ಟು ಪ್ರತಿನಿಧಿಸುತ್ತಾರೆ. G20 ಆರಂಭದಲ್ಲಿ ವಿಶಾಲವಾದ ಸ್ಥೂಲ ಆರ್ಥಿಕ ವ್ಯವಸ್ಥೆಯ ಸಮಸ್ಯೆಗಳ ಮೇಲೆ ಕೇಂದ್ರೀಕರಿಸಿತ್ತು ಆದರೆ ಕ್ರಮೇಣವಾಗಿ ಅದು ವ್ಯಾಪಾರ, ಸುಸ್ಥಿರ ಅಭಿವೃದ್ಧಿ, ಆರೋಗ್ಯ, ಕೃಷಿ, ಶಕ್ತಿ, ಪರಿಸರ, ಹವಾಮಾನ ಬದಲಾವಣೆ ಮತ್ತು ಭ್ರಷ್ಟಾಚಾರ–ವಿರೋಧಿ ಸೇರಿದಂತೆ ಅನೇಕ ಜಾಗತಿಕವಾಗಿ ಆರ್ಥಿಕ, ರಾಜಕೀಯ, ಸಾಮಾಜಿಕ ಸಂಬಂಧಪಟ್ಟ ವಿಷಯಗಳ ಬಗೆಗೆ ತನ್ನ ಕಾರ್ಯಸೂಚಿಯನ್ನು ವಿಸ್ತರಿಸಿಕೊಂಡಿದೆ.

**G20 ಸದಸ್ಯ ರಾಷ್ಟ್ರಗಳು ಮತ್ತು ಆಹ್ವಾನಿತರು:** ಗ್ರೂಪ್ ಆಫ್ ಟ್ವೆಂಟಿ (G20) 19 ದೇಶಗಳನ್ನು ಹಾಗೂ ಒಂದು ಒಕ್ಕೂಟವನ್ನು ಒಳಗೊಂಡಿದ್ದು, ಅರ್ಜೆಂಟೀನಾ, ಆಸ್ಟ್ರೇಲಿಯಾ, ಬ್ರೆಜಿಲ್, ಕೆನಡಾ, ಚೀನಾ, ಫ್ರಾನ್ಸ್, ಜರ್ಮನಿ, ಭಾರತ, ಇಂಡೋನೇಷ್ಯಾ, ಇಟಲಿ, ಜಪಾನ್, ರಿಪಬ್ಲಿಕ್ ಆಫ್ ಕೊರಿಯಾ, ಮೆಕ್ಸಿಕೋ, ರಷ್ಯಾ, ಸೌದಿ ಅರೇಬಿಯಾ, ದಕ್ಷಿಣ ಆಫ್ರಿಕಾ, ಟರ್ಕಿ, ಯುನೈಟೆಡ್ ಕಿಂಗ್ಡಮ್, ಯುನೈಟೆಡ್ ಸ್ಟೇಟ್ಸ್ ಮತ್ತು ಯುರೋಪಿಯನ್ ಯೂನಿಯನ್ ಸೇರಿದಂತೆ ಒಟ್ಟಾರೆ 20 ರಾಷ್ಟ್ರಗಳು G20 ಯನ್ನು ಪ್ರತಿನಿಧಿಸುತ್ತವೆ.

G20 ವೇದಿಕೆಯು ತನ್ನದೇ ಆದ ಒಂದು ನಿರ್ದಿಷ್ಟ ಕಾರ್ಯಾಲಯ (Permanent Secretariat) ವನ್ನು ಹೊಂದಿರದೆ, 'ಟ್ರಯೋಕಿಯಾ' ಎಂಬ ತ್ರೈವಾರ್ಷಿಕ ಪರಿಕಲ್ಪನೆ ಅಡಿಯಲ್ಲಿ ಇದರ ನಾಯಕತ್ವವು ನಿರ್ದಿಷ್ಟ ಮೂರು ವರ್ಷಗಳ ಅವಧಿಯಲ್ಲಿ ಒಂದು ವರ್ಷದಲ್ಲಿ ಒಂದೊಂದು ರಾಷ್ಟ್ರಕ್ಕೆ ಎಂಬಂತೆ ಅಧ್ಯಕ್ಷತೆಯು ಬದಲಾಗುತ್ತಿರುತ್ತದೆ. ಈ 'ಟ್ರಯೋಕಿಯಾ' ಪರಿಕಲ್ಪನೆಯಂತೆಯೇ, 2022 ರಲ್ಲಿ ಇಂಡೊನೇಷ್ಯಾ ರಾಷ್ಟ್ರವು ಅಧ್ಯಕ್ಷತೆಯನ್ನು ವಹಿಸಿಕೊಂಡಿತ್ತು. ಆ ರಾಷ್ಟ್ರದ ಅವಧಿ ಮುಗಿದ ಬಳಿಕ ಭಾರತವು 1 ಡಿಸೆಂಬರ್ 2022 ರಿಂದ 30 ನವೆಂಬರ್ 2023 ರವರೆಗೆ ಜಿ–20 ಯ ಅಧ್ಯಕ್ಷ ಸ್ಥಾನವನ್ನು ಹೊಂದಿದ್ದು, ಬಳಿಕ ಬ್ರೆಜಿಲ್ ಈ ವೇದಿಕೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲಿದೆ.

ಈ 18 ನೇಯ G20 ಶೃಂಗಸಭೆಯು ಭಾರತ ದೇಶದ ಅಧ್ಯಕ್ಷತೆಯಲ್ಲಿ ಆಯೋಜಿಸಲ್ಪಟ್ಟಿರುವುದರಿಂದ ಭಾರತವು G20 ಸದಸ್ಯ ರಾಷ್ಟ್ರಗಳ ಜೊತೆಗೆ ಇತರ 09 ದೇಶಗಳನ್ನು, 07 ಅಂತರರಾಷ್ಟ್ರೀಯ ಸಂಸ್ಥೆಗಳನ್ನು, 04 ವಿದೇಶಿ ಪ್ರಾದೇಶಿಕ ಸಂಸ್ಥೆಗಳನ್ನು ಮತ್ತು ಇತರ 03 ಸಂಸ್ಥೆಗಳನ್ನು ಈ ಶೃಂಗಸಭೆಯಲ್ಲಿ ಭಾಗವಹಿಸಿ ವಿವಿಧ ಜಾಗತಿಕ ಸಂಬಂಧಿ ವಿಷಯಗಳ ಕುರಿತು ಚರ್ಚಿಸಲು ಭಾರತ ಆಹ್ವಾನಿಸಿದ್ದು, ಅದರಂತೆಯೇ ಬಾಂಗ್ಲಾದೇಶ, ಈಜಿಪ್ಟ್, ಮಾರಿಷಸ್, ನೆದರ್‌ಲ್ಯಾಂಡ್, ನೈಜೀರಿಯಾ, ಓಮನ್, ಸಿಂಗಾಪುರ, ಸ್ಪೇನ್ ಮತ್ತು ಯುಎಇ ದೇಶಗಳು, ವಿಶ್ವಸಂಸ್ಥೆ (UN), ಅಂತರರಾಷ್ಟ್ರೀಯ ಹಣಕಾಸು ನಿಧಿ (IMF), ವಿಶ್ವಬ್ಯಾಂಕ್ (WB), ವಿಶ್ವ ಆರೋಗ್ಯ ಸಂಸ್ಥೆ (WHO), ವಿಶ್ವ ವ್ಯಾಪಾರ ಸಂಸ್ಥೆ (WTO), ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ (ILO), ಹಣಕಾಸು ಸ್ಥಿರ ಮಂಡಳಿ (FSB), ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆ(OECD) ಗಳಂತಹ ಅಂತರರಾಷ್ಟ್ರೀಯ ಸಂಸ್ಥೆಗಳು, ವಿದೇಶಿ ಪ್ರಾದೇಶಿಕ ಸಂಸ್ಥೆಗಳಾದ ಆಫ್ರಿಕನ್ ಒಕ್ಕೂಟ (AU), ಆಫ್ರಿಕನ್ ಒಕ್ಕೂಟದ ಅಭಿವೃದ್ಧಿ ಸಂಸ್ಥೆ (AUDA), NEPAD ಯೋಜನೆ ಮತ್ತು ಸಮನ್ವಯ ಸಂಸ್ಥೆ (NEPAD), ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘ (ASEAN), ಭಾರತದ ಅಧ್ಯಕ್ಷತೆಯಲ್ಲಿ ಅಂತರರಾಷ್ಟ್ರೀಯ ಸೌರ ಮೈತ್ರಿಕೂಟ (ISA), ವಿಪತ್ತು ಮೂಲಸೌಕರ್ಯ ನಿರ್ವಾಹಕ ಒಕ್ಕೂಟ (CDRI) ಹಾಗೂ ಏಷಿಯಾ ಅಭಿವೃದ್ಧಿ ಬ್ಯಾಂಕ್ (ADB) ಸಂಸ್ಥೆಗಳ ಅಧ್ಯಕ್ಷರುಗಳು ಈ ಶೃಂಗಸಭೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

**G20 ಕಾರ್ಯವೈಖರಿ:** G20ಯು ಅಧ್ಯಕ್ಷತೆ ವಹಿಸಿಕೊಂಡ ದೇಶವು ಒಂದು ವರ್ಷದವರೆಗೆ ವಿವಿಧ ಕಾರ್ಯಕ್ರಮಗಳನ್ನು, ವಿಷಯಾಧಾರಿತ ಚರ್ಚೆಗಳನ್ನು, ಶೃಂಗಸಭೆಯನ್ನು ಆಯೋಜಿಸುತ್ತದೆ. ಇಲ್ಲಿ ಎರಡು ಪ್ರಮುಖ ಟ್ರ್ಯಾಕ್‌ಗಳು ಕೆಲಸ ನಿರ್ವಹಿಸುತ್ತವೆ. ಅವುಗಳಲ್ಲಿ ಪ್ರಮುಖವಾಗಿ ಒಂದು ಹಣಕಾಸು ಹಾಗೂ ಆರ್ಥಿಕ ಸಂಭಂದಿಸಿದ 'ಫೈನಾನ್ಸ್' ಟ್ರ್ಯಾಕ್ ಆದರೆ ಮತ್ತೊಂದು 'ಶೆರ್ಫಾ' ಟ್ರ್ಯಾಕ್ ಆಗಿದೆ. ಫೈನಾನ್ಸ್ ಟ್ರ್ಯಾಕ್ ಪ್ರಮುಖವಾಗಿ ಆಯಾ ಸದಸ್ಯ ರಾಷ್ಟ್ರಗಳ ಹಣಕಾಸು ಸಚಿವರುಗಳು, ಸೆಂಟ್ರಲ್ ಬ್ಯಾಂಕುಗಳ ಗವರ್ನರ್‌ಗಳು ಕೇಂದ್ರ ಹಣಕಾಸು ಸಚಿವಾಲಯದಡಿಯಲ್ಲಿ ಮುನ್ನಡೆಸುತ್ತಾರೆ. ಜೊತೆಗೆ ಈ ಸಭೆಯಲ್ಲಿ ಸರ್ಕಾರಗಳ ಪ್ರಮುಖ

ವಿಭಾಗಗಳ ಅಧಿಕಾರಿಗಳು, ಕಾರ್ಯದರ್ಶಿಗಳು, ಸಂಪನ್ಮೂಲ ವ್ಯಕ್ತಿಗಳು, ಪ್ರಮುಖ ಆಹ್ವಾನಿತ ಸಂಸ್ಥೆಗಳ ಅಧ್ಯಕ್ಷರುಗಳು, ಪ್ರತಿನಿಧಿಗಳು ಭಾಗವಹಿಸಿ ಸಂಬಂಧಿತ ಜಾಗತಿಕ ವಿಷಯಗಳ ಬಗೆಗೆ ವಿಸ್ತೃತ ಅವಲೋಕನ, ಚರ್ಚೆ ಮತ್ತು ನಿರ್ಧಾರಗಳನ್ನು ಕೈಗೊಳ್ಳುತ್ತಾರೆ. ಇನ್ನೊಂದು 'ಶೇರ್ಪಾ ಟ್ರ್ಯಾಕ್' ಈ ಎಲ್ಲ ಶೃಂಗಸಭೆ ಸಂಬಂಧಪಟ್ಟ ಕಾರ್ಯ ಕೆಲಸಗಳ ನಿರ್ವಹಿಸಲು ಪ್ರಮುಖ ಪಾತ್ರ ವಹಿಸುತ್ತದೆ.

ಭಾರತದ G20 ಅಧ್ಯಕ್ಷತೆಯು 'ವಸುಧೈವ ಕುಟುಂಬಕಂ' ಎಂಬ ಧ್ಯೇಯವಾಕ್ಯದ ಹಿಂದೆ ಗಾಢವಾದ ಅರ್ಥ ಪಂಕ್ತಿ ಅಡಕವಾಗಿದೆ. 'ಒಂದೇ ಜಗತ್ತು, ಒಂದೇ ಕುಟುಂಬ ಮತ್ತು ಒಂದೇ ಭವಿಷ್ಯ' ಎಂಬ ವಿಶಾಲ ವ್ಯಾಪ್ತಿಯ ಅರ್ಥವನ್ನು ಇದು ಒಳಗೊಂಡಿದೆ. ಎಂದರೆ ಗಡಿಗಳು, ಭಾಷೆಗಳು ಮತ್ತು ಸಿದ್ಧಾಂತಗಳನ್ನು ಮೀರಿ ಒಂದು ಕುಟುಂಬ ಎಂಬ ಪರಿಕಲ್ಪನೆಯಡಿ ಅಭ್ಯುದಯ ಸಾಧಿಸಲು ನಮ್ಮನ್ನು ಉತ್ತೇಜಿಸುವ ದೃಷ್ಟಿಕೋನದ ಅಡಿಯಲ್ಲಿ ಈ ಬಾರಿಯ ಅದ್ಭುತ G20ಯ ಸಭೆಗಳು ದೇಶದ ನಾನಾ ಭಾಗಗಳಲ್ಲಿ, ನಗರಗಳಲ್ಲಿ ಆಯೋಜಿಸ್ಪಟ್ಟು, ಈ ವೇದಿಕೆಯ ಪ್ರತಿನಿಧಿಗಳು ದೇಶದ ಉದ್ದಗಲಕ್ಕೂ ಸಂಚರಿಸಿ ಆರ್ಥಿಕತೆ, ಸಾಮಾಜಿಕ, ಸಾಂಸ್ಕೃತಿಕ, ವೈದ್ಯಕೀಯ ಮತ್ತು ಸಂಪ್ರದಾಯಿಕ ದೇಶಿ ವಿವಿಧ ಪದ್ಧತಿಗಳ ಉನ್ನತಿಗೆ ಕಾರ್ಯಗತವಾಗಿ ಚರ್ಚೆ ನಡೆಸಿದ್ದಾರೆ.

ಈ ಎಲ್ಲ ಶಿಷ್ಟಾಚಾರಗಳ ಪ್ರಕಾರ 'G-20' ರಾಷ್ಟ್ರಗಳ ಅಧ್ಯಕ್ಷತೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯೂ ಭಾರತ ಸರ್ಕಾರದ ಸಹಯೋಗದೊಂದಿಗೆ ಗುಜರಾತಿನ ಗಾಂಧಿನಗರದ 'ಮಹಾತ್ಮಾ ಮಂದಿರ್' ಕನ್ವೆಷ್ನನ್ ಸೆಂಟರಿನಲ್ಲಿ ಆಗಸ್ಟ್ 17,18 ಮತ್ತು 19 ರಂದು ಆಯೋಜಿಸಿದ್ದಂತಹ 'ಸಾಂಪ್ರದಾಯಿಕ ಔಷಧಿಗಳ ಜಾಗತಿಕ ಶೃಂಗಸಭೆ' ('WHO Traditional Medicine Global Summit') ಯಲ್ಲಿ WHO ಡೈರೆಕ್ಟರ್ ಜನರಲ್ ಟೆಡ್ರೋಸ್ ಅದಾನೋವ್ ಘೇಬ್ರೆಯೆಸುಸ್, ಗುಜರಾತಿನ ಮುಖ್ಯಮಂತ್ರಿ ಶ್ರೀ ಭೂಪೇಂದ್ರ ರಜನೀಕಾಂತ್ ಪಟೇಲ್, ಕೇಂದ್ರ ನೀತಿ ಆಯೋಗದ ಸದಸ್ಯರು, ನೊಬೆಲ್ ಪ್ರಶಸ್ತಿ ಪುರಸ್ಕೃತರು, G20 ರಾಷ್ಟ್ರಗಳ ಪ್ರಮುಖ ನಾಯಕರುಗಳು, ಕೇಂದ್ರ ಆರೋಗ್ಯ ಮತ್ತು ಆಯುಷ್ ಸಚಿವರೂ ಸೇರಿದಂತೆ ವಿಶ್ವದ 31 ದೇಶಗಳ ಪ್ರಮುಖ ಸಚಿವರುಗಳು ಮತ್ತು 143 ಬೇರೆ ಬೇರೆ ದೇಶಗಳ ವೈದಕೀಯ ತಜ್ಞರು ಭಾಗವಹಿಸಿ ಆರೋಗ್ಯ, ಹಣಕಾಸು ಸಂಬಂಧಿತ, ನಾವಿನ್ಯ ಸಂಶೋಧನೆಗಳನ್ನು ಮತ್ತು ವಿಚಾರಗಳನ್ನು ಹಂಚಿಕೊಂಡರು.






ಈ ಒಂದು ಅಂತರ ರಾಷ್ಟ್ರೀಯ ಮಟ್ಟದ ಶೃಂಗಸಭೆಯಲ್ಲಿ ನಮ್ಮ ಸಚಿವಾಲಯದ ವತಿಯಿಂದ ಮಾಧ್ಯಮ ಸಂಯೋಜಕನಾಗಿ ಭಾಗವಹಿಸಿ ಕೆಲಸದ ಜೊತೆಗೆ ಹಲವಾರು ವಿಷಯುಗಳ ಬಗೆಗೆ, ವಿಚಾರಗಳ ಬಗ್ಗೆ ತಿಳಿದುಕೊಳ್ಳುವ ಒಂದು ಅವಕಾಶ ನನಗೆ ಒದಗಿ ಬಂದಿತ್ತು. ವಿವಿಧ' ಆಯಾಮಗಳಲ್ಲಿ ನಡೆದ ಸಭೆ ಮತ್ತು ಚರ್ಚೆಗಳಲ್ಲಿ ವಿವಿಧ ದೇಶಗಳ ಯೋಗ, ಆಯುರ್ವೇದ, ಯುನಾನಿ, ಸಿದ್ಧೌಷಧಿಗಳಂತಹ ಚಿಕಿತ್ಸಾ ಪದ್ಧತಿಗಳ ಬಳಕೆ, ಸಂಶೋಧನೆ, ಪ್ರಭಾವ, ಅಭಾವ ಹಾಗೂ ಅವುಗಳ ಉನ್ನತಿಕರಣಗಳ ಬಗೆಗೆ ಮುಖ್ಯ ರೂಪಕವಾಗಿ ಮಂಡಿಸಲಾಯಿತು.

ನವದೆಹಲಿಯ ಪ್ರಗತಿ ಮೈದಾನದಲ್ಲಿ ಅತಿ ಕಠಿಣ ಸುರಕ್ಷಾ ಕ್ರಮಗಳೊಂದಿಗೆ ಸೆಪ್ಟಂಬರ್ 09 ಮತ್ತು 10 ರಂದು G20 ಅಧ್ಯಕ್ಷತೆಯೊಂದಿಗೆ ಭಾಗವಹಿಸಲಿರುವ ಭಾರತದ ಗೌರವಾನ್ವಿತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಹಾಗೂ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಸೇರಿದಂತೆ G20 ದೇಶಗಳ ಎಲ್ಲ ಸದಸ್ಯ ರಾಷ್ಟ್ರಗಳ ಅಧ್ಯಕ್ಷರುಗಳು, ಇತರ ಅಹ್ವಾನಿತ ರಾಷ್ಟ್ರಗಳ, ಅಂತರರಾಷ್ಟ್ರೀಯ ಸಂಸ್ಥೆಗಳ ಅಧ್ಯಕ್ಷರುಗಳಿಂದ ಶೃಂಗಸಭೆಯು ಭಾರತದ ರಾಜತಾಂತ್ರಿಕ ಗರಿಮೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿಸಲಿದೆ. ಹಾಗು ಭವ್ಯ ಭಾರತ ದೇಶದ ಅಮೃತ ಕಾಲದ ಈ ಪರ್ವ ಕಾಲದಲ್ಲಿ ಅಭಿವೃದ್ಧಿಯ ಮೂಲಮಂತ್ರದೊಂದಿಗೆ ಜ್ಞಾನ, ವಿಜ್ಞಾನ, ಕ್ರೀಡೆ ಸಾಹಸ, ಬಾಹ್ಯಾಕಾಶ ಮತ್ತು ಆರ್ಥಿಕತೆಯಲ್ಲಿ ದಾಪುಗಾಲು ಇಟ್ಟಿರುವ ದೇಶ ಅಂತರರಾಷ್ಟ್ರೀಯ ವೇದಿಕೆಯಲ್ಲಿ ಮತ್ತೊಮ್ಮೆ ವಸುಧೈವ ಕುಟುಂಬಕಂ ಎಂಬ ಮೂಲ ಮಂತ್ರದೊಂದಿಗೆ ಸರ್ವರಿಗೂ ಸಮಬಾಳು, ಸಮಪಾಲಿನ ಶಾಂತಿ ಪಾಠವನ್ನು ಜಪಿಸಿದೆ. ಇದು ದೇಶದ ಪ್ರಜಾಪ್ರಭುತ್ವದ ಮೌಲ್ಯಗಳಾದ ಕಲ್ಯಾಣ ರಾಜ್ಯದ ಸರ್ವೇ ಜನೋಃ ಸುಖಿನೋಭವಂತು ಎಂಬ ಸಂದೇಶದ ಮೂಲಕ ದೇಶದ ರಾಜತಾಂತ್ರಿಕ ಬಲಾಢ್ಯತೆಗೆ ಅಂತರಾಷ್ಟ್ರೀಯ ವೇದಿಕೆ ಕಲ್ಪಿಸಿ ಕೊಟ್ಟಿದೆ ಎನ್ನಬಹುದು. G20 ಶೃಂಗಸಭೆ ಯಶಸ್ವಿಯಾಗಲಿ ಎಂದು ಶುಭ ಕೋರುತ್ತೇನೆ.■

***ಶ್ರೀ ಯಲ್ಲಾಲಿಂಗ ಕೊಪ್ಪದ***
ಜರ್ನಲಿಸ್ಟ್, ನವದೆಹಲಿ
ಸದಸ್ಯರು, ಅಭಿಮತ ಸಂಪಾದಕ ಮಂಡಳಿ



'ಭಾರತ್ ಮಂಡಪಂ' ಜಿ 20 ಶೃಂಗ ಸಭೆ ನಡೆಯಲಿರುವ ನವದೆಹಲಿಯ ಪ್ರಗತಿ ಮೈದಾನದಲ್ಲಿರುವ IECC

# 2002 ರಲ್ಲಿ ಸಂಘದಲ್ಲಿ ಆಯೋಜನೆಗೊಂಡ ಎರಡು ದಿನಗಳ ವಾರ್ಷಿಕೋತ್ಸವ

ಯಾವುದೇ ಒಂದು ಸಮಾರಂಭ' ಕಾರ್ಯಕ್ರಮ ಆದಾಗ ಅದರ ವೈಭವದ ಬಗ್ಗೆ ಇತರರಿಂದ ತಿಳಿಯಬೇಕೆಂಬ ಆಸೆ ಪ್ರತಿಯೊಬ್ಬರಿಗೂ ಇರುವುದು ಸಹಜ. ಇದು ಕುಟುಂಬ, ಸಂಸ್ಥೆ, ಸಂಘ ಎಲ್ಲರಿಗೂ ಒಂದು ಆಸೆಯುಂಟಾಗುವುದು ವಾಸ್ತವಿಕ. ಟೀಕೆ, ಟಿಪ್ಪಣಿಗಳು, ನಿಂದೆ, ಹೊಗಳಿಕೆ ಎಲ್ಲವೂ ಸರ್ವೇ ಸಾಮಾನ್ಯ, ಪ್ರಶಂಸೆ, ಸಂವೇದನೆಗಳಂತೂ ಅಪರೂಪ! ಆದರೂ ಸೌಜನ್ಯದಿಂದ ಒಂದೆರಡು ಕಳಕಳಿಯ ಮಾತು ಉತ್ಸಾಹ ದ್ಯೋತಕವಾದ ಪ್ರಭಾವವನ್ನು ಬೀರುವುದರಲ್ಲಿ ಸಂದೇಹವಿಲ್ಲ.

ಮರೆಯಲಾರದ್ದು. ತನ್ನ ಮನೆಯ ಕಾರ್ಯಕ್ರಮ ಎಂಬ ಸಹೃದಯತೆಯಿಂದ ಕೆಲಸ ಮಾಡಿದ್ದು. ಅಬ್ಬಾ ಎರಡು ದಿನವೂ 600 ಜನ. ಎಷ್ಟೋ ಜನ ಆಟಕ್ಕುಂಟು, ಲೆಕ್ಕಕ್ಕಿಲ್ಲ, ಊಟಕ್ಕೆ ಉಂಟು ನೋಟಕ್ಕಿಲ್ಲ!

ಅಂತೂ ಇಷ್ಟು ಭಾರಿ ಪ್ರಮಾಣದಲ್ಲಿ ಈ ತರಹ ಚಟುವಟಿಕೆಗಳು ಉತ್ಸವಗಳು ದೆಹಲಿ ಕರ್ನಾಟಕ ಸಂಘದ ಹಳೇ ಕಟ್ಟಡದಲ್ಲಿ ನಡೆದಿದ್ದು. ಇಂತಹ ನಗರದಲ್ಲಿ ದೂರ ದೂರದಿಂದ ಮಕ್ಕಳು ಮರಿ ಕಟ್ಟಿಕೊಂಡು ಒಂದೆಡೆ ಸೇರಿಸಿ ಕಾರ್ಯಕ್ರಮ ನಡೆಸುವುದು ಸುಲಭ ಸಾಧ್ಯವಾಗಿರಲ್ಲ. ದಕ್ಷತೆ, ಆದ್ಯತೆ ನಿಷ್ಠೆಯಿಂದ ಎಲ್ಲರೂ ಒಗ್ಗಟ್ಟಾಗಿ ಸೇರಿ ಶ್ರೇಯಸ್ಸಿಗೆ ಕಾರಣೀಭೂತರು. ಆಗಿನ ಯುವಕರಾದ ನಾಗರತ್ನಮ್ಮನವರ ಸ್ತ್ರೀ ನಾಟಕ ಮಂಡಳಿಯ ಗದಾಯುದ್ಧ, ಅಷ್ಟಲಕ್ಷ್ಮಿ ನೃತ್ಯ, ನಾಟಕಗಳು ಎಲ್ಲಾ ನಡೆದವು. ಇದು ವರದಿಯೂ ಅಲ್ಲ, ಹೆಗ್ಗಳಿಕೆಯೂ ಅಲ್ಲ, ಬೂಟಾಟಿಕೆಯಂತೂ ಮೊದಲೇ ಇಲ್ಲ. ಜಂಭ ಕೊಚ್ಚಿಕೊಳ್ಳುವವರಲ್ಲ. ಹೆಮ್ಮೆಯಿಂದ ಹೇಳುವುದಾದರೆ ಇದು ನನ್ನ ಹೃತ್ಪೂರ್ವಕವಾಗಿ ಬಂದ ಭಾವನೆಗಳು ಕನ್ನಡಿಗರ ಆದರಕ್ಕೆ ಪಾತ್ರರಾಗಬೇಕೆನ್ನುವ ಸದಸ್ಯರುಗಳು. ಕರ್ನಾಟಕ ಸಂಘದ ಕಾರ್ಯಕ್ರಮಗಳ ಸಫಲತೆಗೆ ಕಾರಣೀಭೂತರು ಸಂಘದ ಕಾರ್ಯಕಾರಿ ಸಮಿತಿಯ ಆಡಳಿತಗಾರರು.

ಅದೇ ದಿನ ಕೆ.ಇ.ಬಿ. ನಾಟಕ ಕಂಪೆನಿಯ ಸುಪ್ರಸಿದ್ಧ ನಾಟಕಗಳು, ಪದ್ಮಶ್ರೀ ಚಿಂದೋಡಿ ಲೀಲಾರವರ



ಡಾ. ಸರೋಜಿನಿ ಮಹಿಷಿಯವರು ಮತ್ತು ಕರ್ನಾಟಕ ಸರ್ಕಾರದ ಮಂತ್ರಿಯವರ ಜೊತೆ ಸಂಘದ 2009ರಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಘದ ಸದಸ್ಯರೊಂದಿಗಿನ ಕ್ಷಣ.



ಜೆಎನ್‌ಯು ಶರಾವತಿ ಕನ್ನಡ ಸಂಘದ 1983ರ ದಶಮಾನೋತ್ಸವ ಸಂದರ್ಭದಲ್ಲಿ ಸದಸ್ಯರೊಂದಿಗೆ ಭಾಗವಹಿಸಿದ ಸಂದರ್ಭದ ನೆನಪಿನ ದೃಶ್ಯ

ಆ ಸಂದರ್ಭದಲ್ಲಿ ನಡೆದ ಎರಡು ದಿವಸಗಳ ದೆಹಲಿ ಕರ್ನಾಟಕ ಸಂಘದ ವಾರ್ಷಿಕೋತ್ಸವ ಸಂಭ್ರಮದ ಆನಂದವನ್ನು ಇಂದು ಮೆಲುಕು ಹಾಕುತ್ತಿದ್ದೇನೆ. ಅದರ ಅಂಗವಾಗಿ ಏರ್ಪಡಿಸಿದ ಪ್ರತಿ ಒಂದು ಕಾರ್ಯಕ್ರಮವೂ ತನ್ನದೇ ಆದ ವಿಶಿಷ್ಟತೆಯಿಂದ ಸಾಕಷ್ಟು ಜನಗಳನ್ನು ಪುಟಾಣಿಗಳಿಂದ ಹಿಡಿದು ಅಜ್ಜ ಅಜ್ಜಿಯರವರೆಗೂ ಭಾಗವಹಿಸಲು ಅವಕಾಶ ಕಲ್ಪಿಸಿತ್ತು. ಅದರ ವಿಶೇಷತೆಯನ್ನು ವ್ಯಕ್ತಪಡಿಸಿದ್ದೂ ಅಲ್ಲದೆ ಆಟ, ಪಾಠ, ಊಟ ಎಂಬಂತೆ ಉತ್ಸಾಹದಿಂದ ಆಟ ಆಡಿ ಎಷ್ಟೋ ಪಾಟಗಳ ವೈವಿಧ್ಯತೆಯನ್ನು ಒಪ್ಪಿಸಿ, ಪುಷ್ಕಳ ಭೋಜನ ಉಂಡು ತಾಂಬೂಲವಿಲ್ಲದಿದ್ದರೂ ತಂಬೋಲ ಆಡಿ ಅದರಲ್ಲಿ ಹಣ ಗೆದ್ದವರ ಜಂಭದ ನೋಟ, ಸೋತಿದ್ದವರ ನಿರಾಶೆಯ ಗೋಣಗಾಟ ಇವುಗಳ ಸಮ್ಮಿಶ್ರದ ಗಲಾಟೆ ಎಲ್ಲಾ ಹೇಳಿ ಕೇಳಿ ಹಾಡಿದ್ದೂ ಹಾಡಿದ್ದೇ, ಬುಡು ಬುಡುಕೆಯನ್ನು ಹಿಡಿದು ಕಣಿ ಹೇಳಿದ್ದು ಹೇಳಿದ್ದೇ.

ಆದರೆ ವಾರ್ಷಿಕೋತ್ಸವವನ್ನು ಬೆಳಗಿನಿಂದ ಸಂಜೆವರೆಗೂ ಹೇಗಪ್ಪಾ ನಡೆಸುವುದು ಎಂಬ ಯೋಚನೆ ಆಯೋಜಕರಿಗೆ ಆದರೆ ಬೆಳಗಿನಿಂದ ರಾತ್ರಿವರೆಗೂ ಹೇಗಪ್ಪಾ ಭಾಗವಹಿಸುವುದು ಎಂದು ಸದಸ್ಯರ ಒಂದು ಧೋರಣೆ ಪ್ರಾರಂಭದಲ್ಲಿದ್ದರೂ ಕೊನೆಗೆ ಅದು ಎಷ್ಟು ಬೇಗ ಮುಗಿದುಹೋಯಿತು, ಇನ್ನು ಮುಂದಿನ ಬಾರಿವರೆಗೂ ಕಾದಿರಬೇಕು, ಅಲ್ಲದೆ ಇಂದಿನಿಂದಲೇ ಯೋಚಿಸಿ ಚೆನ್ನಾಗಿ ತಯಾರಿ ಮಾಡಿಕೊಳ್ಳಬೇಕೆನ್ನುವ ಮನಸ್ಸಿನಲ್ಲೇ ಕಜ್ಜಾಯ ತಿಂದಿದ್ದೂ ಸಹ ಉಂಟು. ಆಗ ಮುಂದುವರೆದು ಎಲ್ಲಾ ಕೆಲಸ ಮಾಡಿದವರ ಸಹಕಾರ ನನ್ನ ಜೊತೆ ಜ್ಯೋತ್ಸ್ನಾರಾವ್, ಸುಮಿತ್ರಾರಾವ್, ಜನಕಪುರಿ ಕನ್ನಡ ಕೂಟದ ಪಾರ್ವತಿ ಭವಾನಿಶಂಕರ್ ಇವರ ಸಹಕಾರ (Bachelors) ಅಶೋಕ (ಲಂಬು), ರೇಣುಕುಮಾರು ಇನ್ನೂ ಅನೇಕರು (ನನಗೆ ಈಗ) ಹೆಸರುಗಳು ಮರೆತು ಹೋಗುತ್ತಿವೆ. ಯಾವುದಕ್ಕೂ ತೊಂದರೆ ಆಗದಂತೆ ಕೆಲಸ ಮಾಡಿದ್ದು ಶ್ಲಾಘನೀಯ! ನಮ್ಮ ದೆಹಲಿ ಕರ್ನಾಟಕ ಸಂಘದ ಆಡಳಿತ ಮಂಡಳಿ, ವ್ಯವಸ್ಥಾಪಕರು ಸಕ್ರಿಯವಾಗಿ ಕೆಲಸ ಮಾಡುತ್ತಿದ್ದ ಶ್ರೀ ಬಾಲಚಂದ್ರ ಮತ್ತು ಅವರ ಗುಂಪು. ಇವರನ್ನೆಲ್ಲಾ ಸದಾ ನೆನೆಸಿಕೊಳ್ಳುವುದು ಗುರುತರವಾದದ್ದು.

ಕನ್ನಡ ಬಂಧುಗಳ ಸೌಹಾರ್ದತೆ, ಸೌಜನ್ಯತೆ, ವಿಶ್ವಾಸ, ಗೌರವಾನ್ವಿತ ಸಹಕಾರ ಬೆಂಬಲ ನೆರವಾದರೆ ಯಾವುದೇ ಕಾರ್ಯ ಅಸಾಧ್ಯವಲ್ಲ ಎಂಬ ಭಾವನೆ ಉತ್ಪತ್ತಿಯಾಯಿತು. ಯಾವ ಖಜಾನೆಯಲ್ಲಿ ಯಾವ ರತ್ನಗಳು ಅಡಗಿವೆಯೋ?. ಆ ರತ್ನಗಳನ್ನು ಹುಡುಕಿ ಹೊರತಂದು ಪ್ರಕಾಶಬೀರಬೇಕು. ಇನ್ನೂ ಹೆಚ್ಚು ಜನ ಉತ್ಸಾಹಭರಿತ ಯುವಕರು ಪ್ರೌಢರುಗಳನ್ನು ನಡೆಸಬೇಕು. ಕಾಂಚಾಣಂ ಕಾರ್ಯಸಿದ್ಧಿ ಎನ್ನುವಂತೆ, ಕನ್ನಡ ಸಂಘದ ಹಿಂದಿನ ಆರ್ಥಿಕ ಸ್ಥಿತಿ ಶೋಚನೀಯವಾಗಿತ್ತು. ಹಣದ ಕೊರತೆ ಇತ್ತು. ಹಳೇ ಕಟ್ಟಡದ ಮುಂದೆ ಇದ್ದ ಹಸಿರು ಹುಲ್ಲುಗಾವಲಿನಲ್ಲಿ ಒಂದು ಟೆಂಟ್ ಕಟ್ಟಿ ನಿಮ್ಮ ಕುರ್ಚಿ ದಯವಿಟ್ಟು ಕೊಂಡುಕೊಳ್ಳಿ ನಿಮ್ಮ ಹೆಸರು ಬರೆದುಕೊಳ್ಳಿ ಎಂಬ ಸ್ಲೋಗನ್ ಶುರುಮಾಡಿ ಸಾಕಷ್ಟು ಜನ ತಲಾ ಎರಡೆರಡು ಕುರ್ಚಿಕೊಂಡು ಅವರವರ ಕುರ್ಚಿಯಲ್ಲಿ (ಹೆಸರು ಬರೆಸಿ) ಕುಳಿತುಕೊಳ್ಳಿ ಎಂದು ಕಾರ್ಯಕ್ರಮ ನಡೆಸಲಾಯಿತು. ಅದೇ ಹುಲ್ಲುಗಾವಲಿನ ಮೈದಾನದಲ್ಲಿ ಕಲಾಮಂಚ ಎಂದು ಕಟ್ಟಿಸಿ (ಒಂದು ಸ್ಟೇಜ್) ಅದರ ಹಿಂದೆ ಹಸಿರು ಕೋಣೆ, ಒಂದು ತುರ್ತಿನ ಬಚ್ಚಲು ಮನೆ ಕಟ್ಟಿಸಿ ಕಾರ್ಯಕ್ರಮ ನಡೆಸಿದೆವು. ಆ ಕಲಾ ಮಂಚದಲ್ಲಿ ಶಂಭು ಹೆಗಡೆಯವರ ಯಕ್ಷಗಾನ ಸುಪ್ರಸಿದ್ಧ ನಾಟಕಗಳು 'ಪೋಲಿಸನ ಮಗಳು– ಪಟೇಲನ ಹೆಂಡತಿ' ಎಷ್ಟೇ ಹೊತ್ತಾದರು ಕಾದು ನೋಡಿದ ಪ್ರೇಕ್ಷಕಗಣದ ಆನಂದಕ್ಕೆ ಪಾರವೇ ಇರಲಿಲ್ಲ.

ಚಿಂದೋಡಿ ಲೀಲಾರವರು ಮತ್ತು ಅವರ ಗುಂಪು ಮೂರು ದಿನ ದೆಹಲಿ ಕರ್ನಾಟಕ ಸಂಘ ಮಾತ್ರ ಸಂಸ್ಥೆಯ ಸಮುಚ್ಚಯದ ಬಗ್ಗೆ ಚರ್ಚೆ, ಧುರೀಣರ ಆಶ್ವಾಸನೆ, ಭರವಸೆಗಳು ದೆಹಲಿ ಕನ್ನಡಿಗರ ನಾಣ್ನುಡಿ, ಸಂಸ್ಕೃತಿ ಮತ್ತು ವಿಶೇಷ ಅರ್ಥಪೂರ್ಣ ಸೌಲಭ್ಯಗಳ ಬಗ್ಗೆ ಇರುವ ಜವಾಬ್ದಾರಿಯ ಅರಿವನ್ನು ಮಾಡಿ ಕೊಟ್ಟಿದ್ದಲ್ಲದೆ ಒಂದು ತರಹ ಹೆಮ್ಮೆಪಡುವ ಸಂಕೇತವಾಗಿತ್ತು ಪದ್ಮಶ್ರೀ ಚಿಂದೋಡಿ ಲೀಲಾರವರು ತಮ್ಮ ಕಂಪನಿಯ ವಜ್ರೋತ್ಸವವನ್ನು ಅಳವಡಿಸಿಕೊಂಡು ಕಲಾಕುಶಲತೆಯ ವೈಖರಿಯನ್ನು ತೋರಪಡಿಸಿದರು. ಅಂತೂ ಈ ಎರಡು ದಿವಸಗಳು ನಮ್ಮ ದೆಹಲಿ ಕರ್ನಾಟಕ ಸಂಘದ ಸುವರ್ಣ ಮಹೋತ್ಸವದ ಸವಿನೆನಪಿನೊಡನೆ ಅದ್ಭುತವೂ ಆನಂದಮಯವಾಗಿಯೂ ಇತ್ತು.

ಇದೇ ಸಮಯದಲ್ಲಿ ನನಗೆ 2000 ಇಸವಿಯ ಅಂತರ್‌ದೇಶೀಯ ಮಹಿಳೆ ಎಂಬ ಸನ್ಮಾನ ಇಂಟರ್‌ನ್ಯಾಷನಲ್ ಬಯೋಗ್ರಾಫಿಕಲ್ ಇನ್ಸ್ಟಿಟ್ಯೂಟ್ ಸನ್ಮಾನಿಸಿತು. ಚಿಂದೋಡಿ ಲೀಲಾರವರು ನನ್ನನ್ನು ಸಭಾಂಗಣಕ್ಕೆ ಕೈಹಿಡಿದು ಕರೆದುಕೊಂಡು ಹೋಗಿ, ಮುತ್ತಿನಹಾರ, ಹೂಗುಚ್ಛ ಕೊಟ್ಟರು. ಪ್ರೊ. ಸನಾದಿಯವರು. ಹಾರ್ದಿಕ ಶುಭಾಶಯ ಹೇಳಿದರು.

ಇವೆಲ್ಲಾ ಈಗ ಮರೆಯಲಾಗದ ನೆನಪುಗಳು


***ಡಾ. ಅಹಲ್ಯಾಚಿಂತಾಮಣಿ***
ನಿವೃತ್ತ ಮುಖ್ಯಸ್ಥೆ, ಸಸ್ಯಶಾಸ್ತ್ರ ವಿಭಾಗ
ಗಾರ್ಗಿ ಕಾಲೇಜು, ದೆಹಲಿ ವಿಶ್ವವಿದ್ಯಾಲಯ

# 2023ರ ಸಾಲಿನಲ್ಲಿ ವೃತ್ತಿಪರ ಕೋರ್ಸ್‌ಗಳನ್ನು ಯಶಸ್ವಿಯಾಗಿ ಮುಗಿಸಿ ಪದವಿಯನ್ನು ಪಡೆದ ಹೆಮ್ಮೆಯ ದೆಹಲಿ ಕನ್ನಡಿಗರ ಮಕ್ಕಳು



**ಕು. ನವಯುಗ್ ಶ್ರೀರಾಮ್ :** ಬಿ.ಇ.–ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ಬಿ.ಎಂ.ಎಸ್.ಐ.ಟಿ, ಬೆಂಗಳೂರು, ವಿ.ಟಿ.ಯು (VTU) ಬೆಳಗಾವಿ.

ಶ್ರೀ ನವಯುಗ್ ಶ್ರೀರಾಮ್ ದೆಹಲಿ ಕರ್ನಾಟಕ ಸಂಘದ ಅಜೀವ ಸದಸ್ಯರಾದ ಶ್ರೀ ನರಸಿಂಹ ಮೂರ್ತಿ ಮತ್ತು ಶ್ರೀಮತಿ ರೂಪಶ್ರೀ ಅವರ ಪುತ್ರ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೆಂಗಳೂರು ಯಲಹಂಕದಲ್ಲಿನ ಬಿ.ಎಂ.ಎಸ್.ಐ.ಟಿ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದಲ್ಲಿ ಬ್ಯಾಚುಲರ್ ಆಫ್ ಇಂಜಿನೀಯರಿಂಗ್ ಇದೇ ವರ್ಷದ ಜೂನ್ ತಿಂಗಳಲ್ಲಿ ಪದವಿ ಪಡೆದರು. ಹಾಗೇ ಕ್ಯಾಂಪಸ್‌ನಿಂದ ಸೊಸೈಟಿ ಜನರೇಲ್ ಕಂಪನಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ 2023 ಜುಲೈ ತಿಂಗಳಲ್ಲಿ ವೃತ್ತಿಗೆ ಸೇರಿಕೊಂಡಿದ್ದಾರೆ.




**ಕು. ಮಹೇಶ್ ಶಾಂತಕುಮಾರ್ ನಿಂಬಾಳ :** ಬಿ.ಟೆಕ್.– ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ದೆಹಲಿ.(IIT-Delhi)

ಶ್ರೀ ಶಾಂತಕುಮಾರ ನಿಂಬಾಳ ಮತ್ತು ಶ್ರೀಮತಿ ಸುಜಾತ ನಿಂಬಾಳ ಅವರ ಸುಪುತ್ರ ಮಹೇಶ್ ನಿಂಬಾಳ ಅವರು ಭಾರತ ದೇಶದ ಪ್ರತಿಷ್ಠಿತ ಸಂಸ್ಥೆಯಾದ ಐಐಟಿ (IIT) ದೆಹಲಿಯಿಂದ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಬ್ಯಾಚುಲರ್ ಆಫ್ ಟೆಕ್ನಾಲಜಿ ಪದವಿ ಪ್ರಮಾಣ ಪತ್ರ 2023 ಅಗಸ್ಟ್ ತಿಂಗಳಿನಲ್ಲಿ ಪಡೆದುಕೊಂಡಿರುತ್ತಾರೆ. ಹಾಗೇ ದೆಹಲಿ ಐಐಟಿ ಕ್ಯಾಂಪಸ್‌ನಿಂದ ಗುರುಗಾಂವ್ ನಗರದಲ್ಲಿ ಇರುವ NK Securities Research Software ಕಂಪನಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ 2023 ಜೂನ್ ತಿಂಗಳಲ್ಲಿ ವೃತ್ತಿಗೆ ಸೇರಿಕೊಂಡಿದ್ದಾರೆ.



**ಕು. ಅಹರ್ನಿಶ್ ಕೆ.ಎಸ್. :** ಬಿ.ಟೆಕ್.–ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್. ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ದೆಹಲಿ (NIT-Delhi)

ಸಂಘದ ಆಜೀವ ಸದಸ್ಯರಾದ ಶ್ರೀಮತಿ ಆರಾಧನ ಕೆ.ಸಿ. ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ. ಶ್ರೀ. ಮೂರ್ತಿಯವರ ಸುಪುತ್ರ 2023ರ ಜೂನ್‌ನಲ್ಲಿ ದೆಹಲಿಯ ಪ್ರತಿಷ್ಠಿತ ಎನ್.ಐ.ಟಿ.ಯಿಂದ ಬಿ.ಟೆಕ್. ಸಿಎಸ್‌ಇ ಪದವಿಯನ್ನು ಪಡೆದು ಗುರುಗ್ರಾಮದ ಸ್ಕ್ರಯ್ ಅನಲಿಟಿಕ್ಸ್ (Scry Analytics) ಸಂಸ್ಥೆಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ವೃತ್ತಿಗೆ ಸೇರಿಕೊಂಡಿದ್ದಾರೆ.




**ಕು. ಭಕ್ತಿ ಸಫಲ ಮಾನಕಾಪುರೆ :** ಬಿ.ಟೆಕ್. ಎಲೆಕ್ಟ್ರಾನಿಕ್ಸ್ ಆಂಡ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್, ಮಣಿಪಾಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, (MIT-Manipal), ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ (MAHE) ಮಣಿಪಾಲ್, ಕರ್ನಾಟಕ

ಸಂಘದ ಆಜೀವ ಸದಸ್ಯರೂ, ಜನಕಪುರಿ ಮಹಿಳಾ ಮಂಡಳಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ನಯನಾ ಮಾನಕಾಪುರೆ ಮತ್ತು ಶ್ರೀ ಸಫಲ ಮಾನಕಾಪುರೆ ಅವರ ಸುಪುತ್ರಿ. ಬಿ.ಟೆಕ್. ಪದವಿ ಪಡೆದ ನಂತರ ಪುಣೆಯ ಬಜಾಜ್ ಫೈನ್‌ಸರ್ವ್ ಡೈರೆಕ್ಟ್ ಲಿಮಿಟೆಡ್‌ನಲ್ಲಿ ಸಾಫ್ಟ್‌ವೇರ್ ಡೆವಲಪರ್ ಆಗಿ ಉದ್ಯೋಗದಲ್ಲಿದ್ದಾರೆ.



**ಕು. ರೋಹಿತ್ :** ಬಿ.ಟೆಕ್–ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕುರುಕ್ಷೇತ್ರ (NIT-Kurukshetra).

ಸಂಘದ ಆಜೀವ ಸದಸ್ಯರಾದ ಶ್ರೀಮತಿ ಲತಾ ಮತ್ತು ಶ್ರೀ ಬಾಬು ಎನ್. ಅಸ್ಸುರೆ ಅವರ ಸುಪುತ್ರ. ಇವರು ಜೂನ್ 2023ರಲ್ಲಿ ಎನ್‌ಐಟಿ ಕುರುಕ್ಷೇತ್ರದಿಂದ ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್‌ನಲ್ಲಿ ಬಿ.ಟೆಕ್. ಪದವಿ ಪಡೆದು ಬೆಂಗಳೂರಿನ ಫ್ಲಿಪ್‌ಕಾರ್ಟ್ (Flipkart) ಸಂಸ್ಥೆಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.



**ಕು. ನೀಲಾಂಬಿಕ ಕಾಮಶೆಟ್ಟಿ :** ಎಂ.ಬಿ.ಬಿ.ಎಸ್., ಕೊಡಗು ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, (KOIMS), ಮಡಿಕೇರಿ (ರಾಜೀವ್ ಗಾಂಧಿ ಯುನಿವರ್ಸಿಟಿ ಆಫ್ ಹೆಲ್ತ್ ಸೈನ್ಸ್ (RGUHS) ಬೆಂಗಳೂರು. ಸಂಘದ ಆಜೀವ ಸದಸ್ಯರೂ, ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ, ಹಿರಿಯ ದೆಹಲಿ ಕನ್ನಡಿಗರಾದ ಶ್ರೀ ವಿ.ವಿ. ಬಿರಾದಾರ ಅವರ ಮೊಮ್ಮಗಳು, ಶ್ರೀಮತಿ ರಾಜೇಶ್ವರಿ ಬಿರಾದಾರ ಮತ್ತು ಶ್ರೀ ಅನಿಲ್ ಕುಮಾರ್ ಕಾಮಶೆಟ್ಟಿಯವರ ಸುಪುತ್ರಿ ಕೊಡಗು ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಮಡಿಕೇರಿನಿಂದ ಮೇ 2023ರಲ್ಲಿ ಎಂ.ಬಿ.ಬಿ.ಎಸ್. ಪದವಿ ಪಡೆದು ವೈದ್ಯಳಾಗಿದ್ದಾಳೆ.

**ರಾಜ್ಯದ, ದೇಶದ ಪ್ರತಿಷ್ಠಿತ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ಬಿ.ಇ. / ಬಿಟೆಕ್ / ಎಂ.ಬಿ.ಬಿ.ಎಸ್. ಪದವಿಗಳನ್ನು ಪಡೆದು ರಾಷ್ಟ್ರೀಯ / ಬಹುರಾಷ್ಟ್ರೀಯ ಕಂಪನಿಗಳಲ್ಲಿ ತಮ್ಮ ವೃತ್ತಿಪರ ಜೀವನ ಆರಂಭಿಸಿರುವ ಈ ಎಲ್ಲಾ ಯುವ ಪದವೀಧರರಿಗೆ / ಪದವೀಧರೆಗೆ ದೆಹಲಿ ಕರ್ನಾಟಕ ಸಂಘದ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.**



**ಕು. ಚಿರಂತನ್ ಎನ್. ಗೌಡ**

**12ನೇ ತರಗತಿ, ಶೇ 94**

ಶ್ರೀಮತಿ ಅಶ್ವಿನಿ ಬಿ.ಎನ್. ಮತ್ತು ಶ್ರೀ ನಾರಾಯಣ ಬಿ ಅವರ ಸುಪುತ್ರ.



**ಕು. ಲಕ್ಷಿತಾ ಜೈನ್**

**12ನೇ ತರಗತಿ, ಶೇ 90**

ಶ್ರೀಮತಿ ಬಬಿತಾ ಜೈನ್ ಮತ್ತು ಶ್ರೀ ಜಿನೇಂದ್ರ ಜೈನ್ ಅವರ ಸುಪುತ್ರಿ



**ಕು. ಅನಿರುದ್ ಆಚಾರ್ಯ**

**10ನೇ ತರಗತಿ, ಶೇ 95.6**

ಶ್ರೀಮತಿ ಅರ್ಚನಾ ಕುರಂದವಾಡ ಮತ್ತು ಶ್ರೀ ಎ.ಆರ್. ಶ್ರೀನಿವಾಸ ಅವರ ಸುಪುತ್ರ.



**ಕು. ಚಂದ್ರು ಅರೇರಾ**

**10ನೇ ತರಗತಿ, ಶೇ 91.98**

ಶ್ರೀಮತಿ ಜ್ಯೋತಿಶ್ರೀ ಮತ್ತು ಶ್ರೀ ಈಶ್ವರಲಿಂಗ ಅರೇರಾ ಅವರ ಸುಪುತ್ರ.

**2022–23 ರ ಶೈಕ್ಷಣಿಕ ವರ್ಷದಲ್ಲಿ 10ನೇ ಮತ್ತು 12 ನೇ ತರಗತಿಯಲ್ಲಿ ಶೇ 90ಕ್ಕೂ ಹೆಚ್ಚು ಅಂಕಗಳನ್ನು ಪಡೆದ ಸಂಘದ ಸದಸ್ಯರ ಹೆಮ್ಮೆಯ ಈ ಎಲ್ಲಾ ಪ್ರತಿಭಾವಂತ ಮಕ್ಕಳಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು**

## ಜೆಎಸ್‌ಎಸ್ ಎ.ಟಿ.ಇ. ನೋಯ್ಡಾದಲ್ಲಿ ಸಾಣೇಹಳ್ಳಿ ಶ್ರೀ ಶಿವಕುಮಾರ ಕಲಾ ಸಂಘದವರಿಂದ ನೃತ್ಯರೂಪಕ ಪ್ರಸ್ತುತಿ

ನೋಯ್ಡಾದಲ್ಲಿರುವ ಜೆಎಸ್‌ಎಸ್ ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಶನ್‌ನ ಸಭಾಂಗಣದಲ್ಲಿ ದಿ. 07.08.2023 ರಂದು ಸಾಣೇಹಳ್ಳಿ ಶ್ರೀ ತರಳಬಾಳು ಶಾಖಾಮಠದ ಪಟ್ಟಾಧ್ಯಕ್ಷರಾದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಕೃಪಾ ಪೋಷಿತ ಶ್ರೀ ಶಿವಕುಮಾರ ಕಲಾಸಂಘದ 24 ಕಲಾವಿದರಿಂದ ಪ್ರಸ್ತುತಿಗೊಂಡ ಬಸವಣ್ಣನವರ ವಚನಾಧಾರಿತ 'ತುಮಾರೆ ಸಿವಾ ಔರ್ ಕೊಯೀ ನಹೀ ಹೈ,' ನೃತ್ಯರೂಪಕವು ಉಪಸ್ಥಿತರಿದ್ದ ಸಂಸ್ಥೆಯ ಹಿರಿಯ ಆಡಳಿತ ಮಂಡಳಿ ಸದಸ್ಯರು, ಅಧಿಕಾರಿಗಳು, ಪ್ರಾಧ್ಯಾಪಕರು, ಅಧ್ಯಾಪಕವೃಂದ ಮತ್ತು ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ವಿದ್ಯಾರ್ಥಿಗಳು ಮತ್ತು ಸ್ಥಳೀಯರ ಮೆಚ್ಚುಗೆಗೆ ಪಾತ್ರವಾಯಿತು. ನೃತ್ಯ ರೂಪಕದ ನಂತರ ಪ್ರೇಕ್ಷಕರೊಂದಿಗೆ ನಡೆದ ಸಂವಾದದಲ್ಲಿ ಈ ಕಲಾ ಸಂಘದ ಪೋಷಕರಾದ ಹಿರಿಯ ರಂಗಕರ್ಮಿ ಶ್ರೀ ಶ್ರೀನಿವಾಸ ಜಿ ಕಪ್ಪಣ್ಣ ಮತ್ತು ಅವರ ಸುಪುತ್ರಿ ನೃತ್ಯ ರೂಪಕದ ನಿರ್ದೇಶಕಿ, ಕೊರಿಯೋಗ್ರಾಫರ್ ಶ್ರೀಮತಿ ಸ್ನೇಹಾ ಕಪ್ಪಣ್ಣ ಭಾಗವಹಿಸಿದ್ದರು. ಅವರನ್ನು ಮತ್ತು ನೃತ್ಯ ಕಲಾವಿದೆಯರನ್ನು ಜೆಎಸ್‌ಎಸ್ ಎ ಟಿ ಇ ಮತ್ತು ಜೆಎಸ್‌ಎಸ್ ವಿದ್ಯಾಪೀಠದ ವತಿಯಿಂದ, ಗೌರವಿಸಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಜೆಎಸ್‌ಎಸ್ ಸಂಸ್ಥೆಯ ಪ್ರಾಂಶುಪಾಲರಾದ ವಿಂಗ್ ಕಮಾಂಡರ್ (ನಿ) ಡಾ. ಅಮರ್‌ಜಿತ್ ಸಿಂಗ್ ಮತ್ತು ಉಪ ಪ್ರಾಂಶುಪಾಲೆ ಶ್ರೀಮತಿ ಮಮತಾ ಟಿ.ಜಿ., ರಿಜಿಸ್ಟ್ರಾರ್ ಡಾ. ಸಿದ್ದಯ್ಯ ಶಿರೂರ್, ಡೀನ್ ಅಕಾಡೆಮಿಕ್ಸ್ ಡಾ. ಆರ್.ಎಸ್. ಜಗದೀಶ್, ವರಿಷ್ಠ ಲೈಯಸನ್ ಅಧಿಕಾರಿ ಶ್ರೀ ರಾಜಣ್ಣ, ಅಕೌಂಟ್ಸ್



ಆಫೀಸರ್, ಶ್ರೀ ಮನೋಜ್, ತಾಂತ್ರಿಕ ಸಂಸ್ಥೆಯ ಅಧ್ಯಾಪಕರಾದ ಶ್ರೀ ಸುರೇಶ್ ದೇವರು ಮತ್ತು ಶ್ರೀ ಎಲ್ ಶಿವಣ್ಣ ವೇದಿಕೆಯಲ್ಲಿದ್ದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಅವರ ಪತ್ನಿ ಶ್ರೀಮತಿ ಶೋಭಾ ನಾಗರಾಜ್, ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಕೆ.ಎಸ್. ಮೂರ್ತಿ ಮತ್ತು ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ಕಲಾತ್ಮಕ ನಿರ್ದೇಶಕಿ ಶ್ರೀಮತಿ ಮಿತಾ ಮಿಶ್ರ ಅವರು ಕಲಾ ತಂಡದ ಸದಸ್ಯರಿಗೆ ಹಾಗು ನೃತ್ಯ ಕಲಾವಿದೆಯರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

***ಜೆಎಸ್‌ಎಸ್‌ಎಟಿಇ / ಅಭಿಮತ ವರದಿ***

## ದೆಹಲಿ ತುಳು ಸಿರಿಯಿಂದ ಆಟಿಡೊಂಜಿ ದಿನ ಕಾರ್ಯಕ್ರಮ



ನವದೆಹಲಿಯ ಲೋಧಿ ಎಸ್ಟೇಟ್‌ನಲ್ಲಿರುವ ದೆಹಲಿ ಕನ್ನಡ ಶಾಲೆಯ ಹೊರಾಂಗಣದಲ್ಲಿ ಇತ್ತೀಚೆಗೆ ದೆಹಲಿ ತುಳುಸಿರಿ ಅದ್ದೂರಿಯಾಗಿ ಆಟಿಡೊಂಜಿ ದಿನ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಕೇಂದ್ರ ಸರಕಾರದ ನೀರಾವರಿ ಆಯೋಗದ ಹಿರಿಯ ಅಧಿಕಾರಿ ಮೂಲತಃ ಮಂಗಳೂರಿನ ಕುಳಾಯಿಯವರಾದ ಶ್ರೀಮತಿ ಭಾಗೀರಥಿ ಅವರು ಹೊರಾಂಗಣದಲ್ಲಿ ಸಿದ್ದವಾದ ಒಲೆಯ ಮೇಲಿದ್ದ ಕುದಿಯುವ ನೀರಿಗೆ ಕುಚ್ಚಲಕ್ಕಿಯನ್ನು ಹಾಕುವ ಮೂಲಕ ಸಾಂಪ್ರಾದಾಯಿಕ ಶೈಲಿಯಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾಜಿ ಮುಖ್ಯಮಂತ್ರಿ, ಮಾಜಿ ಕೇಂದ್ರ ಸಚಿವ, ಪ್ರಸ್ತುತ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಸಂಸದರಾದ ಶ್ರೀ ಡಿ.ವಿ. ಸದಾನಂದ ಗೌಡರು ಮಾತನಾಡಿ ಎಲ್ಲಿ ಹೋದರೂ ಸ್ವಂತಿಕೆಯನ್ನು ಉಳಿಸಿಕೊಂಡು ಬದುಕುವವರು ತುಳುವರು. ಹಾಗಾಗಿಯೇ ನಮ್ಮ ಭಾಷೆ, ಆಚಾರ ವಿಚಾರಗಳು ಬದಲಾಗದೇ ಮೂಲ ಸಂಸ್ಕೃತಿಯಲ್ಲಿಯೇ ಸಾಗುತ್ತಿದೆ. ನಾನೊಬ್ಬ ತುಳುನಾಡಿನವನಾಗಿ ಈ ಕಾರ್ಯಕ್ರಮದ ಮೂಲಕ ನಿಮ್ಮ ಜೊತೆ ಸೇರುವಂತಾಗಿದ್ದು ನನ್ನ ಸೌಭಾಗ್ಯ ಎಂದರು.

ಕಾರ್ಯಕ್ರಮದಲ್ಲಿ ಜೆಎನ್‌ಯುನ ಅರ್ಥಶಾಸ್ತ್ರ ಪ್ರಾಧ್ಯಾಪಕ ಡಾ. ರಮೇಶ್ ಸಾಲಿಯಾನ್, ದೆಹಲಿ ತುಳುಸಿರಿ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಶ್ರೀ ಶ್ರೀಹರಿ, ಶಾಲೆಯ ಪ್ರಾಂಶುಪಾಲ ಶ್ರೀ ಪ್ರಶಾಂತ್ ಶೆಟ್ಟಿ, ದೆಹಲಿ ತುಳು ಸಿರಿ ಪದಾಧಿಕಾರಿಗಳು, ಸದಸ್ಯರು, ಶಿಕ್ಷಕ, ಶಿಕ್ಷಕಿಯೇತರರು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಂತರ ಮನೆಯಲ್ಲಿ ತಯಾರಿಸಿದ ಆಟಿ ಮಾಸದ 36 ಬಗೆಯ ವಿಶೇಷ ಖಾದ್ಯಗಳನ್ನು ಸುಮಾರು ಇನ್ನೂರಕ್ಕು ಹೆಚ್ಚು ತುಳು ಬಾಂಧವರು ಸವಿದರು.

***ಅರವಿಂದ ಬಿಜೈ***

## ದೆಹಲಿ ಕನ್ನಡ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ



ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಆಗಸ್ಟ್ 15,2023 ರಂದು ಸ್ವಾತಂತ್ರ್ಯೋತ್ಸವವನ್ನು ಬಹಳ ಸಂಭ್ರಮದಿಂದ ಆಚರಿಸಲಾಯಿತು. ಮುಖ್ಯ ಅತಿಥಿಯಾಗಿ ಗ್ರೂಪ್ ಕ್ಯಾಪ್ಟನ್ ಸಂಜಯ್ ದೇಸಾಯಿ ಭಾಗವಹಿಸಿ ರಾಷ್ಟ್ರಧ್ವಜಾರೋಹಣವನ್ನು ನೆರವೇರಿಸಿ ಮಾತನಾಡುತ್ತಾ ವೈವಿಧ್ಯತೆಯೇ ಈ ದೇಶದ ಸಂಪತ್ತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತವು ಇದೇ ಕಾರಣದಿಂದ ಗುರುತಿಸಿಕೊಂಡಿದೆ. ವೈವಿಧ್ಯಮಯ ಸಂಸ್ಕೃತಿಯಿದ್ದರೂ ಏಕತೆಯನ್ನು ಸಾಧಿಸಿದ, ಮಾನವತೆಯನ್ನು ಪ್ರಧಾನ ಧರ್ಮವಾಗಿಸಿದ ನಮ್ಮ ಭವ್ಯಭಾರತವು ಇಂದು ವಿಶ್ವಗುರುವಿನ ಸ್ಥಾನಮಾನ ಪಡೆದಿದೆ, ಭಾರತೀಯರು ಆಚರಿಸುವ ಎಲ್ಲ ಹಬ್ಬಗಳಿಗಿಂತ ದೊಡ್ಡ ಹಬ್ಬ ಸ್ವಾತಂತ್ರ್ಯ ದಿನಾಚರಣೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ದೇಶಭಕ್ತರನ್ನು ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ ಎಂದರು.

ಬಾಗಲಕೋಟೆಯ ಜಿಲ್ಲೆಯ ಜಮಖಂಡಿ ತಾಲೂಕಿನ ಪ್ರಾಥಮಿಕ ಶಾಲಾ ನಿವೃತ್ತ ಶಿಕ್ಷಕ ಶಿವಲಿಂಗಯ್ಯ ಗುರುಪಾದಯ್ಯ ಹಿರೇಮಠ ಅವರು ಗೌರವ ಉಪಸ್ಥಿತರಿದ್ದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು, ಉಪಾಧ್ಯಕ್ಷರು, ಗೌರವ ಕಾರ್ಯದರ್ಶಿ, ಆಡಳಿತ ಮಂಡಳಿ ಸದಸ್ಯರು, ಪ್ರಾಂಶುಪಾಲರು, ಉಪ ಪ್ರಾಂಶುಪಾಲೆ, ಶಿಕ್ಷಕ–ಶಿಕ್ಷಕೇತರ ವೃಂದದವರು, ವಿದ್ಯಾರ್ಥಿಗಳು, ಪೋಷಕರು ಉಪಸ್ಥಿತರಿದ್ದರು.

***ಅರವಿಂದ ಬಿಜೈ***



ದಿನಾಂಕ 01.08.2023 ರಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಶ್ರೀ ಶಿವಕುಮಾರ ಕಲಾ ಸಂಘ ಸಾಣೇಹಳ್ಳಿ ಪ್ರಾಯೋಜಿತ ವಚನ ಸಂಸ್ಕೃತಿ ಅಭಿಯಾನ ತುಮಾರೇ ಸಿವಾ ಔರ್ ಕೋಹಿ ನಹಿ ನೃತ್ಯರೂಪಕ ಪ್ರದರ್ಶನಗೊಂಡಿತು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಕೇಂದ್ರ ಸರ್ಕಾರದ ಮಾಜಿ ಸಚಿವರು, ಸಂಸದರಾದ ಶ್ರೀ ಜಿ.ಎಂ. ಸಿದ್ದೇಶ್ವರ, ಕಲ್ಬುರ್ಗಿ ಲೋಕಸಭಾ ಕ್ಷೇತ್ರದ ಸಂಸದರಾದ ಡಾ. ಉಮೇಶ್ ಜಿ. ಜಾಧವ್, ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು, ಪ್ರಾಂಶುಪಾಲರು, ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಡ್ಯಾರೆಲ್ ಜೆಸಿಕಾ ಫೆರ್ನಾಂಡಿಸ್ ಅವರಿಗೆ-2023ನೇ ಸಾಲಿನ ದೆಹಲಿ ರಾಜ್ಯ ಮಟ್ಟದ ಶಿಕ್ಷಕ ಪ್ರಶಸ್ತಿ





ಜೀವನೋಪಾಯಕ್ಕಾಗಿ ಮಂಗಳೂರಿನಿಂದ ದೆಹಲಿಗೆ ಬಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ನಡೆಸುವ, ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಗೆ ಅಧ್ಯಾಪಕಿಯಾಗಿ ಸೇರಿದ ಡ್ಯಾರೆಲ್ ಜೆಸಿಕಾ ಫೆರ್ನಾಂಡಿಸ್, ತಮ್ಮ ಶಾಲೆ, ದೆಹಲಿ ಕನ್ನಡಿಗರು ಮಾತ್ರವಲ್ಲ ಕರ್ನಾಟಕವೇ ಹೆಮ್ಮೆ ಪಡುವಂತೆ ಮಾಡಿ, 2023ನೇ ಸಾಲಿನ ದೆಹಲಿಯ ರಾಜ್ಯ ಮಟ್ಟದ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಸೆಪ್ಟಂಬರ್ 5, 2023 ರ ಶಿಕ್ಷಕ ದಿನಾಚರಣೆಯಂದು ದೆಹಲಿಯ ಐಎನ್ಎ ಕಾಲೋನಿಯ ತ್ಯಾಗರಾಜ ಸ್ಟೇಡಿಯಂನಲ್ಲಿ ನಡೆದ ಭವ್ಯ ಸಮಾರಂಭದಲ್ಲಿ ದೆಹಲಿಯ ಮುಖ್ಯಮಂತ್ರಿ ಶ್ರೀ ಅರವಿಂದ ಕೇಜರಿವಾಲ್ ಅವರಿಂದ ಪ್ರಶಸ್ತಿ ಸ್ವೀಕರಿಸಿದ ಡ್ಯಾರೆಲ್ ಅವರಿಗೆ ತಮ್ಮ ಸೇವಾ ಅವಧಿಯ ಮೊದಲ ಹತ್ತೇ ವರ್ಷಗಳಲ್ಲಿ ಈ ಪ್ರಶಸ್ತಿ ಸಂದಿರುವುದು ಗಮನಾರ್ಹ. ದೆಹಲಿಯ ಶಿಕ್ಷಣ ಸಚಿವೆ ಶ್ರೀಮತಿ ಆತಿಶಿ ಮಾರ್ಲೇನಾ ಹಾಗೂ ಇತರ ಗಣ್ಯರ ಸಮ್ಮುಖದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ.

16 ಜುಲೈ 2013ರಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಸೇರಿದ ಡ್ಯಾರೆಲ್ ಜೆಸಿಕಾ, ಕಳೆದ ಹತ್ತು ವರ್ಷಗಳಲ್ಲಿ ಮಾಡಿದ ಸಾಧನೆ, ಏರಿದ ಎತ್ತರ ಅಸದೃಶವಾದುದು. ಮಂಗಳೂರಿನ ಸೈಂಟ್ ಎಲೋಶಿಯಸ್ ಕಾಲೇಜಿನಲ್ಲಿ ಬಿ.ಕಾಂ ಪದವಿ ಪಡೆದು, ಮಂಗಳೂರು ವಿಶ್ವವಿದ್ಯಾಲಯದಿಂದ ಬಿಪಿಎಡ್ ಮತ್ತು ಎಂಪಿಎಡ್‌ನಲ್ಲಿ ದ್ವಿತೀಯ ರ್‍ಯಾಂಕ್ ಗಳಿಸಿದ ಡ್ಯಾರೆಲ್, 2011 ರಲ್ಲಿ ಜೈಪುರದಲ್ಲಿ ನಡೆದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಕುಸ್ತಿ ಪಂದ್ಯದಲ್ಲಿ ಭಾಗವಹಿಸಿದ್ದರು. ಇವರ ಪ್ರತಿಭೆಯನ್ನು ಗುರುತಿಸಿ, ದೆಹಲಿ ಕನ್ನಡ ಶಾಲೆಯಲ್ಲಿ ಫಿಜಿಕಲ್ ಎಜ್ಯುಕೇಷನ್ ಟೀಚರ್ (PET) ಆಯ್ಕೆ ಮಾಡುವಲ್ಲಿ ಶಿಕ್ಷಣ ಸಂಸ್ಥೆಯ ಮಾಜಿ ಅಧ್ಯಕ್ಷರಾದ ಶ್ರೀ ಸರವು ಕೃಷ್ಣ ಭಟ್‌ರವರ ಕೊಡುಗೆ ಸ್ಮರಣಾರ್ಹ.

ದೆಹಲಿ ಕನ್ನಡ ಶಾಲೆಯಲ್ಲಿ ಸಮರ್ಥ ಫಿಜಿಕಲ್ ಎಜ್ಯುಕೇಶನ್ ಟೀಚರ್ ಆಗಿರುವುದರ ಜೊತೆಗೆ ಅಸೋಸಿಯೇಟ್ ಎನ್‌ಸಿಸಿ ಆಫೀಸರ್ ಆಗಿಯೂ ಕಾರ್ಯ ನಿರ್ವಹಿಸುತ್ತಿರುವ ಡ್ಯಾರೆಲ್, 2014 ರಲ್ಲಿ ಎನ್‌ಸಿಸಿಯಲ್ಲಿ ಪಿಆರ್‌ಸಿಎನ್ ಕೋರ್ಸ್‌ನಲ್ಲೂ ಬೆಸ್ಟ್ ಡ್ರಿಲ್‌ಗಾಗಿ ಬೆಳ್ಳಿ ಪದಕ ಮತ್ತು ಭಾರತದಾದ್ಯಂತದ ಕಮಾಂಡಿಂಗ್ ಆಫೀಸರ್‌ಗಳ ಪ್ಯಾರೇಡ್ ಕಮಾಂಡಿಂಗ್‌ನಲ್ಲಿ ಚಿನ್ನದ ಪದಕವನ್ನು ಗೆದ್ದಿದ್ದಾರೆ. ದೆಹಲಿಯ ಶಿಕ್ಷಣ ನಿರ್ದೇಶನಾಲಯದ ಕೇಂದ್ರ ಮತ್ತು ಹೊಸದೆಹಲಿ ವಲಯದ ಜೋನ್–26 ರ ಸ್ಪೋರ್ಟ್ಸ್ ಸೆಕ್ರೆಟರಿ ಆಗಿ ಸಮರ್ಥವಾಗಿ ಕಾರ್ಯ ನಿರ್ವಹಿಸಿ ನಿರ್ದೇಶನಾಲಯದಿಂದ ಎಕ್ಸಲೆನ್ಸ್ ಅವಾರ್ಡ್ ಪಡೆದಿದ್ದಾರೆ. ಜಿಲ್ಲಾ ಮಟ್ಟದಿಂದ ಶ್ಲಾಘನೆ, 2022 ಮತ್ತು 2023ರಲ್ಲಿ ಶಿಕ್ಷಣ ಇಲಾಖೆಯ ಜೋನ್ 26ರ ಕ್ಷೇತ್ರೀಯ ಕ್ರೀಡಾ ಚಟುವಟಿಕೆಗಳ ಕೊಡುಗೆಗಾಗಿ 'ಶ್ಲಾಘನೆಯ ಪ್ರಮಾಣ ಪತ್ರ' ಪಡೆದ ದೆಹಲಿ ಕನ್ನಡ ಶಾಲೆಯ ಹೆಮ್ಮೆ ಶಿಕ್ಷಕಿ ಇವರು.



ವೈಯಕ್ತಿಕ ಸಾಧನೆಯಷ್ಟೇ ಅವರ ಗುರಿಯಲ್ಲ. ಬದಲಾಗಿ ಪ್ರಾಮಾಣಿಕವಾಗಿ ಶಾಲೆಯನ್ನು, ಶಿಸ್ತನ್ನು ಕಾಪಾಡುವಲ್ಲಿ ಸಹೋದ್ಯೋಗಿಗಳಿಗೆ ಸದಾ ಸಹಾಯ ಮಾಡುವ ಡ್ಯಾರೆಲ್ ಜೆಸಿಕಾ, ತಮ್ಮ ಸಹೋದ್ಯೋಗಿ, ಇನ್ನೊಬ್ಬ ಫಿಜಿಕಲ್ ಎಜ್ಯುಕೇಶನ್ ಟೀಚರ್ (PET), ಶ್ರೀ ಎನ್. ಶಿವರಾಮ ಅವರ ಜೊತೆಗೂಡಿ ಮಕ್ಕಳನ್ನು ತರಬೇತುಗೊಳಿಸಿದ್ದರಿಂದಲೇ, ಕನ್ನಡ ಶಾಲೆಯ ಮಕ್ಕಳು ದೆಹಲಿಯಲ್ಲಿ ಕ್ರೀಡಾ ಕ್ಷೇತ್ರದಲ್ಲಿಯೂ ಒಳ್ಳೆಯ ಹೆಸರು ತರುವಲ್ಲಿ ಯಶಸ್ವಿಯಾಗಿದ್ದಾರೆ. ಶಾಲೆಯ ಮಕ್ಕಳಿಗೆ 11 ಪ್ರಥಮ, 14 ದ್ವಿತೀಯ, 15 ತೃತೀಯ ಬಹುಮಾನ ಲಭಿಸಿದೆ. ಖೋಖೋ, ಕಬಡ್ಡಿ, ಥ್ರೋಬಾಲ್, ಅತ್ಲೆಟಿಕ್ಸ್, ಟೇಬಲ್ ಟೆನ್ನಿಸ್, ಯೋಗಾಸನ ಮತ್ತು ಮಾರ್ಷ್‌ಲ್ ಆರ್ಟ್ಸ್‌ನಲ್ಲಿ ದೆಹಲಿ ಕನ್ನಡ ಶಾಲೆಯ ಮಕ್ಕಳು ವಿಜೇತರಾಗುವಲ್ಲಿ ಡ್ಯಾರೆಲ್ ಜೆಸಿಕಾ ಅವರ ಪರಿಶ್ರಮ ಅಪಾರವಾಗಿದೆ.

2022–23ರಲ್ಲಿ ಒಟ್ಟಾರೆಯಾಗಿ ಬಾಲಕಿಯರ ವಿಭಾಗದಲ್ಲಿ ದ್ವಿತೀಯ ಮತ್ತು ಬಾಲಕರ ವಿಭಾಗದಲ್ಲಿ ತೃತೀಯ ಸ್ಥಾನ ದೆಹಲಿ ಕನ್ನಡ ಶಾಲೆಗೆ ಲಭಿಸಿದೆ. ಕಳೆದ ಹಲವಾರು ವರ್ಷಗಳಿಂದ ಕನ್ನಡ ಶಾಲೆ ಕ್ರೀಡಾ ಕ್ಷೇತ್ರದಲ್ಲಿ ದೆಹಲಿಯಲ್ಲಿ ತನ್ನ ಛಾಪು ಮೂಡಿಸಿದೆ.

ದೆಹಲಿ ಕನ್ನಡ ಶಾಲೆಯಲ್ಲಿ ಅವರ ಪ್ರಯತ್ನಕ್ಕೆ ತಮ್ಮ ಬೆಂಬಲ ಹಾಗೂ ಪ್ರೋತ್ಸಾಹ ನೀಡುತ್ತಿರುವ ಅವರ ಸಹೋದ್ಯೋಗಿಗಳು, ಪ್ರಾಂಶುಪಾಲರು, ಮ್ಯಾನೇಜರ್, ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಮ್ಯಾನೇಜಿಂಗ್ ಕಮಿಟಿಯ ಎಲ್ಲ ಸದಸ್ಯರು ಸಹ ಅಭಿನಂದನೆಗೆ ಪಾತ್ರರು.

ಅವರ ಸಾಧನೆಯ ಇನ್ನೊಂದು ಮಜಲು ಸಹ ಇದೆ. ಶ್ರೀಮತಿ ಡ್ಯಾರೆಲ್ ಜೆಸಿಕಾ ಫೆರ್ನಾಂಡಿಸ್ ಒಬ್ಬ ಉತ್ತಮ ವಾಯ್ಸ್ ಓವರ್ ಆರ್ಟಿಸ್ಟ್, ಕೋವಿಡ್–19 ಕಾಲರ್ ಟ್ಯೂನ್ ಅಥವಾ ರೇಡಿಯೋ ಹಾಗೂ ಟಿವಿಗಳಲ್ಲಿ ಬರುವ ಜಾಹೀರಾತುಗಳಲ್ಲಿ ಅವರ ಧ್ವನಿ ಕೇಳಿ ಬರುತ್ತಿರುವುದು ಅವರ ಕಲಾ ನೈಪುಣ್ಯತೆಗೆ ಸಾಕ್ಷಿ.

ಡ್ಯಾರೆಲ್ ಜೆಸಿಕಾ, ಇಂದು ಒಬ್ಬ ಉತ್ತಮ ಶಿಕ್ಷಕಿ, ಸಾಧಕಿ, ಕಲಾವಿದೆ ಮಾತ್ರವಲ್ಲ, ಕನ್ನಡಿಗರು ಹೆಮ್ಮೆ ಪಡುವಂತೆ ಮಾಡಿದ ಕನ್ನಡತಿ ಹಾಗು ಬಾಲಕಿಯರಿಗೆಲ್ಲ ಪ್ರೇರಣೆ.


2023ರ ಸಾಲಿನ ದೆಹಲಿ ರಾಜ್ಯ ಶಿಕ್ಷಕರ ಪ್ರಶಸ್ತಿಗೆ ಭಾಜನರಾದ ಶ್ರೀಮತಿ ಡ್ಯಾರೆಲ್ ಜೆಸಿಕಾ ಫೆರ್ನಾಂಡಿಸ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಮತ್ತು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.

***ಅಭಿಮತ ವರದಿ***

## 2023 ರ ಸಾಲಿನ ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿ ಪುರಸ್ಕೃತರು



**ಶ್ರೀಮತಿ ಸಪ್ನಾ ಅನಿಗೊಳ**



**ನಾರಾಯಣ ಪರಮೇಶ್ ಬಾಗ್ವತ್**

ಪ್ರತಿವರ್ಷ ಭಾರತ ಸರ್ಕಾರ ಕೊಡ ಮಾಡುವ ರಾಷ್ಟ್ರೀಯ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿ ಈ ಭಾರಿ ರಾಜ್ಯದ ಇಬ್ಬರು ಶಿಕ್ಷಕರಿಗೆ ದೊರೆತಿದೆ. ಬಾಗಲಕೋಟೆ ಜಿಲ್ಲೆಯ ಶ್ರೀಮತಿ ಸಪ್ನಾ ಅನಿಗೊಳ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ನಾರಾಯಣ ಪರಮೇಶ್ ಬಾಗ್ವತ್ ಅವರು ದೇಶದ ರಾಷ್ಟ್ರಪತಿಗಳಿಂದ 2023ರ ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿಗೆ ಭಾಜನರಾಗಿದ್ದಾರೆ. **ಇವರಿಗೆ ದೆಹಲಿ ಕರ್ನಾಟಕ ಸಂಘ ಮತ್ತು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.**

Delhi Karnataka Sangha Abhimata
Sept -2023, Vol. No.33, Issue No. 12, Price Rs.1/-
RNI Regn. No. 53405/91, DL-SW-01/4016/22-24
Date of Publication : Sept 8th / 9th, Posting Date : 10th / 11th, Total Pages-28 Monthly-Language Kannada, POSTED AT RMS DELHI-110006
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Chandrashekara N.P





ದೆಹಲಿ ಕರ್ನಾಟಕ ಸಂಘದಲ್ಲಿ ಪ್ರತಿ ವಾರಾಂತ್ಯ ನಿರಂತರವಾಗಿ ನಡೆಯುತ್ತಿರುವ ಕನ್ನಡ ಕಲಿಕಾ ಕೇಂದ್ರದಲ್ಲಿ ದೆಹಲಿ ಕನ್ನಡಿಗರ ಮಕ್ಕಳಿಗೆ ಶ್ರೀಮತಿ ರೂಪಶ್ರೀ ನರಸಿಂಹಮೂರ್ತಿಯವರು ನಿರಂತರವಾಗಿ ಕನ್ನಡ ಕಲಿಸುತ್ತಿದ್ದಾರೆ. ಸುಮಾರು 30 ಕ್ಕೂ ಹೆಚ್ಚು ಮುದ್ದಿನ ಮಕ್ಕಳು ಈ ಕಲಿಕಾ ಕೇಂದ್ರದಲ್ಲಿ ಬಹಳ ಉತ್ಸಾಹ ಮತ್ತು ಆಸಕ್ತಿಯಿಂದ ಕನ್ನಡ ಅಭ್ಯಾಸ ಮಾಡುತ್ತಿದ್ದಾರೆ. ಈ ಪುಟಾಣಿ ಮಕ್ಕಳಿಗೆ ಮತ್ತು ಶ್ರೀಮತಿ ರೂಪಶ್ರೀ ನರಸಿಂಹ ಮೂರ್ತಿಯವರಿಗೆ ಹಾರ್ದಿಕ ಅಭಿನಂದನೆಗಳು.



ನವದೆಹಲಿಯ ಲಾಜಪತನಗರ ಸಮೀಪವಿರುವ ಶ್ರೀನಿವಾಸಪುರಿ ಯಲ್ಲಿರುವ ಸತ್ಯ ಜೀವನ ಕುಷ್ಠ ರೋಗ ಆಶ್ರಮದಲ್ಲಿರುವ ಕನ್ನಡಿಗರ ಮಕ್ಕಳಿಗೆ ದೆಹಲಿ ಕರ್ನಾಟಕ ಸಂಘದ ವತಿಯಿಂದ ಪ್ರತಿ ವಾರಾಂತ್ಯ ಕನ್ನಡ ಕಲಿಕಾ ತರಗತಿ ನಡೆಸಲಾಗುತ್ತಿದೆ. ಈ ಕಲಿಕಾ ಕೇಂದ್ರದಲ್ಲಿ ಸುಮಾರು 41 ಮಕ್ಕಳು ಕನ್ನಡ ಅಭ್ಯಾಸ ಮಾಡುತ್ತಿದ್ದಾರೆ. ಸಂಘದ ಜಂಟಿ ಕಾರ್ಯದರ್ಶಿ ಶ್ರೀಮತಿ ಸುಮಿತಾ ಮುರಗೊಡ ಈ ಮಕ್ಕಳಿಗೆ ಕನ್ನಡ ಕಲಿಸಿಕೊಡುತ್ತಿದ್ದಾರೆ. ಕನ್ನಡ ಕಲಿಯುತ್ತಿರುವ ಈ ಎಲ್ಲಾ ಪುಟಾಣಿ ಮಕ್ಕಳಿಗೆ ಮತ್ತು ಶ್ರೀಮತಿ ಸುಮಿತಾ ಮುರಗೊಡ ಅವರಿಗೆ ಹಾರ್ದಿಕ ಅಭಿನಂದನೆಗಳು.